ಸಂಪುಟ: 05 ಸಂಚಿಕೆ: 293 ಪುಟಗಳು: 08 ಮಂಗಳವಾರ 06 ಜನವರಿ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ವಿನಮ್ರ ಕಳೆದುಕೊಳ್ಳದೆ ನೀವು ಗೆದ್ದರೆ ಖುಷಿಯಾಗುತ್ತೆ. ಆದರೆ ಭಾರಿ ಪೈಪೋಟಿ ನಡೆಸಿ, ಹಲವು ತ್ಯಾಗಗಳನ್ನು ಮಾಡಿ ಸಾಧಿಸುವ ಗೆಲುವು ಜೀವನುದುದ್ದಕ್ಕೂ ನೆನಪಾಗಿರುತ್ತದೆ

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಸಿದ್ದರಾಮಯ್ಯ ಪರ್ಯಾಯ ಕಷ್ಟಸಾಧ್ಯ, ಯಶಸ್ವಿ ನಾಯಕತ್ವಕ್ಕೆ ಅವರು ಪ್ರತಿಬಿಂಬ


**ಹಾಡಿ ಹೊಗಳಿದ ಕೃಷ್ಣಾ ಭೈರೇಗೌಡ**

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರಿಗೆ ಪರ್ಯಾಯ ಕಷ್ಟಸಾಧ್ಯ. ಯಶಸ್ವಿ ನಾಯಕತ್ವಕ್ಕೆ ಅವರು ಪ್ರತಿಬಿಂಬ ಇದ್ದಂತೆ. ಹೀಗೆ ಸಿದ್ದರಾಮಯ್ಯ ಅವರನ್ನು ಹಾಡಿ ಹೊಗಳಿದ್ದು ಸಚಿವ ಕೃಷ್ಣಾ ಭೈರೇಗೌಡ. ಬೆಂಗಳೂರಿನಲ್ಲಿ ಸೋಮವಾರ ಮಾತನಾಡಿದ ಅವರು, ಸಿಎಂ ಕುರಿತಾಗಿ ಮೆಚ್ಚುಗೆಯ ಮಾತನ್ನಾಡಿದರು.

ಸಿದ್ದರಾಮಯ್ಯ ಅವರ ನಾಯಕತ್ವ ಬದಲಾವಣೆ ವಿಚಾರದಲ್ಲಿ ಹೇಳೋಕೆ ಏನಿಲ್ಲ. ಸಿದ್ದರಾಮಯ್ಯರಂತಹ ನಾಯಕರನ್ನ ಬೇರೆ ಪಕ್ಷದಲ್ಲೂ ಹೋಲಿಕೆ ಮಾಡಿ ನೋಡಿ ದೇವರಾಜ ಅರಸ್, ವೀರೆಂದ್ರ ಪಾಟೀಲ್ ಅವರ ಸಾಲಿನಲ್ಲಿ ನಿಲ್ಲುವವರು ಸಿದ್ದರಾಮಯ್ಯ. ಹಾಗಾಗಿ ಸಿದ್ದರಾಮಯ್ಯ ಅವರಿಗೆ ಪರ್ಯಾಯ ಕಷ್ಟಸಾಧ್ಯ ಎಂದರು.

ಬೇರೆಯವರಿಗೆ ಶಕ್ತಿ ಇಲ್ಲ ಅಂತಲ್ಲ. ಡಿಕೆ ಶಿವಕುಮಾರ್ ಅವರು ಸಂಘಟನೆ, ಗುರಿ ಇಟ್ಟಿರುವುದಲ್ಲಿ, ಪಕ್ಷ ಮುನ್ನಡೆಸುವುದರಲ್ಲಿ ಇದ್ದಾರೆ. ಇವರಿಬ್ಬರ ಕಾಂಬಿನೇಷನ್ ಬಹಳ ಅಪರೂಪವಾಗಿದೆ. ಸಿದ್ದರಾಮಯ್ಯ ರೀತಿಯ ನಾಯಕ ಕಾಂಗ್ರೇಸ್‌ನಲ್ಲಿ ಮಾತ್ರವಲ್ಲ, ಯಾವ ಪಕ್ಷದಲ್ಲೂ ಇಲ್ಲ. ಇದು ನಮಗೆಲ್ಲ ಗೌರವದ ವಿಚಾರ ಎಂದು ಸಿಎಂ ಸಿದ್ದರಾಮಯ್ಯ ಪರ ಸಚಿವ ಕೃಷ್ಣ ಭೈರೇಗೌಡ ಭರ್ಜರಿ ಬ್ಯಾಟಿಂಗ್ ಮಾಡಿದರು.



ರಾಜ್ಯದಲ್ಲಿ ಸುದೀರ್ಘ ಅವಧಿಯ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ದಾಖಲೆ ನಿರ್ಮಾಣ ಮಾಡುವ ವಿಚಾರವಾಗಿ ಮಾತನಾಡಿದ ಅವರು, ''ಕರ್ನಾಟಕದ ಇತಿಹಾಸದಲ್ಲಿ ಸಿಎಂ ಸಿದ್ದರಾಮಯ್ಯ ದಾಖಲೆ ಬರೆಯುತ್ತಿದ್ದಾರೆ. ಸಿದ್ದರಾಮಯ್ಯ ದಾಖಲೆ ಬರೆಯುವ ಆಡಳಿತ ನಿರ್ಮಿಸುತ್ತಿದ್ದಾರೆ. ಕೆ.ಸಿ ರೆಡ್ಡಿ, ಕೆಂಗಲ್ ಹನುಮಂತಯ್ಯ, ಎಸ್. ಎಂ ಕೃಷ್ಣ ಸೇರಿದಂತೆ ಹಲವರಿದ್ದಾರೆ. ದೇವರಾಜು ಅರಸು ಸುದೀರ್ಘವಾದ ಮುಖ್ಯಮಂತ್ರಿ ಆಗಿ ರಾಜ್ಯಕ್ಕೆ ಹೊಸ ದಿಕ್ಕು ಕೊಟ್ಟವರು. ಅದಕ್ಕೆ ಗೌರವ ತರುವ ರೀತಿಯಲ್ಲಿ ಸಿದ್ದರಾಮಯ್ಯ ಆಡಳಿತ ನೀಡಿದ್ದಾರೆ ಎಂದರು.

ಸಿದ್ದರಾಮಯ್ಯ ಆಡಳಿತದ ಅನುಭವ ಇರುವ ನಾಯಕ. ಜನ ಮನ್ನಣೆ, ಜನಮಾನಸ ನಾಯಕತ್ವ, ಆಡಳಿತದಲ್ಲೂ ಹಿಡಿತ ಹೊಂದಿರುವ ನಾಯಕ. ನಂ.1 ಆಗಿರುವ ಸಿದ್ದರಾಮಯ್ಯ ಸುದೀರ್ಘ ಆಡಳಿತಗಾರ ಎಂಬ ಇತಿಹಾಸ ನಿರ್ಮಿಸಿದ್ದಾರೆ. ಅವರಿಂದ ಬಹಳ ಕಲಿತಿದ್ದೇವೆ. ಕಳೆದ 22 ವರ್ಷಗಳಿಂದ ಸಿದ್ದರಾಮಯ್ಯ ಕೆಲಸ ನೋಡಿ ಎಷ್ಟೋ ಕಲಿತಿದ್ದೇನೆ ಎಂದರು. ತಾಯಿ ಹೃದಯದಿಂದ ಸಿದ್ದರಾಮಯ್ಯ ಅವರು ಕೆಲಸ ಮಾಡುವ ರೀತಿ ಕಲಿತಿದ್ದೇನೆ. ಆಡಳಿತ ಯಂತ್ರವನ್ನ ಹೇಗೆ ನಡೆಸಬೇಕು ಅಂತಲೂ ಕಲಿತಿದ್ದೇವೆ. ಅವರ ನಾಯಕತ್ವದ ಯಶಸ್ಸಿಗೆ ಮತ್ತೊಂದು ಪ್ರತಿಬಿಂಬ. ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಅವರ ನಡವಳಿಕೆ, ಆಡಳಿತ, ನಾಯಕತ್ವ ಮತ್ತಷ್ಟು ಜನರಿಗೆ ಸ್ಫೂರ್ತಿ ಆಗಲಿ ಎಂದರು.

ಸಚಿವ ಸಂಪುಟ ಪುನಾರಚನೆ ಕಗ್ಗಂಟು ಬಗೆಹರಿಯದ ವಿಚಾರವಾಗಿ ಇದೇ ಸಂದರ್ಭದಲ್ಲಿ ಮಾತನಾಡಿದ ಅವರು, ''ಅದರ ಬಗ್ಗೆ ಹೆಚ್ಚಿನ ಮಾಹಿತಿ ನನಗೆ ಇಲ್ಲ. ಡಿ.ಕೆ ಶಿವಕುಮಾರ್ ಪಕ್ಷದ ಅಧ್ಯಕ್ಷರು, ಕೇಂದ್ರದ ವರಿಷ್ಠರು ಇದ್ದಾರೆ. ಇವರ ನಡುವಿನ ಚರ್ಚೆ ಏನಾಗಿದೆ ಅನ್ನೋದು ಗೊತ್ತಿಲ್ಲ. ಇದರ ಕುರಿತು ಸೂಕ್ತ ಸಂದರ್ಭದಲ್ಲಿ ತೀರ್ಮಾನ ತೆಗೆದುಕೊಳ್ತಾರೆ. ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧ'' ಎಂದರು.

## ಪರಿಹಾರ ಬೋಧನೆ: ಮೊಬೈಲ್ ಫೋನ್‌ನಲ್ಲೇ ಮಕ್ಕಳಿಗೆ ಪಾಠ

• ಉದಯವಾಹಿನಿ, ಬೆಂಗಳೂರು

ಹೆಚ್ಚುವರಿ ಬೋಧನೆಯ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಶಾಲಾ ಅವಧಿಯ ನಂತರ ಮೊಬೈಲ್ ಫೋನ್ ಕರೆಯ ಮೂಲಕ ಪರಿಹಾರ ಬೋಧನೆ' ಮಾಡಬೇಕು ಎಂದು ರಾಜ್ಯ ಶಿಕ್ಷಣ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ಸರ್ಕಾರಿ ಶಾಲಾ ಶಿಕ್ಷಕರಿಗೆ ಸೂಚಿಸಿದೆ. ಹೆಚ್ಚುವರಿ ಬೋಧನೆ ಅಗತ್ಯವಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಬೇಕು. ನಾಲ್ಕು ವಿದ್ಯಾರ್ಥಿಗಳಿಗೆ ಒಂದು ಗುಂಪುಗಳನ್ನು ರಚಿಸಬೇಕು.

ಮುಖ್ಯವಾಗಿ 'ಗಣಕ ಗಣಿತ' ಕಾರ್ಯಕ್ರಮದ ಅಡಿಯಲ್ಲಿ ಗಣಿತ ಕಲಿಕೆಗೆ ವಿದ್ಯಾರ್ಥಿಗಳಿಗೆ ನೆರವು ನೀಡಬೇಕು. 3ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಮೂಲಭೂತ ಗಣಿತ ಕಲಿಸಲು ವಾರಕ್ಕೆ ಕನಿಷ್ಠ ಒಂದು ದಿನ ಮೊಬೈಲ್ ಫೋನ್ ಕರೆಯ ಮೂಲಕ ಪಾಠ ಮಾಡಬೇಕು. ಪ್ರತಿ ಸಂವಾದದ ಅವಧಿ ಕನಿಷ್ಠ 30ರಿಂದ 40 ನಿಮಿಷಗಳಿಗಿಂತ ಕಡಿಮೆ ಇರಬಾರದು ಎಂದು ಡಿಎಸ್‌ಇಆರ್‌ಟಿ ಸುತ್ತೋಲೆ ಹೊರಡಿಸಿದೆ. ದೂರವಾಣಿ ಮೂಲಕ ನಡೆದ ಪ್ರತಿಯೊಂದು ಪಾಠದ ವಿವರ, ಕರೆ ಅವಧಿ ಸೇರಿದಂತೆ ಎಲ್ಲಾ ಮಾಹಿತಿಯನ್ನು ಮುಖ್ಯ ಶಿಕ್ಷಕರಿಗೆ ನೀಡಬೇಕು. ಮುಖ್ಯ ಶಿಕ್ಷಕರು 'ವಿದ್ಯಾರ್ಥಿ ಸಾಮರ್ಥ್ಯ ಪತ್ತೆ ವ್ಯವಸ್ಥೆಯಲ್ಲಿ (ಎಸ್‌ಎಟಿಎಸ್)' ಅಪ್‌ಲೋಡ್ ಮಾಡಬೇಕು.

## ಮತ್ತೆ ಹೈಕೋರ್ಟ್ ಮೆಟ್ಟಿಲೇರಿದ ಹೋರಾಟಗಾರ ತಿಮರೋಡಿ

• ಉದಯವಾಹಿನಿ, ಬೆಂಗಳೂರು

ನನ್ನನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಗೆ ಒಂಬತ್ತು ತಿಂಗಳ ಕಾಲ ಗಡಿಪಾರು ಮಾಡಿರುವ ಸರ್ಕಾರದ ಕ್ರಮವನ್ನು ರದ್ದುಪಡಿಸಬೇಕು' ಎಂದು ಕೋರಿ ಸೌಜನ್ಯ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಮತ್ತೆ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದ್ದು, ಗೃಹ ಇಲಾಖೆ ಕಾರ್ಯದರ್ಶಿ, ಪುತ್ತೂರು ಉಪ ವಿಭಾಗಾಧಿಕಾರಿ, ಬಂಟ್ವಾಳ ಉಪವಿಭಾಗದ ಡಿವೈಎಸ್ಪಿ, ಬೆಳ್ತಂಗಡಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಅವರನ್ನು ಪ್ರತಿವಾದಿಗಳನ್ನಾಗಿ ಕಾಣಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆಗೆ ಧಕ್ಕೆ ತರುತ್ತಿರುವ ಆರೋಪದಡಿ ತಿಮರೋಡಿ ಅವರನ್ನು 2025ರ ಸೆಪ್ಟೆಂಬರ್ 18ರಂದು ಗಡಿಪಾರು ಮಾಡಿ ಆದೇಶಿಸಲಾಗಿತ್ತು. ಆ ಆದೇಶವನ್ನು ಹೈಕೋರ್ಟ್ 2025ರ ನವೆಂಬರ್ 17ರಂದು ರದ್ದುಪಡಿಸಿತ್ತು. ಅಂತೆಯೇ, ಪ್ರಕರಣವನ್ನು ಪುತ್ತೂರು ಉಪ ವಿಭಾಗಾಧಿಕಾರಿಗೆ ಹಿಂದಿರುಗಿಸಿದ್ದ ನ್ಯಾಯಪೀಠ, 'ತಿಮರೋಡಿ ವಿವರಣೆ ಪಡೆದು ನಂತರ ಹೊಸದಾಗಿ ಆದೇಶ ಮಾಡಬೇಕು' ಎಂದು ಉಪ ವಿಭಾಗಾಧಿಕಾರಿಗೆ ಆದೇಶಿಸಿತ್ತು.

## ಉಮರ್ ಖಾಲಿದ್ ಬೇಲ್ ಅರ್ಜಿ ತಿರಸ್ಕೃತ : ವೆಲ್ಕಂ ಟು ವಿಕಸಿತ್ ಭಾರತ್

• ಉದಯವಾಹಿನಿ, ಬೆಂಗಳೂರು

ಯುಎಪಿಎ ಕಾಯಿದೆ ಅಡಿಯಲ್ಲಿ ಬಂಧನದಲ್ಲಿರುವ ಉಮರ್ ಖಾಲಿದ್ ಮತ್ತು ಶಾರ್ಜೀಲ್ ಇಮಾಮ್ ಅವರ ಜಾಮೀನು ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯ ಸೋಮವಾರ (ಜ. 5) ತಿರಸ್ಕರಿಸಿದೆ. 2020ರ ದೆಹಲಿ ಗಲಭೆಗಳ ಪಿತೂರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರ ಬಂಧನವಾಗಿತ್ತು. ನ್ಯಾ. ಅರವಿಂದ್ ಕುಮಾರ್ ಮತ್ತು ನ್ಯಾ. ಎನ್.ವಿ.ಅಂಜಾರಿಯಾ ಅವರ ದ್ವಿಸದಸ್ಯ ಪೀಠ, ಈ ಪ್ರಕರಣದಲ್ಲಿನ ಇತರ ಐವರು ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿದೆ. ಉಮರ್ ಖಾಲಿದ್ ಬೇಲ್ ಅರ್ಜಿ ತಿರಸ್ಕೃತಗೊಂಡಿದ್ದಕ್ಕೆ ಕರ್ನಾಟಕ ಐಟಿ ಇಲಾಖೆಯ ಸಚಿವ ಪ್ರಿಯಾಂಕ್ ಖರ್ಗೆ, ಟ್ವೀಟ್ ಮೂಲಕ ಪರೋಕ್ಷ ಅಸಮಾಧಾನವನ್ನು ಹೊರಹಾಕಿದ್ದಾರೆ. ವಿಕಸಿತ್ ಭಾರತಕ್ಕೆ ಸ್ವಾಗತ, ಇಲ್ಲಿ ನಮ್ಮ ಹಕ್ಕುಗಳಿಗಾಗಿ ಧ್ವನಿ ಎತ್ತಿದರೆ ಜೈಲು ಶಿಕ್ಷೆಯಾಗುತ್ತದೆ, ಆದರೆ ಅತ್ಯಾಚಾರಿಗಳಿಗೆ ಸುಲಭವಾಗಿ ಜಾಮೀನು ದೊರೆಯುತ್ತದೆ' ಎನ್ನುವ ಒಕ್ಕಣೆಯನ್ನು ಹಾಕಿ, ಪ್ರಿಯಾಂಕ್ ಖರ್ಗೆ ಟ್ವೀಟ್ ಮಾಡಿದ್ದಾರೆ. ಅದಕ್ಕೆ ಪೋಸ್ಟರ್ ಒಂದನ್ನು ಹಾಕಿ, ಬೇಲ್ – ಕುಲದೀಪ್ ಸಿಂಗ್ ಸೆಂಗೂರ್, ಅಸಾರಾಮ್ ಬಾಪು, ಗುರ್ಮೀತ್ ರಾಮ್ ರಹೀಂ ಸಿಂಗ್, ಬ್ರಿಜ್ ಭೂಷಣ್ ಶರಣ್ ಸಿಂಗ್, ಈ ನಾಲ್ವರ ಹೆಸರು ಪೋಸ್ಟರ್ ನಲ್ಲಿದೆ.

**ರಷ್ಯಾದಿಂದ ತೈಲ ಖರೀದಿಸುವುದನ್ನು ಮುಂದುವರೆಸಿದರೆ, ಭಾರತ ಮತ್ತಷ್ಟು ಸುಂಕದ ಹೊರೆಗೆ ಒಳಗಾಗಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದು , ಈ ವಿಚಾರದಲ್ಲಿ ನನಗೆ ಬೇಸರವಿದೆ ಎಂಬುದು ಪ್ರಧಾನಿ ನರೇಂದ್ರ ಮೋದಿಗೆ ತಿಳಿದಿದೆ ಎಂದು ಹೇಳಿದರು. ಏರ್ ಫೋರ್ಸ್ ಒನ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಭಾರತ ರಷ್ಯಾದಿಂದ ತೈಲ ಖರೀದಿ ಮಾಡದೆ ನನ್ನನ್ನು ಸಂತೋಷವಾಗಿರಿಸುವುದು ಅಗತ್ಯ ಎಂದರು. ಪ್ರಧಾನಿ ಮೋದಿ ಒಳ್ಳೆಯ ಮನುಷ್ಯ. ನಾನು ಖುಷಿಯಾಗಿಲ್ಲ ಎಂಬುದು ಅವರಿಗೆ ಗೊತ್ತಿದೆ. ಅವರು ನನ್ನನ್ನು ಸಂತೋಷವಾಗಿರಿಸುವುದು ಮುಖ್ಯ. ಅವರು ವ್ಯಾಪಾರ ಮಾಡಬಹುದು. ನಾವು ತಕ್ಷಣವೇ ಸುಂಕ ಹೆಚ್ಚಿಸುತ್ತೇವೆ ಎಂದು ಟ್ರಂಪ್ ಎಚ್ಚರಿಕೆ ನೀಡಿದರು.**

## ಮತ್ತಷ್ಟು ಸುಂಕದ ಎಚ್ಚರಿಕೆ

# ಭಾರತ ಕಲ್ಕಿ ಬೇಡ ಧಮ್ಕಿ

## ಮತ್ತಷ್ಟು ಸುಂಕ ನಾನು ಸಂತೋಷವಾಗಿಲ್ಲ ಎಂಬುದು ಮೋದಿಗೆ ಗೊತ್ತು

**ವಾಷಿಂಗ್ಟನ್ :** ವೆನಿಜುವೆಲಾ ಮೇಲೆ ಅಮೆರಿಕದ ದಾಳಿಯಿಂದ ಜಾಗತಿಕ ತೈಲ ಸಮಸ್ಯೆಯನ್ನು ಮತ್ತೊಮ್ಮೆ ಭೌಗೋಳಿಕ ರಾಜಕೀಯದ ಮುಂಚೂಣಿಗೆ ತಂದಿದೆ. ವೆನಿಜುವೆಲಾ 303 ಬಿಲಿಯನ್ ಬ್ಯಾರೆಲ್ ಪ್ರಮಾಣದ ತೈಲ ನಿಕ್ಷೇಪಗಳನ್ನು ಹೊಂದಿದೆ. ಹೀಗಿದ್ದರೂ ಅಮೆರಿಕದ ನಿರ್ಬಂಧಗಳು ಮತ್ತು ಕಡಿಮೆ ಹೂಡಿಕೆಯಿಂದಾಗಿ ಉತ್ಪಾದನೆ ದಿನಕ್ಕೆ 1 ಮಿಲಿಯನ್ ಬ್ಯಾರೆಲ್‌ಗಳಿಗೆ ಇಳಿದಿದೆ. ವೆನಿಜುವೆಲಾ ವಿಶ್ವದ ಅತಿದೊಡ್ಡ ಸಾಬೀತಾದ



ತೈಲ ನಿಕ್ಷೇಪಗಳನ್ನು ಹೊಂದಿದೆ. ಇದು ಒಟ್ಟು ಜಾಗತಿಕ ತೈಲ ಪೂರೈಕೆಯ ಸರಿಸುಮಾರು ಶೇ.17ರಷ್ಟನ್ನು ಪ್ರತಿನಿಧಿಸುತ್ತದೆ ಎಂದು ಒಪೆಕ್ ದತ್ತಾಂಶಗಳು ತೋರಿಸುತ್ತವೆ.

ದೇಶೀಯ ಇಂಧನ ಭದ್ರತೆಗೆ ತನ್ನ ತೈಲ ಖರೀದಿ ಅತ್ಯಗತ್ಯ ಎಂದು ಭಾರತ ಸಮರ್ಥಿಸಿಕೊಂಡಿದ್ದರೂ, ರಷ್ಯಾದೊಂದಿಗಿನ ಭಾರತದ ಇಂಧನ ವ್ಯಾಪಾರದ ಬಗ್ಗೆ ವಾಷಿಂಗ್ಟನ್ ಹೆಚ್ಚಿನ ಪರಿಶೀಲನೆ ನಡೆಸುತ್ತಿರುವ ನಡುವೆ ಟ್ರಂಪ್ ಭಾರತಕ್ಕೆ ಹೊಸ ಎಚ್ಚರಿಕೆ ನೀಡಿದ್ದಾರೆ. ಟ್ರಂಪ್ ಮತ್ತು ಪ್ರಧಾನಿ ಮೋದಿ ದೂರವಾಣಿ ಸಂಭಾಷಣೆ ನಡೆಸಿದ ಕೆಲವೇ ವಾರಗಳ ಬಳಿಕ ಈ ಹೇಳಿಕೆ ಹೊರಬಿದ್ದಿದೆ. ಈ ಮಾತುಕತೆಯಲ್ಲಿ ಸುಂಕದ ಕುರಿತಾದ ಬಿಕ್ಕಟ್ಟಿನ ಹೊರತಾಗಿ ದ್ವಿಪಕ್ಷೀಯ ವ್ಯಾಪಾರ ಸಂಬಂಧಗಳ ಮಹತ್ವದ ಬಗ್ಗೆ ಉಭಯ ನಾಯಕರು ಚರ್ಚಿಸಿದ್ದರು. ಭಾರತ ಮತ್ತು ಅಮೆರಿಕದ ಅಧಿಕಾರಿಗಳು ದೀರ್ಘಕಾಲದ ವ್ಯಾಪಾರ ಬಿಕ್ಕಟ್ಟನ್ನು ಪರಿಹರಿಸುವ ಗುರಿ ಹೊಂದಿದ್ದು, ಮತ್ತೊಮ್ಮೆ ಹೊಸ ಸುತ್ತಿನ ಮಾತುಕತೆಗಳನ್ನು ಪ್ರಾರಂಭಿಸಿದ್ದಾರೆ.

ಮೋದಿ ಅವರೊಂದಿಗಿನ ಸಂಭಾಷಣೆಗೆ ಕೆಲವೇ ದಿನಗಳ ಮೊದಲು, ಟ್ರಂಪ್ ಭಾರತದ ಅಕ್ಕಿ ಆಮದಿನ ಮೇಲೆ ಹೊಸ ಸುಂಕ ವಿಧಿಸುವುದಾಗಿ ಬೆದರಿಕೆ ಹಾಕಿದ್ದರು. ಶ್ವೇತಭವನದ ದುಂಡುಮೇಜಿನ ಸಭೆಯಲ್ಲಿ ಅಮೆರಿಕದ ರೈತ ಪ್ರತಿನಿಧಿಯೊಬ್ಬರು ಭಾರತ, ಚೀನಾ ಮತ್ತು ಥೈಲ್ಯಾಂಡ್ ದೇಶಗಳು ಅಕ್ಕಿಯನ್ನು ಸುರಿಯುತ್ತಿವೆ ಎಂದು ಆರೋಪಿಸಿ ದೂರು ನೀಡಿದ್ದರು.

**ಮೆಕ್ಸಿಕೋವನ್ನು ಪ್ರಭಾವಿ ಡ್ರಗ್ಸ್ ಮಾಫಿಯಾ :** 'ಮೆಕ್ಸಿಕೋ ಅಧ್ಯಕ್ಷೆ ಕ್ಲೌಡಿಯಾ ಶಿನ್‌ಬಾಮ್ ಪರ್ಡೋ ಒಳ್ಳೆಯ ಮಹಿಳೆ. ಆದರೆ ಮೆಕ್ಸಿಕೋವನ್ನು ಆಕೆಯಲ್ಲ, ಪ್ರಭಾವಿ ಡ್ರಗ್ಸ್ ಮಾಫಿಯಾ ಮುನ್ನಡೆಸುತ್ತಿವೆ. ಮೆಕ್ಸಿಕೋ ವಿಚಾರದಲ್ಲಿ ಏನಾದರೂ ಕ್ರಮ ಕೈಗೊಳ್ಳಲೇಬೇಕಿದೆ' ಎಂದರು. 'ನಿಮ್ಮ ದೇಶದಲ್ಲಿರುವ ಡ್ರಗ್ ಮಾಫಿಯಾ ವಿರುದ್ಧ ನಾವೇ ಕ್ರಮ ಕೈಗೊಳ್ಳಬೇಕೇ ಎಂದು ನಾನು ಹಲವು ಬಾರಿ ಆಕೆಯನ್ನು ಕೇಳಿದ್ದೆ. ಆಗ ಆಕೆ ಬೇಡ... ಬೇಡ... ಅಂದಿದ್ದಳು' ಎಂದು ಇದೇ ವೇಳೆ ತಿಳಿಸಿದರು.

'ಇನ್ನು ಕ್ಯೂಬಾದ ಪರಿಸ್ಥಿತಿಯೂ ಚೆನ್ನಾಗಿಲ್ಲ. ಅಲ್ಲಿನ ಜನ ಹಲವು ವರ್ಷಗಳಿಂದ ಸಂಕಷ್ಟದಲ್ಲಿದ್ದಾರೆ. ಕ್ಯೂಬಾ ಒಂದು ವಿಫಲ ರಾಷ್ಟ್ರ. ನಾವು ಕ್ಯೂಬಾದ ಜನರಿಗೆ ನೆರವಾಗಲು ಬಯಸಿದ್ದೇವೆ' ಎಂದು ಟ್ರಂಪ್ ಮಾರ್ಮಿಕವಾಗಿ ನುಡಿದರು.




1 ರಷ್ಯಾದಿಂದ ತೈಲ ಖರೀದಿ ಮುಂದುವರೆಸಿದರೆ ಇನ್ನಷ್ಟು ಸುಂಕ ವಿಧಿಸುವುದಾಗಿ ಭಾರತಕ್ಕೆ ಟ್ರಂಪ್ ಎಚ್ಚರಿಕೆ

2 ಪ್ರಧಾನಿ ಮೋದಿ ಒಳ್ಳೆಯವರು ಎಂದು ಹೋಗಳುತ್ತಲೇ ಭಾರತದ ವ್ಯಾಪಾರ ನೀತಿಯ ಬಗ್ಗೆ ಟ್ರಂಪ್ ಬೇಸರ

3 ರಷ್ಯಾ ಆರ್ಥಿಕತೆ ದುರ್ಬಲವಾಗಿದೆ ಆದ್ರೆ, ವೆನುಜುವೆಲಾದ ಆರ್ಥಿಕತೆ ಅದಕ್ಕಿಂತ ಕೆಟ್ಟದಾಗಿದೆ ಎಂದು ಟ್ರಂಪ್ ಟೀಕೆ

## ರಷ್ಯಾದಿಂದ ತೈಲ ಖರೀದಿ ನಿಲ್ಲಿಸದಿದ್ದರೆ ಸುಂಕ ಏರಿಕೆ




**ರಷ್ಯಾ ಹಾಗೂ ಅಮೆರಿಕಾದ ತೈಲ ಖರೀದಿ ದತ್ತಾಂಶ ಸಂಗ್ರಹ**

ಈ ಹೇಳಿಕೆಗಳು, ಭಾರತವು ಅಮೆರಿಕದೊಂದಿಗೆ ನಡೆಯುತ್ತಿರುವ ಮಾತುಕತೆಗಳ ನಡುವೆ ತನ್ನ ತೈಲ ಆಮದು ವರದಿಗಳನ್ನು ಮರುಪರಿಶೀಲಿಸುತ್ತಿರುವ ಸಮಯದಲ್ಲಿ ಬಂದಿವೆ. ಐದು ಉದ್ಯಮ ಮತ್ತು ಸರ್ಕಾರಿ ಮೂಲಗಳ ಪ್ರಕಾರ, ಪೆಟ್ರೋಲಿಯಂ ಪ್ಲಾನಿಂಗ್ ಅಂಡ್ ಅನಾಲಿಸಿಸ್ ಸೆಲ್ ಪ್ರಧಾನಿ ನರೇಂದ್ರ ಮೋದಿ ಅವರ ಕಚೇರಿಯ ಕೋರಿಕೆಯ ಮೇರೆಗೆ ವಾರದ ದತ್ತಾಂಶವನ್ನು ಸಂಗ್ರಹಿಸುತ್ತಿದೆ. ರಷ್ಯಾದ ಮತ್ತು ಅಮೆರಿಕದ ತೈಲ ಆಮದುಗಳ ಬಗ್ಗೆ ಸಕಾಲಿಕ ಮತ್ತು ನಿಖರವಾದ ದತ್ತಾಂಶ ನಮಗೆ ಬೇಕು. ಅಮೆರಿಕ ಮಾಹಿತಿ ಕೇಳಿದಾಗ, ಅವರು ದ್ವಿತೀಯ ಮೂಲಗಳ ಮೇಲೆ ಅವಲಂಬಿತರಾಗುವ ಬದಲು, ನಾವು ಪರಿಶೀಲಿಸಿದ ಅಂಕಿ ಅಂಶಗಳನ್ನು ಒದಗಿಸಬಹುದು.

**ಭಾರತಕ್ಕೆ ಮತ್ತೆ ಸುಂಕ ಬೆದರಿಕೆ ಹಾಕಿದ ಟ್ರಂಪ್**

ಟ್ರಂಪ್ ಈ ಹೇಳಿಕೆ ನೀಡಿರುವ ಆಡಿಯೋವನ್ನು ಶ್ವೇತಭವನ ಬಿಡುಗಡೆ ಮಾಡಿದ್ದು, ಅದರಲ್ಲಿ ಟ್ರಂಪ್ ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ಹೊಗಳಿದ್ದಾರೆ. ಅದೇ ವೇಳೆ ಭಾರತದ ತೈಲ ಖರೀದಿ ಬಗ್ಗೆ ತನ್ನ ಬೇಸರವನ್ನು ಹೊರ ಹಾಕಿದ್ದಾರೆ. ಹೀಗೆ ಮೋದಿಯವರನ್ನು ಶ್ಲಾಘಿಸುತ್ತಲೇ, ತೈಲ ಖರೀದಿ ಮುಂದುವರೆಸಿದರೆ ಎದುರಾಗಬಹುದಾದ ಪರಿಣಾಮಗಳ ಬಗ್ಗೆಯೂ ಸಹ ಸುಳಿವು ನೀಡಿದ್ದಾರೆ. ಈ ಆಡಿಯೋದಲ್ಲಿ ಟ್ರಂಪ್ ಪರೋಕ್ಷವಾಗಿ ಭಾರತದ ವ್ಯಾಪಾರದ ನಿಲುವನ್ನು ಕುರಿತು ಮಾತನಾಡುತ್ತಾ ವಾಸ್ತವವಾಗಿ ಹೇಳಬೇಕಾದರೆ ಅವರು ನನ್ನನ್ನು ಸಂತೋಷಪಡಿಸಬೇಕು ಇಚ್ಛಿಸುತ್ತಾರೆ ಎಂದು ಹೇಳುತ್ತಾ ಪ್ರಧಾನಿ ಮೋದಿಯವರನ್ನು ಉಲ್ಲೇಖಿಸಿ ಮೋದಿ ಒಬ್ಬ ಒಳ್ಳೆಯ ವ್ಯಕ್ತಿ. ನಾನು ಸಂತೋಷವಾಗಿಲ್ಲ ಎಂದು ಅವರಿಗೆ ತಿಳಿದಿತ್ತು. ನನ್ನನ್ನು ಸಂತೋಷಪಡಿಸುವುದು ಮುಖ್ಯ ಎಂಬುದು ಅವರು ಅರಿತಿದ್ದರು ಎಂದು ತಿಳಿಸಿದ್ದಾರೆ.

# ದಾಖಲೆಗಳು ಮುರಿಯಲೆಂದೇ ನಿರ್ಮಾಣವಾಗುತ್ತವೆ, ನನ್ನ ದಾಖಲೆ ಮುರಿಯುವ ನಾಯಕರೂ ಬರಬಹುದು

## ನನಗಿಂತ ಹೆಚ್ಚಿನ ಬಾರಿ ಬಜೆಟ್ ಮಂಡಿಸುವ ನಾಯಕರೂ ಮುಂದೆ ಬರಬಹುದು ಜ. 6 ರಂದು ಸಿಎಂ ಸಿದ್ದರಾಮಯ್ಯ ದಾಖಲೆ ಸೃಷ್ಟಿ


• ಉದಯವಾಹಿನಿ, ಬೆಂಗಳೂರು

ಮಾಜಿ ಸಿಎಂ ದಿವಂಗತ ದೇವರಾಜ್ ಅರಸ್ ಅವರ ಮುಖ್ಯಮಂತ್ರಿಯ ಸುದೀರ್ಘ ಅವಧಿಯ ದಾಖಲೆ ಮುರಿದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನರ ಆಶೀರ್ವಾದದಿಂದ ಇದು ಸಾಧ್ಯವಾಗಿದೆ ಎಂದು ತಿಳಿಸಿದರು.

ಮಾಜಿ ಸಿಎಂ ದಿವಂಗತ ದೇವರಾಜ್ ಅರಸ್ ಅವರ ಮುಖ್ಯಮಂತ್ರಿಯ ಸುದೀರ್ಘ ಅವಧಿಯ ದಾಖಲೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ ಮುರಿಯಲಿರುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ಜನರ ಆಶೀರ್ವಾದದಿಂದ ಇದು ಸಾಧ್ಯವಾಗಿದೆ. ಅರಸು ರವರು ಮೈಸೂರಿನವರೇ ಆಗಿರುವುದು ಸಂತೋಷದ ಸಂಗತಿ. ತಾಲ್ಲೂಕು ಬೋರ್ಡ್ ಸದಸ್ಯನಾದ ನಂತರದ ನನ್ನ ರಾಜಕೀಯ ಜೀವನದಲ್ಲಿ ಸಚಿವನಾಗುವ ಮತ್ತು ಮುಖ್ಯಮಂತ್ರಿಯಾಗುವ ನಿರೀಕ್ಷೆಯಿರಲಿಲ್ಲ. 13 ಚುನಾವಣೆಗಳನ್ನೂ ಎದುರಿಸಿ 8ಕ್ಕೂ ಹೆಚ್ಚು ಬಾರಿ ಗೆಲುವು ಸಾಧಿಸಿದ್ದೇನೆ ಎಂದರು.

**ಕಾಂಗ್ರೇಸ್ ವರಿಷ್ಠರೊಂದಿಗೆ ಚರ್ಚಿಸಿ ನಿರ್ಧಾರ:** ಬಜೆಟ್ ತಯಾರಿಯನ್ನು ಸಂಕ್ರಾಂತಿಯ ನಂತರ ಪ್ರಾರಂಭಿಸಲಾಗುವುದು.ಸಂಪುಟ ಪುನರ್ರಚನೆಯ ಬಗ್ಗೆ ಕಾಂಗ್ರೇಸ್ ವರಿಷ್ಠರಾದ ರಾಹುಲ್ ಗಾಂಧಿಯವರೊಂದಿಗೆ ಚರ್ಚಿಸಲಾಗುವುದು. ಅವರು ಸಮಯ ನೀಡಿದರೆ ಚರ್ಚಿಸಲಿರುವುದಾಗಿ ತಿಳಿಸಿದರು.

**ಬಳ್ಳಾರಿ ಘಟನೆ-ತನಿಖೆಯ ನಂತರ ಸತ್ಯಾಸತ್ಯತೆ ತಿಳಿಯಲಿದೆ:** ಬಳ್ಳಾರಿ ನಡೆದ ಸಂಘರ್ಷದಲ್ಲಿ ಕಾಂಗ್ರೇಸ್ ಕಾರ್ಯಕರ್ತ ಬಲಿಯಾಗಿರುವ ಘಟನೆಯ ತನಿಖೆಯನ್ನು ಸಿಐಡಿ ಗೆ ವಹಿಸಲಾಗುವುದೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿ, ಈ ಬಗ್ಗೆ ಗೃಹ ಸಚಿವರೊಂದಿಗೆ ಚರ್ಚಿಸುತ್ತೇನೆ. ಪೊಲೀಸ್ ತನಿಖೆಯ ನಂತರ ಘಟನೆಯ ಸತ್ಯಾಸತ್ಯತೆ ತಿಳಿಯಲಿದೆ ಎಂದರು.



**ದಾಖಲೆಗಳು ಮುರಿಯಲೆಂದೇ ನಿರ್ಮಾಣವಾಗುತ್ತವೆ**

ಕಡಿಮೆ ಜನಸಂಖ್ಯೆಯ ಅರಸು ಸಮುದಾಯದವರಾಗಿದ್ದ ದೇವರಾಜ ಅರಸು ಅವರು ಜನಪ್ರಿಯ ನಾಯಕರಾಗಿದ್ದರು. ಅಂತಹ ಮಹಾನ್ ನಾಯಕನಿಗೂ ಮತ್ತು ನನಗೂ ಹೋಲಿಕೆ ಸರಿಯಲ್ಲ. ಅರಸು ಅವರ ಅವಧಿಯಲ್ಲಿ ರಾಜ್ಯದ ಪರಿಸ್ಥಿತಿ ವಿಭಿನ್ನವಾಗಿತ್ತು. ಅವರು ಒಂದು ಬಾರಿ ಚುನಾವಣೆಯನ್ನು ಸರ್ವಾನುಮತದಿಂದಲೂ ಆಯ್ಕೆ ಆಗಿದ್ದರು. ದಾಖಲೆಗಳು ಮುರಿಯಲೆಂದೇ ನಿರ್ಮಾಣ ಆಗುತ್ತವೆ ಎಂದರು.

**ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ದೊಡ್ಡ ಅನ್ಯಾಯ:** ಜಿಎಸ್ ಟಿ ಕಡಿತ, ವಿಬಿ ಜಿ ರಾಮ್ ಜಿ ಯೋಜನೆ ಜಾರಿಯಂತಹ ಕೇಂದ್ರದ ಕ್ರಮಗಳ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುತ್ತಾ, ರಾಜ್ಯಕ್ಕೆ ಜಿಎಸ್ ಟಿ ಯಿಂದ ವಾರ್ಷಿಕವಾಗಿ 12 ರಿಂದ 15 ಸಾವಿರ ಕೋಟಿ ರೂ.ಗಳು ನಷ್ಟವಾಗುತ್ತಿದ್ದು, ಇದು ಕೇಂದ್ರ ಸರ್ಕಾರ ರಾಜ್ಯಕ್ಕೆ ಮಾಡುತ್ತಿರುವ ಅನ್ಯಾಯ. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಕಾಲದಿಂದಲೂ ಮನರೇಗಾ ಯೋಜನೆಗೆ ಸಂಪೂರ್ಣವಾಗಿ ಕೇಂದ್ರವೇ ಅನುದಾನ ನೀಡುತ್ತಿತ್ತು

ಆದರೆ ಈಗ ಈ ಯೋಜನೆಯನ್ನು ರದ್ದುಪಡಿಸಿದ್ದು, ಇದರಿಂದ ಕಾರ್ಮಿಕರು, ಸಣ್ಣ ರೈತರು, ಮಹಿಳೆಯರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಬಡವರಿಗೆ ನೀಡಲಾಗುತ್ತಿದೆ.

ಕೆಲಸದ ದಿನಗಳನ್ನು ಕಡಿಮೆಯಾಗಲಿದ್ದು, ಜನರ ಮೂಲಭೂತ ಹಕ್ಕಿಗಳನ್ನು ಕಸಿದುಕೊಳ್ಳಲಾಗುತ್ತಿದೆ. ಇದು ಅಸಂವಿಧಾನಿಕ ಕ್ರಮ. ಈ ಕಾಯ್ದೆಯಂತೆ ಕಾಮಗಾರಿಗಳಿಗೆ ಕೇಂದ್ರ ಮತ್ತು ರಾಜ್ಯ 60:40 ರಷ್ಟು ಅನುದಾನವನ್ನು ನೀಡಬೇಕಾಗಿದೆ. ಇದರಿಂದ ರಾಜ್ಯಸರ್ಕಾರದ ಮೇಲೆ ಸುಮಾರು 3000 ಕೋಟಿ ರೂ.ಗಳ ಹೊರೆ ಬೀಳಲಿದೆ ಎಂದರು.

**ಹುಲಿ ಸೆರೆಗೆ ಅರಣ್ಯ ಇಲಾಖೆಗೆ ಸೂಚನೆ:** ಮೈಸೂರಿನ ವಿಮಾನ ನಿಲ್ದಾಣದಲ್ಲಿ ಹುಲಿ ಕಾಣಿಸಿಕೊಳ್ಳುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಈ ಬಗ್ಗೆ ನಾಳೆ ಅರಣ್ಯ ಇಲಾಖೆಯೊಂದಿಗೆ ಸಭೆ ನಿಗಧಿಯಾಗಿದೆ. ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದ್ದು, ಅರಣ್ಯಗಳಿಂದ ಜನರ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತಿದೆ. ಹುಲಿಯನ್ನು ಸೆರೆಹಿಡಿಯಲು ಸಿಬ್ಬಂದಿ ಕ್ರಮಕೈಗೊಳ್ಳಲು ಸೂಚನೆ ನೀಡಲಾಗಿದ್ದು, ಸೆರೆಹಿಡಿದ ಹುಲಿಗಳನ್ನು ಮತ್ತೊಂದು ಅರಣ್ಯ ಪ್ರದೇಶಕ್ಕೆ ವರ್ಗಾಯಿಸಲು ಸೂಚಿಸಲಾಗಿದೆ ಎಂದರು.

**ಮೃತರ ಕುಟುಂಬಗಳಿಗೆ 5 ಲಕ್ಷ ರೂ.ಪರಿಹಾರ:** ಮೈಸೂರಿನ ಅರಮನೆಯ ಮುಂಭಾಗದಲ್ಲಿ ಬಲೂನ್ ಸ್ಫೋಟದಲ್ಲಿ ಮೃತರಾದ ಮಹಿಳೆಯರಿಗೆ ತಲಾ 5 ಲಕ್ಷ ರೂ. ಪರಿಹಾರವನ್ನು ನೀಡಲಾಗುವುದು ಎಂದರು.

**ಈ ದಿನದ ದರ** ಪೆಟ್ರೋಲ್: 102.92 ₹/L ಡೀಸೆಲ್ : 91.09 ₹/L ಬಂಗಾರ: ₹13,822/Gram24ct ₹12,670/Gram22ct ಬೆಳ್ಳಿ: ₹248.00/Gram



**ಸಿದ್ಧಸೂಕ್ತಿ**

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

## ನಿಮ್ಮ ನಿಮ್ಮ ಜಾತಿ ಧರ್ಮ ನಿಮನಿಮಗೆ

ಬರುವಾಗ ಬೆತ್ತಲೆ. ಜಾತಿ ಧರ್ಮ ಆ ಮೇಲೆ. ಮೊದಲು ಮಾನವ ಬಳಿಕ ಉಳಿದದ್ದು. ಏನಾದರುಂ ಆಗು ಮೊದಲು ಮಾನವನಾಗು. ಯಾವುದು ಏಳಿಗೆಯೋ ಅದು ಶ್ರೇಷ್ಠ, ಯಾವುದು ಪತನವೋ ಅದು ಕನಿಷ್ಠ ಎನಬಹುದು. ಹರಿದು ಬರುವ ವಿಚಾರಧಾರೆಗಳನೆಲ್ಲ ಶಾಂತ ಮನಸ್ಸಿನಿಂದ ಸಮಾಲೋಚಿಸಿ ಯಾವುದು ಪರರಿಗೆ ತೊಂದರೆ ಉಂಟುಮಾಡದೇ ತನಗೆ ಒಳಿತನ್ನು ಮಾಡುವುದೋ ಅದನ್ನು ಅನುಸರಿಸಿದರಾಯಿತು. ಎಲ್ಲಾ ತಲೆಗೂ ಒಂದೇ ಗಾತ್ರದ ಟೊಪ್ಪಿಗೆ ಹಿಡಿಸದಿರಬಹುದು.

ಅವರ ತಂದೆ ಅವರಿಗೆ ಪೂಜ್ಯ. ಬೇರೆಯವರಿಗೆ ಪೂಜ್ಯ ಆಗಬಹುದು ಆಗದಿರಬಹುದು. ಎಲ್ಲರೂ ನನ್ನ ತಂದೆಯನ್ನು ತಂದೆಯನ್ನೇ ಪೂಜಿಸಬೇಕು ಎಂದು ಆಗ್ರಹಿಸುವುದು ತಪ್ಪು. ಕೆಲವರು ಅದರಲ್ಲೂ ಇತ್ತೀಚೆಗೆ ಲಿಂಗಾಯತ ಪ್ರತ್ಯೇಕಧರ್ಮವಾದಿಗಳು ಲಿಂಗಾಯತವೇ ಧರ್ಮ ಬಸವತಂದೆಗೆ ಹುಟ್ಟಿದ್ದೇ ಆದರೆ ಇದನ್ನೇ ಅನುಸರಿಸಬೇಕು ಎನ್ನುವರು. ಇಂಥವರ ತಿಳುವಳಿಕೆ ಕಂಡು ಕನಿಕರ ಉಂಟಾಗುವುದು. ಬಸವ ತಂದೆಗೆ ಮಕ್ಕಳಾರು ಎಷ್ಟು? ಗುರು ತಂದೆ ಶಿಷ್ಯ ಮಗ. ಮಗನಿಗೆ ತಂದೆ ಮಾತ್ರ ತಂದೆ ಎಂದ ಬಳಿಕ ತಂದೆಗೆ ಮಗ ಮಾತ್ರ ಮಗ. ಬಸವ ಆತನ ಶಿಷ್ಯರು ಗತಿಸಿ ಎಂಟು ನೂರು ವರ್ಷ ಕಳೆದಿವೆ.

# ನಿಯಮ ಉಲ್ಲಂಘಿಸಿದ್ರೆ ಪೊಲೀಸರಿಗೆ ದೂರು ಕೊಡುತ್ತೆ ಈ ಹೆಲ್ಮೆಟ್!

### ದ್ವಿಚಕ್ರ ವಾಹನ ಸವಾರರು ರಸ್ತೆಯಲ್ಲಿ ಸಂಚರಿಸುವಾಗ ಹೆಲ್ಮೆಟ್ ಧರಿಸುವುದು ಕಡ್ಡಾಯ ಇಬ್ಬರಿದ್ದರೆ ಇಬ್ಬರೂ ಸಹ ಧರಿಸಬೇಕಾಗುತ್ತದೆ

• **ಉದಯವಾಹಿನಿ, ಬೆಂಗಳೂರು**

ನಗರದ ಈ ಟೆಕ್ಕಿ ತಯಾರಿಸಿದ ಹೆಲ್ಮೆಟ್ ಪಕ್ಕದಲ್ಲಿ ಹೋಗುವ ಸವಾರರಿಗೂ ಸವಾಲು ಹಾಕುತ್ತದೆ. ಏಕೆಂದರೆ ಈತನ ಪಕ್ಕದಲ್ಲಿ ಅಥವಾ ಅದೇ ರಸ್ತೆಯಲ್ಲಿ ಸಂಚರಿಸುವವರು ಸಂಚಾರ ನಿಯಮಗಳನ್ನು ಉಲ್ಲಂಘಿಸಿದರೆ ಅಂಥವರ ಮಾಹಿತಿ ಹಾಗೂ ಆತನ ಬೈಕ್ ಸಂಖ್ಯೆಯನ್ನು ಪೊಲೀಸರಿಗೆ ರವಾನಿಸುತ್ತದೆ.

ನಿಯಮ ಉಲ್ಲಂಘಿ ಸುವವರ ಬಗ್ಗೆ ಕ್ಷಣಾರ್ಧದಲ್ಲಿ ಮಾಹಿತಿ ಎಕ್ಸ್ ಜಾಲತಾಣದಲ್ಲಿ ಈ ಬಗ್ಗೆ ಬರೆದುಕೊಂಡಿರುವ ಟೆಕ್ಕಿ ಪಂಕಜ್ ತನ್ವರ್, ರಸ್ತೆಯಲ್ಲಿ ನಿಯಮ ಪಾಲಿಸದ ಜನರನ್ನು ಕಂಡು ಸುಸ್ತಾಗಿತ್ತು. ಅದಕ್ಕಾಗಿ, ನನ್ನ ಹೆಲ್ಮೆಟ್ ಅನ್ನು ಸಂಚಾರ ಪೊಲೀಸ್ ಸಾಧನಕ್ಕೆ ಹ್ಯಾಕ್ ಮಾಡಿದ್ದೇನೆ. ಈ ಸಾಧನವು ಸಂಚಾರ ನಿಯಮ ಉಲ್ಲಂಘಿಸುವವರ ಚಿತ್ರಗಳನ್ನು ಸೆರೆಹಿಡಿಯುತ್ತದೆ. ಅಲ್ಲದೇ ಸ್ಥಳ ಮತ್ತು ನಂಬರ್ ಪ್ಲೇಟ್‌ನೊಂದಿಗೆ ನೇರವಾಗಿ ಪೊಲೀಸರಿಗೆ ಕಳುಹಿಸುತ್ತದೆ ಎಂದು ಅವರು ವಿವರಿಸಿದ್ದಾರೆ.

ನಿಯಮ ಪಾಲಿಸದ ಜನರನ್ನು ಕಂಡು ಸುಸ್ತು

ಬೆಂಗಳೂರಿನ ಜನರೇ, ಈಗ ಸುರಕ್ಷಿತವಾಗಿ ಸವಾರಿ ಮಾಡಿ ಅಥವಾ ವಿಷಾದಿಸಿ, ಎಂದು ಹೆಲ್ಮೆಟ್ ಇಲ್ಲದ ಸ್ಕೂಟರ್ ಸವಾರನನ್ನು ವ್ಯವಸ್ಥೆಯು ತಕ್ಷಣವೇ ವರದಿ ಮಾಡುವುದನ್ನು ತೋರಿಸುವ ಉದಾಹರಣೆಯನ್ನು ಹಂಚಿಕೊಂಡಿದ್ದಾರೆ. ಈ ಪೋಸ್ಟ್ ವೈರಲ್ ಆಗಿದ್ದು 1.5 ಲಕ್ಷಕ್ಕೂ ಹೆಚ್ಚು ವೀಕ್ಷಣೆಧಿಗಳನ್ನು ಕಂಡಿದೆ. ಈ ಬಗ್ಗೆ ನೆಟ್ಟಿಗರೊಬ್ಬರು, ಹಾಳಾಗಿರುವ ರಸ್ತೆಗಳ ಮೇಲಿನ ಕೋಪಕ್ಕಾಗಿ ಹೀಗೆ ಮಾಡಿದ್ದೀರಿ. ಇದರಿಂದ ಪ್ರಭಾವಿತರಾಗಧಿಬೇಕೋ ಅಥವಾ ಭಯಪಡಧಿಬೇಕೋ ಗೊತ್ತಾಗುತ್ತಿಲ್ಲ, ಎಂದು ಕಮೆಂಟ್ ಮಾಡಿದ್ದಾರೆ.



ಉದಯವಾಹಿನಿ ಚಿತ್ರ

**ಸೋಶಿಯಲ್ ಮೀಡಿಯಾದಲ್ಲಿ ವೈರಲ್**

**ಪಂಕಜ್ ಅವರ ಈ ಪೋಸ್ಟ್ ಸದ್ಯ ಸೋಶಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿದೆ. ಈ ಪೋಸ್ಟ್ ಈಗಾಗಲೇ 1.5 ಲಕ್ಷಕ್ಕೂ ಹೆಚ್ಚು ವೀಕ್ಷಣೆಗಳನ್ನು ಪಡೆದಿದೆ. ನೆಟ್ಟಿಗರು ಈ ಆವಿಷ್ಕಾರಕ್ಕೆ ಮಿಶ್ರ ಪ್ರತಿಕ್ರಿಯೆ ನೀಡಿದ್ದಾರೆ. ಇದೊಂದು ನಿಜಕ್ಕೂ ಕ್ರಾಂತಿಕಾರಿ ಆವಿಷ್ಕಾರ, ಬೆಂಗಳೂರಿನಲ್ಲಿ ಸಾವಿರಾರು ಜನರು ಇದನ್ನು ಬಳಸಿದರೆ ದಿನಕ್ಕೆ ಲಕ್ಷಾಂತರ ದೂರುಗಳನ್ನು ಪೊಲೀಸರಿಗೆ ಕಳುಹಿಸಬಹುದು ಎಂದು ಒಬ್ಬ ಎಕ್ಸ್ ಬಳಕೆದಾರ ಟ್ವೀಟ್ ಹಂಚಿಕೊಂಡಿದ್ದಾರೆ.**

**ಸಂಚಾರ ಪೊಲೀಸರಿಂದ ಮೆಚ್ಚುಗೆ:** ಸಂಚಾರ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ ವಿಷಯಗಳನ್ನು ಗಮನಕ್ಕೆ ತಂದಿದ್ದಕ್ಕಾಗಿ ಧನ್ಯವಾದ. ನಿಮ್ಮ ಕಾರ್ಯ ನಿಜಕ್ಕೂ ಶ್ಲಾಘನೀಯ. ಸಾರ್ವಜನಿಕರು

**2026ರ ಬಿಂಗೊ ಕಾರ್ಡ್‌ನಲ್ಲಿ ಎಐ ಟ್ರಾಫಿಕ್ ಸ್ನಿಚ್ ಇರುತ್ತದೆ ಎಂದು ನಾನು ಅಂದುಕೊಂಡಿರಲಿಲ್ಲ, ಆದರೆ ಇದು ಅದ್ಭುತ ಎಂದು ಮತ್ತೊಬ್ಬ ನೆಟ್ಟಿಗ ಕಾಮೆಂಟ್ ಮಾಡಿದ್ದಾರೆ. ಜೊತೆಗೆ ಈ ತಂತ್ರಜ್ಞಾನವನ್ನು ಭಾರತದಾದ್ಯಂತ ಲಭ್ಯವಾಗುವಂತೆ ಮಾಡಬೇಕೆಂದು ಹಲವರು ಒತ್ತಾಯ ಹೇರಿದ್ದಾರೆ.**

ಸಂಚಾರ ನಿಯಮ ಉಲ್ಲಂಘನೆಗಳನ್ನು ವರದಿ ಮಾಡಲು ಮತ್ತು ಅವುಗಳನ್ನು ಜಾರಿಗೆ ತರುವಲ್ಲಿ ಸಹಕರಿಸಲು 'ಆಸ್ತ್ರಮ್' ಆಪ್ ಪೋರ್ಟಲ್ ಅನ್ನು ಬಳಸಬಹುದು ಈ ಪೋರ್ಟಲ್ ಸಾರ್ವಜನಿಕರಿಗೆ ಸಂಚಾರ ನಿಯಮಗಳ ಉಲ್ಲಂಘನೆಯನ್ನು ಪೊಲೀಸರ ಗಮನಕ್ಕೆ ತರಲು ಸುಲಭ ವೇದಿಕೆಯನ್ನು ಒದಗಿಸುತ್ತದೆ. ಸಾರ್ವಜನಿಕರು ಈ ಆಪ್ ಬಳಸುವ ಮೂಲಕ ನಿಯಮಗಳನ್ನು ಜಾರಿಗೊಳಿಸಲು ನೆರವಾಗಬಹುದು ಎಂದು ಎಕ್ಸ್‌ನಲ್ಲಿ ಬೆಂಗಳೂರು ಸಂಚಾರ ಪೊಲೀಸ್ ಇಲಾಖೆಯ ಖಾತೆಯಿಂದ ಟ್ವೀಟ್ ಮಾಡಲಾಗಿದೆ

## KIAL ವಿಮಾನ ನಿಲ್ದಾಣ ಮುಖ್ಯ ರಸ್ತೆಯಲ್ಲಿ ಕ್ಯಾಬ್ ಚಾಲಕ, ಬೈಕ್ ಸವಾರ ಗಲಾಟೆ

• **ಉದಯವಾಹಿನಿ, ಬೆಂಗಳೂರು**

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಕ್ಯಾಬ್, ಬೈಕ್ ಚಾಲಕರ ನಡುವೆ ಕ್ಷುಲ್ಲಕ ವಿಚಾರಕ್ಕೆ ಗಲಾಟೆ ನಡೆದಿದ್ದು, ಈ ಸಂಬಂಧದ ರಸ್ತೆ ರಂಪಾಟದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಿಮಾನ ನಿಲ್ದಾಣ ಪ್ರವೇಶಕ್ಕೂ ಮುನ್ನ ಇರುವ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ನಾಕಾ ಚೆಕ್ ಪೋಸ್ಟ್ ಸಮೀಪ ತಡರಾತ್ರಿ ಈ ಘಟನೆ ನಡೆದಿದೆ ಎನ್ನಲಾಗಿದೆ. ಕ್ಯಾಬ್ ಹಿಂಬಾಲಿಸಿಕೊಂಡು ಬಂದ ಬೈಕ್ ಸವಾರ ಕಾರನ್ನು ಅಡ್ಡಗಟ್ಟಿ ಚಾಲಕನೊಂದಿಗೆ ಗಲಾಟೆ ಮಾಡಿ, ಹಲ್ಲೆ ನಡೆಸುವ ದೃಶ್ಯ ವಿಡಿಯೋದಲ್ಲಿದೆ. ಇದರಿಂದ ಭಯಭೀತಗೊಂಡ ಕ್ಯಾಬ್‌ನಲ್ಲಿದ್ದ ಮಹಿಳೆ ಚಲಿಸುತ್ತಿರುವ ವಾಹನದಿಂದ ಕೆಳಗೆ ಇಳಿದರು. ಘಟನೆಯನ್ನು ಗಮನಿಸಿದ ಸಿಐಎಸ್‌ಎಫ್ ಸಿಬ್ಬಂದಿ ಇಬ್ಬರನ್ನೂ ತಡೆದು ವಿಚಾರಣೆ ನಡೆಸಿದ್ದಾರೆ. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ ಕ್ಯಾಬ್‌ನಲ್ಲಿದ್ದ ಮಹಿಳೆ ಮತ್ತು ಬೈಕ್ ಸವಾರ ಇಬ್ಬರು ಪ್ರೇಮಿಗಳು ಎಂದು ಮೂಲಗಳು ತಿಳಿಸಿವೆ.

## ನೀರಿನ ಮಾಲಿನ್ಯ ಪರಿಶೀಲಿಸಲು ರೋಬೋಟಿಕ್ ತನಿಖೆ ಪ್ರಾರಂಭಿಸಿದ BWSSB

• **ಉದಯವಾಹಿನಿ, ಬೆಂಗಳೂರು**

ಉತ್ ಲಿಂಗರಾಜಪುರಂ ನಿವಾಸಿಗಳಿಗೆ ಕಲುಷಿತ ನೀರಿನಿಂದಾಗಿ ಒಂದು ವಾರಕ್ಕೂ ಹೆಚ್ಚು ಕಾಲ ಅನಾರೋಗ್ಯ ಮತ್ತು ಫುಡ್ ಪಾಯಿಸನ್ ನಂತಹ ಲಕ್ಷಣಗಳು ಕಂಡುಬಂದಿವೆ ಎಂದು ಹೇಳಲಾದ ನಂತರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್‌ಎಸ್ಬಿ) ನೀರು ಸರಬರಾಜನ್ನು ಸ್ಥಗಿತಗೊಳಿಸಿದೆ. ರೋಬೋಟಿಕ್ ತಂತ್ರಜ್ಞಾನವನ್ನು ಬಳಸಿಕೊಂಡು ತೀವ್ರ ತನಿಖೆ ಪ್ರಾರಂಭಿಸಿತು. ಸಾರ್ವಜನಿಕ ಆರೋಗ್ಯವನ್ನು ಕಾಪಾಡುವ ಮುನ್ನೆಚ್ಚರಿಕೆ ಕ್ರಮವಾಗಿ ಲಿಂಗರಾಜಪುರಂನ ಕೆಲವು ಭಾಗಗಳಿಗೆ ಮಾಲಿನ್ಯದ ವರದಿಗಳ ನಂತರ ನೀರು ಸರಬರಾಜು ನಿಲ್ಲಿಸಲಾಯಿತು. ಮಾಲಿನ್ಯದ ಮೂಲವನ್ನು ನಿಖರತೆ, ಶೀಘ್ರವಾಗಿ ಗುರುತಿಸಲು, ಮಂಡಳಿಯು ಸಿಬ್ಬಂದಿಯೊಂದಿಗೆ ಸುಧಾರಿತ ರೋಬೋಟ್‌ಗಳನ್ನು ಬಳಸಿಕೊಂಡು ತನಿಖೆಯನ್ನು ಪ್ರಾರಂಭಿಸಿದೆ. ಇಡೀ ಪ್ರದೇಶವನ್ನು ಅಗೆಯದೆ ದೋಷ ಎಲ್ಲಿದೆ ಎಂಬುದನ್ನು ಪತ್ತೆಹಚ್ಚಲು ನಾವು ಲಭ್ಯವಿರುವ ಪ್ರತಿಯೊಂದು ತಾಂತ್ರಿಕ ಸಂಪನ್ಮೂಲವನ್ನು ಬಳಸುತ್ತಿದ್ದೇವೆ ಎಂದು ಬಿಡಬ್ಲ್ಯೂಎಸ್‌ಎಸ್ಬಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಹೇಳಿದರು. ಸಮಸ್ಯೆಯನ್ನು ಪ್ರಮುಖ ಆದ್ಯತೆ ಎಂದು ಪರಿಗಣಿಸಿ, ಬಿಡಬ್ಲ್ಯೂಎಸ್‌ಎಸ್ಬಿ ತನ್ನ ಎಂಜಿನಿಯರಿಂಗ್ ತಂಡಗಳಿಗೆ ಸಮಸ್ಯೆಯನ್ನು ಗುರುತಿಸಿ ಸರಿಪಡಿಸಲು ಸಂಜೆಯೊಳಗೆ ಸಾಮಾನ್ಯ ನೀರು ಸರಬರಾಜನ್ನು ಪುನಃಸ್ಥಾಪಿಸಲು ನಿರ್ದೇಶಿಸಿದೆ ಎಂದು ಮನೋಹರ್ ಹೇಳಿದರು.

## ಬೆಂಗಳೂರಿನಲ್ಲಿ ಓಂಶಕ್ತಿ ಮಾಲಾಧಾರಿಗಳ ಮೇಲೆ ಕಲ್ಲು ತೂರಾಟ

• **ಉದಯವಾಹಿನಿ, ಬೆಂಗಳೂರು**



ಓಂ ಶಕ್ತಿ ಮಾಲಾಧಾರಿಗಳ ಮೆರವಣಿಗೆಯ ಮೇಲೆ ದುಷ್ಕರ್ಮಿಗಳು ಕಲ್ಲು ತೂರಾಟ ನಡೆಸಿದ ನಂತರ ನಗರದ ಜಗಜೀವನರಾಮ್ ನಗರದಲ್ಲಿ ಪರಿಸ್ಥಿತಿ ಉದ್ವಿಗ್ನವಾಗಿದ್ದರೂ ನಿಯಂತ್ರಣದಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ರಾತ್ರಿ ಮೆರವಣಿಗೆಯ ಮೇಲೆ ನಡೆದ ದಾಳಿಯಲ್ಲಿ ಇಬ್ಬರು ಮಹಿಳೆಯರು ಗಾಯಗೊಂಡಿದ್ದಾರೆ. ಘಟನೆಯ ನಂತರ, ನಿವಾಸಿಗಳು ಜೆಜೆ ನಗರ ಪೊಲೀಸ್ ಠಾಣೆಯ ಮುಂದೆ ಪ್ರತಿಭಟನೆ ನಡೆಸಿ, ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಈ ಕುರಿತು ಇಂದು ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಗೃಹಸಚಿವ ಜಿ. ಪರಮೇಶ್ವರ್ ಅವರು, ಘಟನೆಗೆ ಸಂಬಂಧಿಸಿದಂತೆ ಮೂವರು ಬಾಲಕರನ್ನು ಬಂಧಿಸಲಾಗಿದೆ. ಬಂಧಿತರು 15, 16 ವರ್ಷದ ಅಪ್ರಾಪ್ತ ವಯಸ್ಸಿನವರಾಗಿದ್ದಾರೆ.

ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿದ್ದು, ಕಾನೂನು ಪ್ರಕಾರ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು. ಆರೋಪಿಗಳು ಅಪ್ರಾಪ್ತರಾಗಿರುವುದರಿಂದ, ಜುವೆನೈಲ್‌ನಿಯಮಗಳ ಅಡಿಯಲ್ಲಿ ಪ್ರಕರಣವನ್ನು ನಿರ್ವಹಿಸಲಾಗುವುದು. ಯಾರು ಈ ಬಾಲಕರನ್ನು ಪ್ರಚೋದಿಸಿದ್ದಾರೆ ಅಥವಾ ಘಟನೆ ಹೇಗೆ ನಡೆಯಿತು ಎಂಬುದರ ಕುರಿತು ಸಂಪೂರ್ಣ ತನಿಖೆ ನಡೆಸಲಾಗುವುದು ಎಂದು ಗೃಹ ಸಚಿವರು ಸ್ಪಷ್ಟಪಡಿಸಿದ್ದಾರೆ.

ಇಂತಹ ಘಟನೆಗಳು ನಡೆದಾಗ ಬಿಜೆಪಿ ರಾಜಕೀಯ ಮಾಡಲು ಪ್ರಯತ್ನಿಸುತ್ತದೆ ಎಂಬ ಆರೋಪವನ್ನು ಮಾಡಿರುವ ಪರಮೇಶ್ವರ್, ಬಿಜೆಪಿ ಹೇಳಿಕೆ ನೀಡುವ ಮೊದಲೇ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ.

ಕಾನೂನು ತನ್ನದೇ ಆದ ರೀತಿಯಲ್ಲಿ ಕೆಲಸ ಮಾಡುತ್ತದೆ ಮತ್ತು ಯಾರ ಪ್ರಚೋದನೆಗೂ ಒಳಗಾಗುವುದಿಲ್ಲ ಎಂದು ಹೇಳಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದು, ಜೆಜೆ ನಗರದಲ್ಲಿ ಹೆಚ್ಚುವರಿ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದೆ. ವಿಎಸ್ ಗಾರ್ಡನ್ ನಿವಾಸಿ ಶಶಿಕುಮಾರ್ ಎನ್ ಅವರ ದೂರಿನ ಆಧಾರದ ಮೇಲೆ, ಪೊಲೀಸರು ಭಾನುವಾರ ತಡರಾತ್ರಿ ಎಫ್‌ಐಆರ್ ದಾಖಲಿಸಿದ್ದಾರೆ. ಶಶಿಕುಮಾರ್ ಪ್ರಕಾರ, ಭಕ್ತರು ಆ ಪ್ರದೇಶದಲ್ಲಿ ಮೆರವಣಿಗೆ ನಡೆಸುತ್ತಿದ್ದಾಗ ರಾತ್ರಿ 8.15 ರಿಂದ ರಾತ್ರಿ 9.00 ರ ನಡುವೆ ಈ ಘಟನೆ ನಡೆದಿದೆ.

## ಬಾಂಗ್ಲಾದೇಶಿಗಳೆಂದು ಬಿಂಬಿಸುತ್ತಿರುವುದಕ್ಕೆ ಬಿಜೆಪಿ ವಿರುದ್ಧ ಕಿಡಿ

• **ಉದಯವಾಹಿನಿ, ಬೆಂಗಳೂರು**

ಯಲಹಂಕ ಸಮೀಪದ ಕೋಗಿಲು ಫಕೀರ ಕಾಲೋನಿಯ ನಿವಾಸಿಗಳ ಪುನರ್ವಸತಿ ಕುರಿತು ಅನಿಶ್ಚಿತತೆ ಹೆಚ್ಚಾಗುತ್ತಿದ್ದು ಈ ನಡುವೆ ವಿವಿಧ ಸಂಘಟನೆಗಳು ಮತ್ತು ಸ್ಥಳೀಯ ನಿವಾಸಿಗಳು ಸಭೆ ನಡೆಸಿ, ಮಾನವ ಹಕ್ಕುಗಳ ಆಯೋಗದ ಆದೇಶದಂತೆ ಸೌಲಭ್ಯಗಳ ಒದಗಿಸುವಂತೆ ಆಗ್ರಹಿಸಿದರು.

ಸ್ಥಳಾಂತರಿಸಲ್ಪಟ್ಟವರಿಗೆ ಪರ್ಯಾಯ ವಸತಿ ಒದಗಿಸಬೇಕು ಅಥವಾ ತಾತ್ಕಾಲಿಕ ಆಶ್ರಯಗಳನ್ನು ನಿರ್ಮಿಸಲು ಅವರಿಗೆ ಅನುಮತಿ ನೀಡಬೇಕು. ಮಾನವ ಹಕ್ಕುಗಳ ಆಯೋಗದ ಆದೇಶದ ಪ್ರಕಾರ ಆಹಾರ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿದರು.

ಕೋಗಿಲು ಕೊಳಚೆ ನಿವಾಸಿಗಳ ಹೋರಾಟ ಸಮಿತಿಯ ಬ್ಯಾನರ್ ಅಡಿಯಲ್ಲಿ ಸಭೆಯನ್ನು ನಡೆಯಲಾಗಿದ್ದು, ಸಭೆಯಲ್ಲಿ ದಲಿತ ಸಂಘಟನೆಗಳು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ದುಡಿಯುವ ಜನರ ವೇದಿಕೆ, ಭಾರತೀಯ ಮಹಿಳಾ ರಾಷ್ಟ್ರೀಯ ಒಕ್ಕೂಟ ಹಾಗೂ ಸಿಪಿಐ ಮತ್ತು ಸಿಪಿಎಂ ಸೇರಿದಂತೆ ಎಡಪಕ್ಷಗಳು,


ಉದಯವಾಹಿನಿ ಚಿತ್ರ

ಇಸ್ಲಾಮಿಕ್ ವಿದ್ಯಾರ್ಥಿ ಗುಂಪುಗಳು ನಾಗರಿಕ ಸಮಾಜ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಬಿಜೆಪಿ ನಾಯಕರು ಬಡ ಕುಟುಂಬಗಳನ್ನು ಬಾಂಗ್ಲಾದೇಶದ ಅಕ್ರಮ ಪ್ರವಾಸಿಗರೆಂದು ಚಿತ್ರಿಸಿ, ಕಾಂಗ್ರೆಸ್ ಸರ್ಕಾರದ ಪುನರ್ವಸತಿ ನಿರ್ಧಾರ ಹಿಂತೆಗೆದುಕೊಳ್ಳುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು. ಪ್ರಸ್ತುತ ನಿರಾಶ್ರಿತರಾಗಿರುವವರು ಸ್ಥಳದಲ್ಲಿ ಹಲವು ವರ್ಷಗಳಿಂದ ವಾಸವಿದ್ದರು. ಅತಿಕ್ರಮಣ ತೆರವುಗೊಳಿಸುವವರೆಗೂ ಅವರು ನಿರಾಶ್ರಿತರಾಗಿರಲಿಲ್ಲ ದುಡಿಯುವ ಜನರ ವೇದಿಕೆಯ ಪ್ರತಿನಿಧಿ ನಂದಿನಿಯವರು ಹೇಳಿದ್ದಾರೆ. ಇದೇ ವೇಳೆ ಪರ್ಯಾಯ ವ್ಯವಸ್ಥೆಗಳನ್ನು ಒದಗಿಸುವಂತೆ 2 ದಿನಗಳ ಕಾಲ ರಾಜ್ಯ ಸರ್ಕಾರಕ್ಕೆ ಗಡುವು ನೀಡಿದ ಅವರು, ಇಲ್ಲದಿದ್ದರೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

**ಸಚಿವ ಬಿ. ಝಡ್. ಜಮೀರ್ ಅಹ್ಮದ್ ಭರವಸೆ**

**ಇತರ ಅರ್ಹ ಫಲಾನುಭವಿಗಳಿಗೆ ವಸತಿ ಒದಗಿಸುವುದನ್ನು ನಾವು ವಿರೋಧಿಸುವುದಿಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವಸತಿ ಸಚಿವ ಬಿ. ಝಡ್. ಜಮೀರ್ ಅಹ್ಮದ್ ಅವರು ಭರವಸೆ ನೀಡಿದಂತೆ ಕೋಗಿಲು ನಿವಾಸಿಗಳಿಗೆ ತಕ್ಷಣವೇ ಪುನರ್ವಸತಿ ಕಲ್ಪಿಸಬೇಕೆಂದು ಒತ್ತಾಯಿಸಿದರು. ಬೇಸಿಗೆ ಸಮೀಪಿಸುತ್ತಿರುವುದರಿಂದ, 2 ವಾರಗಳಿಗೂ ಹೆಚ್ಚು ಕಾಲ ವಸತಿ ಇಲ್ಲದೆ ಕುಟುಂಬಗಳು ಬೀದಿಯಲ್ಲಿ ಕಳೆಯುತ್ತಿರುವುದರಿಂದ, ಪುನರ್ವಸತಿಯನ್ನು ತುರ್ತು ಪರಿಸ್ಥಿತಿ ಎಂದು ಪರಿಗಣಿಸಬೇಕು ಎಂದು ಆಗ್ರಹಿಸಿದರು.**

# ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ

• **ಉದಯವಾಹಿನಿ, ಬೆಂಗಳೂರು**

ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಕರ್ನಾಟಕ ಸಂಗೀತ ಪಿತಾಮಹ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವವನ್ನು ಇದೇ ಜನವರಿ 8 ರಿಂದ 18ರ ವರೆಗೆ ಮಲ್ಲೇಶ್ವರದ ಈಜುಕೊಳದ ಬಡಾವಣೆಯ ಸುಧೀಂದ್ರನಗರದ 6ನೇ ಅಡ್ಡ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಆಯೋಜಿಸಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಜನವರಿ 8, ಗುರುವಾರ ಸಂಜೆ 6-30ಕ್ಕೆ ಕುಂದಾಪುರ ಶ್ರೀ ವ್ಯಾಸರಾಜ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಲಕ್ಷ್ಮೀಶ ತೀರ್ಥ ಶ್ರೀಪಾದಂಗಳವರು ಉದ್ಘಾಟಿಸಿ, ಅನುಗ್ರಹ ಸಂದೇಶ ನೀಡಲಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳು (ಪ್ರತಿದಿನ ಸಂಜೆ 6-30ಕ್ಕೆ) : ಜನವರಿ 9ರಂದು ವಿದ್ವಾನ್ ಶ್ರೀ ಸಿ.ಕೆ. ಪವನ್ ದೀಪ್ ಮತ್ತು ಸಂಗಡಿಗರಿಂದ ಹರಿನಾಮ ಸಂಕೀರ್ತನೆ. ಜನವರಿ 10ರಂದು ಕು|| ಅವನಿ ಭಟ್ ಮತ್ತು ಸಂಗಡಿಗರಿಂದ ಹರಿದಾಸ ವೈಭವ. ಜನವರಿ 11ರಂದು ವಿದುಷಿ ಶ್ರೀಮತಿ ವೈಷ್ಣವಿ ಮಧುಸೂದನ್ ಕೊಪ್ಪ ಮತ್ತು ಸಂಗಡಿಗರಿಂದ ಹರಿದಾಸ ಝೇಂಕಾರ. ಜನವರಿ 12ರಂದು ವಿದ್ವಾನ್ ಶ್ರೀ ರಾಕೇಶ್ ಕುಲಕರ್ಣಿ ಮತ್ತು ಸಂಗಡಿಗರಿಂದ ಹರಿದಾಸ ವರ್ಷಿಣಿ. ಜನವರಿ 13ರಂದು ವಿದುಷಿ ಶ್ರೀಮತಿ ಸಂಧ್ಯಾ ಶ್ರೀನಾಥ್ ಮತ್ತು ಸಂಗಡಿಗರಿಂದ ಹರಿದಾಸ ಮಂಜರಿ. ಜನವರಿ 14ರಂದು ವಿದ್ವಾನ್ ಶ್ರೀ ಆನಂದ್ ದೇಶಪಾಂಡೆ ಮತ್ತು ಸಂಗಡಿಗರಿಂದ ಹರಿದಾಸ ನಮನ. ಜನವರಿ 15ರಂದು ಮಾ|| ತ್ರಿಧಾತ್ ಸಾಗರ್ ಮತ್ತು ಸಂಗಡಿಗರಿಂದ ಸ್ಯಾಕ್ಸೋಫೋನ್ ವಾದನ. ಜನವರಿ 16 ರಂದು ವಿದುಷಿ ಶ್ರೀಮತಿ ಅನುಕೃಪ ರೌಡೂರ್ ಬಳ್ಳಾರಿ, ಸಂಗಡಿಗರಿಂದ ಹರಿನಾಮ ಘೋಷ.

ಜನವರಿ 17ರಂದು ಚಿ|| ಅಪ್ರಮೇಯ, ಕು|| ಧೃತಿ ಮತ್ತು ಕು|| ಧನ್ವಿ ಆತ್ರೇಯ ಸಹೋದರಿಯರು ಮತ್ತು ಸಂಗಡಿಗರಿಂದ ದಾಸರ ಪದಗಳ ಗಾಯನ ಮತ್ತು ನೃತ್ಯ ಹಾಗೂ ಜನವರಿ 18ರಂದು ಶ್ರೀ ಪುರಂದರದಾಸರ ಪುಣ್ಯದಿನದ ಪ್ರಯುಕ್ತ ಬೆಳಗ್ಗೆ ರಾಜಬೀದಿ ಉತ್ಸವ, ಸಂಜೆ ಮ||ಶಾ||ಸಂ|| ಶ್ರೀ ಕಲ್ಯಾ ಶ್ರೀಕಾಂತಾಚಾರ್ಯರಿಂದ ಶ್ರೀ ಪುರಂದರದಾಸರ ಪದಗಳ ವೈಶಿಷ್ಟ್ಯ ವಿಷಯವಾಗಿ ಧಾರ್ಮಿಕ ಪ್ರವಚನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಶ್ರೀಮಠದ ಗೌರವ ಕಾರ್ಯದರ್ಶಿಗಳಾದ ಶ್ರೀ ಆರ್.ಎಸ್. ಬಾಬು ಅವರು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

## ಕೋಗಿಲು ಉಳಿಸಿ, ಅಕ್ರಮ ವಲಸಿಗರನ್ನು ತೊಲಗಿಸಿ: ಬಿಜೆಪಿಯಿಂದ ಬೃಹತ್ ಪ್ರತಿಭಟನೆ

• **ಉದಯವಾಹಿನಿ, ಬೆಂಗಳೂರು**

ಕೋಗಿಲು ಉಳಿಸಿ ಅಕ್ರಮ ವಲಸಿಗರನ್ನು ತೊಲಗಿಸಿ ಎನ್ನುವ ಘೋಷವಾಕ್ಯದೊಂದಿಗೆ ಇಂದು ಬಾಗಲೂರು ಮುಖ್ಯ ರಸ್ತೆಯ ಕೌಂಟ್ರಿ ಕ್ಲಬ್ ಹತ್ತಿರ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಪ್ರತಿಭಟನೆಗೆ ವೇದಿಕೆ ಹಾಕಲು ಅವಕಾಶ ಕೊಡುವುದಿಲ್ಲ, ಇದೇನು ಇವರ ಅಪ್ಪನ ಮನೆಯ ಸರ್ಕಾರವೇ ಎಂದು ಕಿಡಿಕಾರಿದರು. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ಇಂಥ ಗೊಡ್ಡು ಬೆದರಿಕೆಗೆ ಹೆದರುವವರು ಬಿಜೆಪಿ ಕಾರ್ಯಕರ್ತರಲ್ಲ, ಇದನ್ನು ಸಿದ್ದರಾಮಯ್ಯ - ಡಿ.ಕೆ.ಶಿವಕುಮಾರ್ ಅವರು ಅರ್ಥ ಮಾಡಿಕೊಳ್ಳಲಿ ಎಂದು ತಿಳಿಸಿದರು.

ಮನೆ ಕೆಡವಿದ್ದೇ ಕಾಂಗ್ರೆಸ್ ಸರ್ಕಾರ ಆದರೆ ಕೆ.ಸಿ.ವೇಣುಗೋಪಾಲ್ ಅವರು ಬೆದರಿಸಿದ ತಕ್ಷಣ ಸಿದ್ದರಾಮಯ್ಯನವರು ತಮ್ಮ ಸಿಎಂ ಕುರ್ಚಿ ಕಳೆದುಕೊಳ್ಳುವ ಭೀತಿಯಿಂದ ಅಕ್ರಮ ವಲಸಿಗರಿಗೆ ಮನೆ ಕೊಡಲು ರಾಜ್ಯ ಸರ್ಕಾರ ಮುಂದಾಗಿದೆ. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಕುರ್ಚಿ ಕಸಿದುಕೊಳ್ಳಬೇಕೆಂಬ ಕಾರಣಕ್ಕಾಗಿ ಕೆ.ಸಿ.ವೇಣುಗೋಪಾಲ್ ಮೂಲಕ ಸಿಎಂಗೆ ಧಮ್ಕಿ ಹಾಕಿಸಿ ಅವರೂ ಅಕ್ರಮ ವಲಸಿಗರಿಗೆ ಮನೆ ಕೊಡಲು ಹೊರಟಿದ್ದಾರೆ ಎಂದು ಟೀಕಿಸಿದರು. ಕೆ.ಸಿ.ವೇಣುಗೋಪಾಲ್ ಕರ್ನಾಟಕದ ಮುಖ್ಯಮಂತ್ರಿಯೇ ಅಥವಾ ಸಿದ್ದರಾಮಯ್ಯ ಮುಖ್ಯಮಂತ್ರಿಯೇ ಎಂದು ಕರ್ನಾಟಕದ ಜನರು ಪ್ರಶ್ನಿಸುತ್ತಿದ್ದಾರೆ ಎಂದು ನುಡಿದರು. ಹಿಂದೂಗಳಿಗೆ ಅಪಮಾನ ಮಾಡುತ್ತಿದ್ದಾರೆ. ರಾಜ್ಯದಲ್ಲಿ 38 ಲಕ್ಷ ಜನರು ಮನೆಗಾಗಿ ಅರ್ಜಿ ಹಾಕಿದ್ದಾರೆ. ಡಾ. ಅಂಬೇಡ್ಕರ್ ಅವರ ಹೆಸರು ಹೇಳುವ ಮುಖ್ಯಮಂತ್ರಿಗಳು ಕಳೆದ ಎರಡೂವರೆ ವರ್ಷದಲ್ಲಿ ಕಾಂಗ್ರೆಸ್ ಸರ್ಕಾರವು ಒಂದೇ ಒಂದು ಮನೆ ಕೊಟ್ಟಿಲ್ಲ ಎಂದು ದೂರಿದರು.

## ಕೋಗಿಲು ಬಡಾವಣೆ ಒತ್ತುವರಿ ಬಿಜೆಪಿ ಪ್ರಾಯೋಜಿತವೇ: ಕೃಷ್ಣ ಬೈರೇಗೌಡ ಪ್ರಶ್ನೆ

• **ಉದಯವಾಹಿನಿ, ಬೆಂಗಳೂರು**



ಕೋಗಿಲು ಬಡಾವಣೆಯಲ್ಲಿ ಒತ್ತುವರಿಯಾಗಿರುವುದು 2021ರಲ್ಲಿ. ಆಗ ಕರ್ನಾಟಕದಲ್ಲಿ ಯಾವ ಸರ್ಕಾರ ಆಡಳಿತದಲ್ಲಿ ಇತ್ತು. ಇದನ್ನು ಬಿಜೆಪಿ ಪ್ರಾಯೋಜಿತ ಒತ್ತುವರಿ ಎಂದು ಕರೆಯಬೇಕೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಪ್ರಶ್ನಿಸಿದ್ದಾರೆ.

ಕಂದಾಯಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ಒತ್ತುವರಿಗೆ ಬೆಂಬಲ ನೀಡಿದ್ದರೆ ತೆರವಿಗೆ ಮುಂದಾಗುತ್ತಿರಲಿಲ್ಲ. ಎರಡು ತಿಂಗಳ ಹಿಂದೆಯೇ ಕೋಗಿಲು ಬಡಾವಣೆಯಲ್ಲಿ 10 ಅನಧಿಕೃತ ಮನೆ ತೆರವು ಮಾಡಿಸಿ ಇತರರೂ ಖಾಲಿ ಮಾಡುವಂತೆ ಸೂಚಿಸಲಾಗಿತ್ತು. ಆದರೂ ತೆರವಿಗೆ ಮುಂದಾಗಿದ್ದರಿಂದ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿದೆ ಎಂದರು.

ಅಲ್ಲಿ ನೆಲೆಸಿರುವ ನಿವಾಸಿಗಳ ಸಮೀಕ್ಷೆ ಮುಗಿದಿದೆ. ವರದಿ ಬಂದ ನಂತರ ಪರ್ಯಾಯ ವ್ಯವಸ್ಥೆಯನ್ನೂ ಅರ್ಹರಿಗೆ ಮಾಡಲಾಗುತ್ತದೆ. ಮುಖ್ಯಮಂತ್ರಿ ಅವರು ಮಾನವೀಯ ನೆಲೆಯಲ್ಲಿ ಇದನ್ನು ನೋಡಿದ್ದಾರೆ. ಇದರಲ್ಲಿ ರಾಜಕೀಯ ಮಾಡುವುದು ಏನಿದೆ. ಕೆಲವರು ನನ್ನ ವಿರುದ್ಧ ಕೆಲವು ಕಾರಣಗಳಿಗೆ ಇದನ್ನು ರಾಜಕೀಯ ಅಸ್ತ್ರ ಮಾಡಿಕೊಂಡಿದ್ದಾರೆ. ಇದಕ್ಕೆಲ್ಲ ಜಗ್ಗದೇ ನನ್ನ ಒಳ್ಳೆಯ ಕೆಲಸ ಮುಂದುವರೆಸುವೆ ಎಂದರು. ಬಾಂಗ್ಲಾದೇಶದವರು ಅಲ್ಲಿ ನೆಲೆಸಿದ್ದರು ಎಂದು ಬಿಜೆಪಿ ನಾಯಕರೇ ಹೇಳುತ್ತಿದ್ದಾರೆ. ಹೊರ ದೇಶದವರು ಬಾರದಂತೆ ತಡೆಯುವುದು ಕೇಂದ್ರ ಗೃಹ ಸಚಿವಾಲಯದ ಕರ್ತವ್ಯ. ಅವರು ಬರುವವರೆಗೂ ಕೇಂದ್ರ ಗುಪ್ತಚರ ಇಲಾಖೆ ನಿದ್ದೆ ಮಾಡುತ್ತಿದೆಯಾ. ಇದು ಕೇಂದ್ರ ಗೃಹ ಸಚಿವಾಲಯದ ವೈಫಲ್ಯ, ನಾಲಾಯಕ್ ಎಂದು ಬಿಜೆಪಿಯವರು ಪ್ರತಿಭಟನೆ ನಡೆಸುತ್ತಿದ್ದಾರೆಯೇ ಎಂದು ಕೃಷ್ಣ ಬೈರೇಗೌಡ ಪ್ರಶ್ನಿಸಿದರು. ಇನ್ಫೋಸಿಸ್‌ಗೆ ನೀಡಿದ ಭೂಮಿ ಮಾರಾಟ ದೂರಿನ ಹಿನ್ನೆಲೆಯಲ್ಲಿ ತನಿಖೆ ನಡೆಸಲು ಬೆಂಗಳೂರು ಜಿಲ್ಲಾಧಿಕಾರಿ ಅವರಿಗೆ ಸೂಚನೆ ನೀಡಲಾಗಿದೆ ಎಂದರು.

## ಪರಿಸರ ರಕ್ಷಣೆಗೆ 5 ಕೋಟಿ ಸಸಿ ನೆಡುವ ಯೋಜನೆ: ಸಿಎಂ ಸಿದ್ದರಾಮಯ್ಯ

• **ಉದಯವಾಹಿನಿ, ಬೆಂಗಳೂರು**

ಪರಿಸರವನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಅದಕ್ಕಾಗಿ ಪರಿಸರದ ಬಗ್ಗೆ ಜ್ಞಾನ ಅಗತ್ಯ. ಈ ಕುರಿತು ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಪ್ರತಿವರ್ಷ 3-5 ಕೋಟಿ ಸಸಿ ನೆಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು. ಕರ್ನಾಟಕ ಚಿತ್ರಕಲಾ ಪರಿಷತ್ತು ವತಿಯಿಂದ ವಗರದ ಕುಮಾರ ಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತು ಆವರಣದಲ್ಲಿ ಆಯೋಜಿಸಲಾಗಿದ್ದ 23ನೇ ಚಿತ್ರಸಂತೆ ಕಾರ್ಯಕ್ರಮ ಉದ್ಘಾಟಿಸಿ ಮುಖ್ಯಮಂತ್ರಿಗಳು ಮಾತನಾಡಿದರು.

ಮುಖ್ಯಮಂತ್ರಿಯಾಗಿ 8ನೇ ಬಾರಿಗೆ ಚಿತ್ರ ಸಂತೆಯಲ್ಲಿ ಭಾಗವಹಿಸುತ್ತಿದ್ದೇನೆ ಎನ್ನುವುದು ಖುಷಿಯ ವಿಚಾರ. ಕಲಾವಿದರನ್ನು ಪ್ರೋತ್ಸಾಹಿಸುವುದು, ಅವರ ಚಿತ್ರಗಳ ಪ್ರದರ್ಶನ ಹಾಗೂ ಅವುಗಳ ಮಾರಾಟಕ್ಕೆ ವೇದಿಕೆ ಸೃಷ್ಟಿ ಮಾಡುವ ಕೆಲಸವನ್ನು ಚಿತ್ರಕಲಾ ಪರಿಷತ್ತು ಅರವತ್ತು ವರ್ಷಗಳಿಂದ ಮಾಡುತ್ತಾ ಬಂದಿದೆ. ಚಿತ್ರಸಂತೆ ತನ್ನ 23ನೇ ವರ್ಷಕ್ಕೆ ಕಾಲಿಟ್ಟಿದೆ. ಸುಮಾರು 22 ರಾಜ್ಯಗಳು, ನಾಲ್ಕು ಕೇಂದ್ರಾಡಳಿತ ಪ್ರದೇಶಗಳ ಕಲಾವಿದರು ಕಾರ್ಯಕ್ರಮದಲ್ಲಿ


ಉದಯವಾಹಿನಿ ಚಿತ್ರ

ಭಾಗವಹಿಸಿದ್ದಾರೆ. ಪ್ರತಿ ವರ್ಷ ಮೂರರಿಂದ ಐದು ಕೋಟಿ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದ ಹಮ್ಮಿಕೊಳ್ಳಲಾಗಿದೆ.

ಯಾವುದೇ ಪ್ರದೇಶದಲ್ಲಿ ಶೇ. 30ರಷ್ಟು ಕಾಡು ಇರಬೇಕು. ನಮ್ಮಲ್ಲಿ ಶೇಕಡ 20ರಷ್ಟು ಅರಣ್ಯ ಪ್ರದೇಶವಿದೆ. ಇದನ್ನು ಹೆಚ್ಚು ಮಾಡಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುವುದು. ಸಾಲು ಮರದ ತಿಮ್ಮಕ್ಕನವರಂತೆ ಸಾರ್ವಜನಿಕರು ಗಿಡಗಳನ್ನು ನೆಡಬೇಕು. ಮಕ್ಕಳನ್ನು ಸಾಕಿದಂತೆ ಗಿಡಮರಗಳನ್ನು ಅವರು ಸಾಕಿದ್ದ ಕಾರಣ ಹಲವು ಪ್ರಶಸ್ತಿಗಳು ದೊರೆಯಿತು. ಅವರ ಆತ್ಮಕ್ಕೆ ಶಾಂತಿ ದೊರಕಬೇಕಾದರೆ ನಾವೆಲ್ಲರೂ ಗಿಡ ಬೆಳೆಸುವ ಪ್ರಯತ್ನವನ್ನು ಮಾಡಬೇಕು. ಪರಿಸರ ರಕ್ಷಣೆಗಾಗಿ ಹೋರಾಟವನ್ನೇ ಕೈಗೊಂಡ ಅನೇಕರು ನಮ್ಮ ನಡುವೆಯೇ ಇದ್ದಾರೆ. ಗಿಡ ನೆಡಲು ಬಹಳ ಖರ್ಚು ಆಗುವುದಿಲ್ಲ. ಮನಸ್ಸು ಮಾಡಬೇಕಷ್ಟೆ. ಸರ್ಕಾರ ಕೂಡ ಈ ದಿಕ್ಕಿನಲ್ಲಿ ಹೆಚ್ಚಿನ ಆಸಕ್ತಿ ವಹಿಸಲಿದೆ ಎಂದು ತಿಳಿಸಿದರು.

**ಪ್ರತಿ ಜಿಲ್ಲೆಯಲ್ಲಿಯೂ ಸಾಧಕರ ವಸ್ತುಸಂಗ್ರಹಾಲಯಕ್ಕೆ ಬೇಡಿಕೆಯಿದ್ದು ಸರ್ಕಾರ ಅದನ್ನು ಸಕಾರಾತ್ಮಕವಾಗಿ ಸ್ವೀಕಾರ ಮಾಡಲಿದೆ. ಈ ಬಾರಿಯ ಚಿತ್ರಸಂತೆಯ ಧ್ಯೇಯ ವಾಕ್ಯ ಪರಿಸರಕ್ಕೆ ಸಮರ್ಪಿಸಲಾಗಿದೆ. ಪರಿಸರವನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಅದಕ್ಕಾಗಿ ಪರಿಸರದ ಬಗ್ಗೆ ಜ್ಞಾನ ಅಗತ್ಯ. ಈ ಕುರಿತು ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬೆಂಗಳೂರು ಸೇರಿದಂತೆ ದೇಶದ ಅನೇಕ ರಾಜಧಾನಿಗಳಲ್ಲಿ ಪರಿಸರ ಮಾಲಿನ್ಯ ಹೆಚ್ಚಾಗಿದ್ದು, ದೆಹಲಿಯಲ್ಲಿ ಬದುಕಲು ಸಾಧ್ಯವಿಲ್ಲದ ವಾತಾವರಣ ನಿರ್ಮಾಣವಾಗುತ್ತಿದೆ. ಪರಿಸರದ ರಕ್ಷಣೆ ಇಂದಿನ ಅಗತ್ಯವಾಗಿದೆ ಎಂದು ಹೇಳಿದರು.**

# ಸಿಂಗೇನ ಅಗ್ರಹಾರದಲ್ಲಿ ಬರಲಿದೆ ಎಪಿಎಂಸಿಯ ಮೆಗಾ ಮಾರುಕಟ್ಟೆ: ಕಲಾಸಿಪಾಳ್ಯ ಮಾರುಕಟ್ಟೆಯೂ ಸ್ಥಳಾಂತರ

### 23 ವರ್ಷಗಳ ಹಿಂದೆಯೇ 42 ಎಕರೆ 12 ಗುಂಟೆ ಸರಕಾರಿ ಭೂಮಿಯನ್ನು ಸರಕಾರ ವಶಪಡಿಸಿಕೊಂಡಿತ್ತು

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ಹೊರವಲಯದ ಸಿಂಗೇನ ಅಗ್ರಹಾರದಲ್ಲಿ ಹಣ್ಣು-ತರಕಾರಿ ಸಗಟು ಮಾರಾಟಕ್ಕಾಗಿ ಮೆಗಾ ಮಾರುಕಟ್ಟೆ ನಿರ್ಮಿಸಲು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಮುಂದಾಗಿದೆ.

ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ವ್ಯಾಜ್ಯದಲ್ಲಿದ್ದ ಸಿಂಗೇನ ಅಗ್ರಹಾರ ಗೂಳಿಮಂಗಲದ ಸುಮಾರು 42 ಎಕರೆ ಜಾಗ ಎಪಿಎಂಸಿಯ ಸುಪರ್ದಿಗೆ ಬಂದಿದ್ದು,ಈ ಜಾಗದಲ್ಲಿ ಮೆಗಾ ಮಾರುಕಟ್ಟೆ ನಿರ್ಮಿಸಲು ಎಪಿಎಂಸಿ ತೀರ್ಮಾನಿಸಿದೆ.

23 ವರ್ಷಗಳ ಹಿಂದೆಯೇ 42 ಎಕರೆ 12 ಗುಂಟೆ ಸರಕಾರಿ ಭೂಮಿಯನ್ನು ಸರಕಾರ ವಶಪಡಿಸಿಕೊಂಡಿತ್ತು. ಈ ಜಾಗದಲ್ಲಿ ಕೃಷಿ ಮಾಡುತ್ತಿದ್ದ ರೈತರು ನ್ಯಾಯಾಲಯದ ಮೊರೆ ಹೋಗಿದ್ದರು. 2025ರ ಜುಲೈ ತಿಂಗಳಲ್ಲಿ ಸುಪ್ರೀಂಕೋರ್ಟ್ ಎಪಿಎಂಸಿ ಪರವಾಗಿ ತೀರ್ಪು ನೀಡಿದೆ. ತಹಶೀಲ್ದಾರರು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳು ಜಮೀನಿನ ಸರ್ವೆ ಕಾರ್ಯ ಕೈಗೊಂಡು, ಎಪಿಎಂಸಿ ಸುಪರ್ದಿಗೆ ಜಮೀನನ್ನು ಹಸ್ತಾಂತರಿಸಿದ್ದಾರೆ. ಈ ಜಾಗದಲ್ಲಿ ಹಣ್ಣು ಮತ್ತು ತರಕಾರಿ ಸಗಟು ಮಾರುಕಟ್ಟೆ ನಿರ್ಮಿಸಲು ನಿರ್ಧರಿಸಲಾಗಿದೆ. ಈ ಜಾಗದಲ್ಲಿ ಕೃಷಿ ಮಾಡುತ್ತಿದ್ದ ರೈತರಿಗೆ ಪರಿಹಾರ ನೀಡಲಾಗುವುದು, ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸಿಂಗೇನ ಅಗ್ರಹಾರದ ಹಣ್ಣಿನ ವಿಭಾಗದ ಕಾರ್ಯದರ್ಶಿ ಎಂ.ವಿ. ಸುಮಾ ತಿಳಿಸಿದರು.

2013ರ ಭೂಪರಿಹಾರ ಕಾಯಿದೆಯಂತೆ (1-1-2014ರ ಮಾರುಕಟ್ಟೆ ದರ) 212 ಕೋಟಿ ರೂ.ಗೂ ಅಧಿಕ ಮೊತ್ತವನ್ನು ರೈತರಿಗೆ ಪರಿಹಾರ ನೀಡಲು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಠೇವಣಿ ಇಡಲಾಗಿದೆ. ಈ ಜಾಗವನ್ನು ತಮ್ಮದಾಗಿಸಿಕೊಳ್ಳಲು ರಾಜ್ಯದ ನಾನಾ ಎಪಿಎಂಸಿಗಳಲ್ಲಿದ್ದ ಹಣವನ್ನು ಸಾಲದ ರೂಪದಲ್ಲಿ ಒದಗಿಸಿಕೊಡಲು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಮತ್ತು ಇಲಾಖೆ ನಿರ್ದೇಶಕ (ಎಪಿಎಂಸಿ) ಶಿವಾನಂದ ಕಾಪಸೆ ಸಹಕಾರ ನೀಡಿದ್ದಾರೆ.

42 ಎಕರೆ ಜಾಗದಲ್ಲಿ ಸುಮಾರು 6-7 ಎಕರೆ ಭೂಮಿಯನ್ನು ಬೆಂಗಳೂರು ಬ್ಯುಸಿನೆಸ್ ಕಾರಿಡಾರ್‌ಗೆ ಬಿಟ್ಟುಕೊಡಲಾಗುತ್ತದೆ. ಉಳಿದ ಜಾಗದಲ್ಲಿ ಮೆಗಾ ಮಾರುಕಟ್ಟೆ ಹಾಗೂ ಇತರೆ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದರು.

ಸಿಂಗೇನ ಅಗ್ರಹಾರದಲ್ಲಿ ಸುಸಜ್ಜಿತ ಮೆಗಾ ಮಾರುಕಟ್ಟೆ ನಿರ್ಮಿಸಲು ತುರ್ತು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಆ ಮೂಲಕ ದೇಶದ ನಾನಾ ಭಾಗಗಳಿಂದ ಹಣ್ಣು-ತರಕಾರಿಗಳನ್ನು ಹೊತ್ತು ತರುವ ರೈತರು ಮತ್ತು ಮಾರಾಟಗಾರರಿಗೆ ಸೂಕ್ತ ಸೌಲಭ್ಯ ಕಲ್ಪಿಸಲಾಗುವುದು ಎಂದಿದ್ದಾರೆ ಶಿವಾನಂದ ಪಾಟೀಲ್, ಸಚಿವರು, ಕೃಷಿ ಮಾರುಕಟ್ಟೆ. ಗೂಳಿಮಂಗಲದ 42 ಎಕರೆ ಜಾಗ ಎಪಿಎಂಸಿ ಸ್ವಾಧೀನಕ್ಕೆ ಬಂದಿದ್ದು ಖುಷಿಯ ಸಂಗತಿ. ಸಿಂಗೇನ ಅಗ್ರಹಾರದಲ್ಲಿ ಮೆಗಾ ಮಾರುಕಟ್ಟೆ ಸ್ಥಾಪನೆ ಯಾದರೆ ಹಣ್ಣು ಮತ್ತು ತರಕಾರಿ ಸಗಟು ಮಾರಾಟಗಾರರಿಗೆ ತುಂಬಾ ಅನುಕೂಲವಾಗಲಿದೆ. ರೈತರು ಮತ್ತು ವರ್ತಕರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡುವಲ್ಲಿ ಎಪಿಎಂಸಿ ಅಧಿಕಾರಿಗಳು ವಿಶೇಷ ಒತ್ತು ನೀಡಬೇಕು ಎಂದಿದ್ದಾರೆ ಗೌರವಾಧ್ಯಕ್ಷರು, ಬೆಂಗಳೂರು ಫ್ರೂಟ್ಸ್ ಮ್ಯಾಂಗೊ ಹೋಲ್‌ಸೇಲ್ ಕಮಿಷನ್ ಏಜೆಂಟ್ಸ್ ಅಸೋಸಿಯೇಷನ್, ಸಿಂಗೇನ ಅಗ್ರಹಾರ



**ಹಣ್ಣು, ತರಕಾರಿ ಮಾರಾಟಕ್ಕೆ ಅನುಕೂಲ**

**ದೇಶದ ನಾನಾ ಭಾಗಗಳಿಂದ ಹಣ್ಣುಗಳ ಆಗಮನ**

**ಆಂಧ್ರದಿಂದ ಮೂಸಂಬಿ, ಕೊಡಗು, ಮಹಾರಾಷ್ಟ್ರ, ರಾಜಸ್ಥಾನ ಮತ್ತಿತರ ಕಡೆಗಳಿಂದ ಕಿತ್ತಳೆ ಹಣ್ಣು, ಉತ್ತರ ಪ್ರದೇಶ, ಹಿಮಾಚಲ ಪ್ರದೇಶದಿಂದ ಸೇಬು, ಉತ್ತರ ಕರ್ನಾಟಕದಿಂದ ದಾಳಿಂಬೆ ಹೀಗೆ ನಾನಾ ಭಾಗಗಳಿಂದ ಹಣ್ಣುಗಳು ಬರುತ್ತವೆ. ಅದೇ ರೀತಿ ಈ ಮಾರುಕಟ್ಟೆಯಿಂದ ಹೊರ ರಾಜ್ಯ ಹಾಗೂ ಹೊರ ರಾಷ್ಟ್ರಗಳಿಗೂ ಹಣ್ಣು ರಫ್ತಾಗುತ್ತದೆ.**

**ಕಲಾಸಿಪಾಳ್ಯ ಮಾರುಕಟ್ಟೆಯೂ ಸ್ಥಳಾಂತರ**

**ಕಲಾಸಿಪಾಳ್ಯ ಮಾರುಕಟ್ಟೆಯ ಜಾಗ ಜಿಬಿಎಗೆ ಸೇರಿದ್ದು, ಮಾರುಕಟ್ಟೆಯಿರುವ 2 ಎಕರೆ ಜಾಗಕ್ಕೆ ವಾರ್ಷಿಕ 42 ಲಕ್ಷ ರೂ. ನೆಲ ಬಾಡಿಗೆ ಪಾವತಿಸಲಾಗುತ್ತಿದೆ. ಪ್ರತಿ ವರ್ಷ ಒಂದೊಂದು ಲಕ್ಷ ರೂ. ಬಾಡಿಗೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ತರಕಾರಿ ಮಾರುಕಟ್ಟೆಯನ್ನೂ ಗೂಳಿಮಂಗಲಕ್ಕೆ ಸ್ಥಳಾಂತರಿಸಲು ಉದ್ದೇಶಿಸಲಾಗಿದೆ.**

# ಕೈಗಾರಿಕೆ ಸ್ಥಾಪನೆಗೆ ಅಧಿಸೂಚನೆ ಹೊರಡಿಸಲು ಒತ್ತಡ ಹೇರುವಂತೆ ಮನವಿ

• ಉದಯವಾಹಿನಿ, ಶಿಡ್ಲಘಟ್ಟ

ಕ್ಷೇತ್ರದಲ್ಲಿ ಕೈಗಾರಿಕೆ ಸ್ಥಾಪನೆ ಮಾಡಲು ಈಗಾಗಲೇ ಕೆಐಎಡಿಬಿಯಿಂದ ಅಧಿಸೂಚನೆ ಹೊರಡಿಸಲಾಗಿದೆಯಾದರೂ ತ್ವರಿತವಾಗಿ ಕೈಗಾರಿಕೆಗಳ ಸ್ಥಾಪನೆಗಾಗಿ ಅಂತಿಮ ಅಧಿಸೂಚನೆ ಹೊರಡಿಸುವಂತೆ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ರಾಜ್ಯ ರೈತ ಸಂಘ, ಮತ್ತು ಹಸಿರು ಸೇನೆ ರೈತ ಮುಖಂಡರು ಆದಿಚುಂಚನಗಿರಿ ಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿಗೆ ಮನವಿ ಸಲ್ಲಿಸಿದರು. ತಾಲ್ಲೂಕಿನ


ಉದಯವಾಹಿನಿ ಚಿತ್ರ

ಜೆ.ವೆಂಕಟಾಪುರದ ಬಳಿ ಭೇಟಿ ಮಾಡಿ ಮನವಿ ಸಲ್ಲಿಸಿದರು. ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ಸುಮಾರು 13 ಹಳ್ಳಿಗಳಲ್ಲಿ 2823 ಎಕರೆ ಜಮೀನು, ಭೂಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ಸರ್ಕಾರಿ ಗೋಮಾಳ ಗುಂಡುತೋಪು, ಖರಾಬು, ಇತರೆ ಸೇರಿದಂತೆ 1098 ಎಕರೆ, ಪಿ.ಎಸ್.ಎಲ್ ಕಂಪನಿಗೆ ಸೇರಿದ್ದು ಎನ್ನಲಾದ 525 ಎಕರೆ ಒಟ್ಟು 1623 ಎಕರೆ ಜಮೀನು ಈಗಾಗಲೇ ಸರ್ಕಾರದ ವಶದಲ್ಲಿದೆ. ರೈತರ ಹೆಸರಿನಲ್ಲಿ 1200 ಎಕರೆ ಇದೆ. ಅದರಲ್ಲಿ ಬಹುಪಾಲು ರೈತರು ಕೆ.ಐ.ಎ.ಡಿ.ಬಿ ಕಚೇರಿಗೆ ತೆರಳಿ ಜಮೀನು ನೀಡಲು ಒಪ್ಪಿಗೆ ಸೂಚಿಸಿದ್ದಾರೆ. ಪ್ರತಿ ವರ್ಷ ಕಾಲೇಜುಗಳಿಂದ ಪದವಿ ಮುಗಿಸಿ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹೊರಗೆ ದೂರದ ನಗರಗಳಿಗೆ ಹೋಗಿ ಉದ್ಯೋಗ ಸಿಗದೆ ನಿರುದ್ಯೋಗಿಗಳಾಗಿದ್ದಾರೆ. ಫಲವತ್ತಾದ ಕೃಷಿ ನೀರಾವರಿ ಪ್ರದೇಶವನ್ನು ಕೈಬಿಟ್ಟು, ಉಳಿದ ಜಮೀನುಗಳನ್ನು ಕೆ.ಐ.ಎ.ಡಿ.ಬಿ ವಶಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ಬಗ್ಗೆ ಒಂದು ವರ್ಷದಿಂದ ಸರ್ಕಾರದ ಗಮನ ಸೆಳೆಯಲಾಗುತ್ತಿದೆಯಾದರೂ ಗಮನ ಹರಿಸುತ್ತಿಲ್ಲ. ತಾವು ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ ಸರ್ಕಾರದ ಗಮನ ಸೆಳೆಯುವ ಮೂಲಕ ಶಿಡ್ಲಘಟ್ಟ ತಾಲ್ಲೂಕನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕು ಎಂದು ಸ್ವಾಮೀಜಿಗೆ ಮನವಿ ಮಾಡಿದರು. ಸ್ವಾಮೀಜಿ ಮಾತನಾಡಿ, ಈ ವಿಚಾರದ ಕುರಿತು ಸಮಗ್ರವಾಗಿ ಚರ್ಚೆ ನಡೆಸಿ ಅಂತಿಮ ತೀರ್ಮಾನಕ್ಕೆ ಬರೋಣ ಎಂದು ಭರವಸೆ ನೀಡಿದರು.

# ಸಫಾರಿ ಮರು ಆರಂಭವಾದಲ್ಲಿ ಉಗ್ರ ಹೋರಾಟ

■ ಸಫಾರಿ ಹೆಸರಿನಡಿ ಕೋಟ್ಯಾಂತರ ಹಣವನ್ನ ಲೂಟಿ ■ ರೈತರ ಅಭಿಪ್ರಾಯ ಸಂಗ್ರಹಣೆಗೆ ಮುಂದಾಗಬೇಕು

• ಉದಯವಾಹಿನಿ, ಗುಂಡ್ಲುಪೇಟೆ

ಬಂಡೀಪುರ ಸಫಾರಿಯನ್ನ ಮರು ಆರಂಭಗೊಳಿಸಿದ್ದೆಯಾದಲ್ಲಿ ಉಗ್ರ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ, ಬಂಡವಾಳ ಶಾಹಿಗಳ ಪರವಾಗಿ ಸರ್ಕಾರ ವಕಾಲತ್ತು ವಹಿಸಿದ್ದೆಯಾದಲ್ಲಿ ಅದರ ಪರಿಣಾಮವನ್ನ ಎದುರಿಸಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಬಡಗಲಪುರ ನಾಗೇಂದ್ರ ಬಣದ ಗುಂಡ್ಲುಪೇಟೆ ತಾಲ್ಲೂಕು ಅಧ್ಯಕ್ಷ ಹಂಗಳ ದಿಲೀಪ್ ಎಚ್ಚರಿಕೆ ನೀಡಿದರು.

**ರೈತ ಸಂಘ ಎಚ್ಚರಿಕೆ**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಕರ್ತರೊಟ್ಟಿಗೆ ಮಾತನಾಡಿದ ಅವರು ಸಫಾರಿ ಹೆಸರಿನಡಿ ಕೋಟ್ಯಾಂತರ ಹಣವನ್ನ ಲೂಟಿ ಹೊಡೆಯಲಾಗಿದೆ ಮೊದಲು ಇದರ ಕುರಿತು ಸಂಪೂರ್ಣ ತನಿಖೆಯಾಗಲಿ, ಸಫಾರಿ ಸ್ಥಗಿತಗೊಂಡ ನಂತರದ ದಿನಮಾನಗಳಲ್ಲಿ ಯಾವುದೇ ಮಾನವ ವನ್ಯಜೀವಿ ಸಂಘರ್ಷವಾಗಿಲ್ಲ ಆದರೆ ಸಿದ್ದರಾಮಯ್ಯ ಅವರು ಸಭೆ ನಡೆಸಿ ಬಂಡೀಪುರ ಶೋಧನ ಸಮಿತಿ ರಚಿಸಿ ಅದರ ವರದಿಯ ಆಧಾರದ ಮೇಲೆ ಹಂತಹಂತವಾಗಿ ಸಫಾರಿ ಆರಂಭಕ್ಕೆ ಹಿಂಬಾಗಿಲ ಪ್ರಯತ್ನಕ್ಕೆ ಮುಂದಾಗಿರುವುದು ಖಂಡನೀಯ ಎಂದರು. ಈಗಾಗಲೆ ಸ್ತಬ್ಧವಾಗಿರುವ ಸಫಾರಿ ಆರಂಭಕ್ಕೆ ಅಧ್ಯಯನ ತಂಡದ ಸಮಿತಿ ರಚನೆಗೆ ತೀರ್ಮಾನ ಕೈಗೊಳ್ಳಲಾಗಿದ್ದು ಸಫಾರಿ ಆರಂಭದ ಸಾಧಕ ಬಾಧಕಗಳ ವರದಿ ಸಂಗ್ರಹಣೆಗೆ ಮುಂದಾಗಿರುವುದಕ್ಕೆ ರೈತ ಸಂಘ ವಿರೋಧವಿದೆ ಎಂದರು. ವನ್ಯಜೀವಿ ಮಂಡಳಿ ಸಭೆ ನಡೆಸಿ ಸಫಾರಿ ಆರಂಭಕ್ಕೆ ಮುತುವರ್ಜಿ ತೋರಿಸುವ ಮುಖ್ಯಮಂತ್ರಿಗಳು ರೈತ ಸಮುದಾಯದ ಸಮಸ್ಯೆಗಳ ಕಡೆಗೂ ಗಮನಹರಿಸಬೇಕು, ಸಮಿತಿ ರಚನೆಗೂ ಮುಂಚೆ ಅರಣ್ಯದಂಚಿನ ರೈತರ ಅಭಿಪ್ರಾಯ ಸಂಗ್ರಹಣೆಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

**ಸಫಾರಿ ಕಚೇರಿ ಬಳಿಯೇ ಹೋರಾಟ**

ಪ್ರಸಕ್ತವಾಗಿ ಬಂಡೀಪುರಕ್ಕೆ ಸಫಾರಿ ಹಾಗೂ ಇತರ ಮೂಲಗಳಿಂದ ಹರಿದುಬಂದ ಆದಾಯದಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲ ಅರಣ್ಯದೊಳಗೆ ಕೆರೆಕಟ್ಟೆಗಳ ನಿರ್ಮಾಣವಾಗಿಲ್ಲ ವನ್ಯಜೀವಿಗಳಿಂದ ಸಾವನ್ನಪ್ಪಿದ ರೈತರ ಜಾನುವಾರುಗಳಿಗೂ ಸಹ ನ್ಯಾಯಯುತ ಪರಿಹಾರ ನೀಡಿಲ್ಲ ಎಂದು ಹರಿಹಾಯ್ದರು. ಕೆಲವರ ಹಿತಕ್ಕಾಗಿ ರೈತರಿಗೆ ಉಪದ್ರ ನೀಡುವ ಸಾಹಸಕ್ಕೆ ಮುಂದಾದರೆ ಸಫಾರಿ ಕಚೇರಿ ಬಳಿಯೇ ಹೋರಾಟ ಬಲಗೊಳ್ಳುತ್ತದೆ ಎಂದು ಎಚ್ಚರಿಸಿದರು.

**ಕೋಟ್ಯಾಂತರ ರೂ. ದುರುಪಯೋಗ**

ಬಂಡೀಪುರ ಪ್ರತಿನಿತ್ಯ ಬರುವ ಆದಾಯದ ಹಣದಲ್ಲಿ ವ್ಯಾಪಕ ಗೋಲ್ಮಾಲ್ ನಡೆದಿದೆ, ಈ ಹಿಂದೆ ಸಫಾರಿ ಸಂದರ್ಭದಲ್ಲಿ ಇಲಾಖೆಗೆ ಬಂದ ಆದಾಯವು ಸದ್ಬಳಕೆಯಾಗಿಲ್ಲ ಇತ್ತೀಚೆಗೆ ಹಸಿರು ಶುಲ್ಕ ಯೋಜನೆ ಜಾರಿ ಮಾಡಿದ ಬಳಿಕವೂ ಆದಾಯಕ್ಕೆ ಕೊರತೆ ಇರಲಿಲ್ಲ, ಸಿಬ್ಬಂದಿಗಳಿಗೆ ಸಂಬಳದ ಹಣ ಪಾವತಿ ಮಾಡಿದರೂ ಸಹ ಉಳಿದಂತ ಹಣ ದುರುಪಯೋಗವಾಗಿದೆ ಎಂದು ಆರೋಪಿಸಿದರು.

ರೆಸಾರ್ಟ್‌ಗಳ ಉಳಿವಿಗೆ ಹಾಗೂ ಸಫಾರಿಯಲ್ಲಿ ಕೆಲಸ ಮಾಡುತ್ತಿದ್ದ ಕೆಲವೇ ಕೆಲವರ ಹಿತಕ್ಕಾಗಿ ಪ್ರವಾಸೋದ್ಯಮದ ಹೆಸರೇಳುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ, ಮೊದಲು ಗೋಪಾಲಸ್ವಾಮಿ ಬೆಟ್ಟದ ಅಭಿವೃದ್ಧಿ ಕಡೆಗೆ ಗಮನ ಹರಿಸಿ, ಬೆಟ್ಟದಲ್ಲಿ, ತಪ್ಪಲಿನಲ್ಲಿ ಯಾವುದೇ ಮೂಲಭೂತ ಸೌಕರ್ಯವಿಲ್ಲದೆ ಭಕ್ತರು ಪ್ರತಿನಿತ್ಯ ಪರದಾಡುತ್ತಿದ್ದಾರೆ,ಇಂತಹ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗದೆ ರೆಸಾರ್ಟ್ ಮಾಫೀಯಾಗೆ ಅವಕಾಶ ಕಲ್ಪಿಸುವುದು ಖಂಡನೀಯ ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಮಲ್ಲಯ್ಯನಪುರ ಶಿವಣ್ಣ, ನಿಟ್ರೆ ಸ್ವಾಮಿ, ಮಹದೇವ ಶೆಟ್ಟಿ, ಶಿವಕುಮಾರ್, ಪ್ರವೀಣ್, ಮಾದೇವಪ್ಪ, ಬಸವೇಶ್ ಚನ್ನಮಲ್ಲಿಪುರ ಸುರೇಶ್ ಸೋಮೇಶ್ ಪ್ರಕಾಶ್ ಇತರರು ಹಾಜರಿದ್ದರು.

# ಮಿನಿ ನ್ಯೂಸ್

## ದೇವರಾಯನದುರ್ಗ ಅರಣ್ಯಪ್ರದೇಶದಲ್ಲಿ 11 ವಾನರಗಳ ನಿಗೂಢ ಸಾವು

• ಉದಯವಾಹಿನಿ, ತುಮಕೂರು

ತಾಲ್ಲೂಕಿನ ದೇವರಾಯನದುರ್ಗ ಅರಣ್ಯ ಪ್ರದೇಶದಲ್ಲಿ ಎರಡು ದಿನಗಳ ಅಂತರದಲ್ಲಿ 11 ವಾನರಗಳು ನಿಗೂಢವಾಗಿ ಮೃತಪಟ್ಟಿದ್ದು , ವಿಷ ಪ್ರಾಶನವಾಗಿರುವ ಶಂಕೆ ವ್ಯಕ್ತವಾಗಿದೆ. ದೇವರಾಯನದುರ್ಗ, ದುರ್ಗದಹಳ್ಳಿ ನಡುವಿನ ಅರಣ್ಯ ಪ್ರದೇಶದಲ್ಲಿ ಕಳೆದ ಎರಡು ದಿನಗಳಿಂದ 11 ವಾನರಗಳ ಮೃತದೇಹಗಳು ಪತ್ತೆಯಾಗಿವೆ. ರಸ್ತೆಬದಿ ಸತ್ತುಬಿದ್ದಿದ್ದ ವಾನರಗಳನ್ನು ಗಮನಿಸಿದ ಸ್ಥಳೀಯರು ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳು ಅರಣ್ಯ ಪ್ರದೇಶದಲ್ಲಿ ಹುಡುಕಾಟ ನಡೆಸಿದ್ದು, ಮೊದಲ ದಿನ 7 ವಾನರಗಳ ಶವ, 2ನೇ ದಿನದಲ್ಲಿ 4 ವಾನರಗಳ ಶವ ಪತ್ತೆಯಾಗಿದ್ದು, 11 ಮೃತದೇಹಗಳಲ್ಲಿ 9 ಸಾಮಾನ್ಯ ಕೋತಿಗಳಾಗಿದ್ದು, 2 ಲಂಗೂರ ಪ್ರಭೇದದ ಕೋತಿಗಳು ಎನ್ನಲಾಗಿದೆ. ಕೋತಿಗಳು ಅನುಮಾನಸ್ಪದವಾಗಿ ಸಾವನ್ನಪ್ಪಿದ್ದು, ವಿಷಪ್ರಾಶನವಾಗಿರುವ ಶಂಕೆ ವ್ಯಕ್ತವಾಗಿದ್ದು, ಸ್ಯಾಂಪಲ್‌ಗಳನ್ನು ಬೆಂಗಳೂರಿನ ಪಶು ವೈದ್ಯಕೀಯ ವಿಭಾಗಕ್ಕೆ ಕಳುಹಿಸಲಾಗಿದೆ.

## ಶೋಷಿತರ ಶೌರ್ಯದ ದ್ಯೋತಕ ಕೋರೆಗಾಂವ್: ಪ್ರೊ. ಬೀರಯ್ಯ

• ಉದಯವಾಹಿನಿ, ರಾಮನಗರ

ಭೀಮಾ ಕೋರೆಗಾಂವ್ ಯುದ್ಧದಲ್ಲಿ ಮಹರ್ ಸೈನಿಕರು ಗಳಿಸಿದ ಜಯವು, ದೌರ್ಜನ್ಯದ ವಿರುದ್ಧ ಶೋಷಿತರ ದಿಗ್ವಿಜಯವಾಗಿದೆ. ಚರಿತ್ರೆಯ ಪುಟಗಳಲ್ಲಿ ಹುದುಗಿದ್ದ ಶೋಷಿತ ಸಮುದಾಯದ ಈ ಶೌರ್ಯವನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರು ದೇಶಕ್ಕೆ ಸಾರಿದರು ಎಂದು ಪ್ರೊ. ಬೀರಯ್ಯ ಹೇಳಿದರು. ವಿವಿಧ ಸಂಘಟನೆಗಳು ನಗರದ ವಾಟರ್ ಟ್ಯಾಂಕ್ ವೃತ್ತದಲ್ಲಿ ಹಮ್ಮಿಕೊಂಡಿದ್ದ ಭೀಮಾ ಕೋರೆಗಾಂವ್ ವಿಜಯೋತ್ಸವ ಮತ್ತು ಮಾತೆ ಸಾವಿತ್ರಿಬಾಯಿ ಫುಲೆ ಅವರ ಜನ್ಮಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪೇಶ್ವೆ ಸೈನ್ಯವನ್ನು ಬಗ್ಗುಬಡಿದ ಮಹರ್ ಸೈನಿಕರು, ಅಸ್ಪೃಶ್ಯತೆ ಹೆಸರಿನಲ್ಲಿ ಶತಮಾನಗಳಿಂದ ನಡೆಯುತ್ತಿದ್ದ ಶೋಷಣೆ ವಿರುದ್ಧ ಸಿಡಿದೆದ್ದರು ಎಂದರು.


ಕೋರೆಗಾಂವ್ ಯುದ್ಧದ ವಿಜಯೋತ್ಸವವು ದೇಶದ ಶೋಷಿತ ಸಮುದಾಯಗಳ ಸ್ವಾಭಿಮಾನ ಮತ್ತು ಅಸ್ಮಿತೆಯ ಪ್ರತೀಕವಾಗಿದೆ. ಅಂಬೇಡ್ಕರ್ ಅವರು ಪ್ರತಿ ವರ್ಷ ಕೋರೆಗಾಂವ್ ವಿಜಯ ಸ್ಮಾರಕಕ್ಕೆ ಭೇಟಿ ನೀಡಿ ಗೌರವ ಸಲ್ಲಿಸುತ್ತಿದ್ದರು. ನಾವು ಸಹ ನಮ್ಮ ಈ ಐತಿಹಾಸಿಕ ವಿಜಯದ ಸಂಭ್ರಮವನ್ನು ಆಚರಿಸುವ ಮೂಲಕ ಮುಂದಿನ ತಲೆಮಾರಿಗೂ ಅದರ ಮಹತ್ವ ಸಾರಬೇಕು ಎಂದು ತಿಳಿಸಿದರು. ಮಹಿಳೆಯರಿಗೆ ಅಕ್ಷರ ದೀಕ್ಷೆ ಕೊಟ್ಟ ಮಾತೆ ಸಾವಿತ್ರಿಬಾಯಿ ಫುಲೆ ಅವರು ಈ ದೇಶದ ನಿಜವಾದ ಸರಸ್ವತಿ. ತಮ್ಮ ಪತಿ ಜ್ಯೋತಿಬಾ ಫುಲೆ ಅವರಿಂದ ಶಿಕ್ಷಣ ಕಲಿತು, ಮಹಿಳೆಯರಿಗಾಗಿಯೇ ಶಾಲೆ ತೆರೆದು ಶಿಕ್ಷಣ ನೀಡಿದ ಸಾವಿತ್ರಿಬಾಯಿ ಅವರ ಕೊಡುಗೆ ಅನನ್ಯವಾದುದು. ಫುಲೆ ದಂಪತಿ ಮಾಡಿದ ಕ್ರಾಂತಿಯು ಅಂಬೇಡ್ಕರ್ ಅವರ ಅಗಾಧ ಪರಿಣಾಮ ಬೀರಿತ್ತು ಎಂದು ನೆನೆದರು.

## ರಾಜ್ಯ ರಾಜಕಾರಣಕ್ಕೆ ಬಂದಿದ್ದೇನೆ, ಚಾಮರಾಜ ಕ್ಷೇತ್ರ ನನ್ನ ಆಯ್ಕೆ

• ಉದಯವಾಹಿನಿ, ಮೈಸೂರು

ಸಹಜವಾಗಿಯೇ ನಾನು ರಾಜ್ಯ ರಾಜಕಾರಣಕ್ಕೆ ಬಂದಿದ್ದೇನೆ. ಕೇಂದ್ರದ ರಾಜಕಾರಣ ಮುಗಿದ ಮೇಲೆ ರಾಜ್ಯಕ್ಕೆ ಬರಲೇಬೇಕು ತಾನೆ ಎಂದು ಮಾಜಿ ಸಂಸದ ಬಿಜೆಪಿಯ ಪ್ರತಾಪ ಸಿಂಹ ಹೇಳಿದರು. ಇಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, ಎಲ್ಲಾ ದೃಷ್ಟಿಯಿಂದಲೂ ಚಾಮರಾಜ ವಿಧಾನಸಭಾ ಕ್ಷೇತ್ರ ನನಗೆ ಅನುಕೂಲಕರವಾಗಿದೆ. ಹೀಗಾಗಿ ಅದೇ ನನ್ನ ಆಯ್ಕೆಯಾಗಿರುತ್ತದೆ. ಈ ಹಿಂದೆ ಎಚ್.ಎಸ್.ಶಂಕರಲಿಂಗೇಗೌಡ ಅವರು ನಾಲ್ಕು ಬಾರಿ ಈ ಕ್ಷೇತ್ರದಿಂದ ಬಿಜೆಪಿಯಿಂದ ಗೆದ್ದಿದ್ದರು.


ಇದು ಬಿಜೆಪಿ ಕ್ಷೇತ್ರ. ಹೀಗಾಗಿ ಇಲ್ಲಿಂದಲೇ ಚಟುವಟಿಕೆ ಆರಂಭಿಸಿದ್ದೇನೆ ಎಂದು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತವನ್ನು ಅವರು ವ್ಯಕ್ತಪಡಿಸಿದರು. ಚಾಮರಾಜ ಕ್ಷೇತ್ರ ಹಣದ ಪ್ಯಾಕೆಟ್ ಕೊಟ್ಟು ಗೆಲ್ಲುವ ಕಣವಲ್ಲ. ಇಲ್ಲಿನ ಮತದಾರರು ಕೆಲಸ ನೋಡಿ ಪ್ರೀತಿ ತೋರಿಸುತ್ತಾರೆ. ಒಕ್ಕಲಿಗ ಸಮಾಜದ ಲೆಕ್ಕದಲ್ಲಿ ಈ ಕ್ಷೇತ್ರವನ್ನು ನಾನು ನೋಡುತ್ತಿಲ್ಲ. ಇಲ್ಲಿ ಎಲ್ಲಾ ವರ್ಗದ ಜನರೂ ಇದ್ದಾರೆ. ಪ್ರಜ್ಞಾವಂತರು, ಬುದ್ಧಿವಂತರಿದ್ದಾರೆ. ಆದ್ದರಿಂದ ಆಯ್ಕೆ ಮಾಡಿಕೊಂಡಿದ್ದೇನೆ ಎಂದು ಪ್ರತಿಕ್ರಿಯಿಸಿದರು.



ಪತ್ರಕರ್ತರಾಗಿದ್ದ ಪ್ರತಾಪ ಸಿಂಹ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಸತತ ಎರಡು ಬಾರಿ (2014 ಹಾಗೂ 2019) ಬಿಜೆಪಿ ಟಿಕೆಟ್ ಮೇಲೆ ಗೆದ್ದಿದ್ದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ಅವರಿಗೆ ಪಕ್ಷದಿಂದ ಟಿಕೆಟ್ ನಿರಾಕರಿಸಲಾಗಿತ್ತು.

# ಕೃಷ್ಣಬೈರೇಗೌಡ ವಿರುದ್ಧ ಲೋಕಾಯುಕ್ತಕ್ಕೆ ಬಿಜೆಪಿ ದೂರು

• ಉದಯವಾಹಿನಿ, ಕೋಲಾರ


ಉದಯವಾಹಿನಿ ಚಿತ್ರ

ಜಿಲ್ಲೆಯ ನರಸಾಪುರ ಹೋಬಳಿಯ ಗರುಡನಪಾಳ್ಯದ ಸರ್ವೆ ಸಂಖ್ಯೆ 46, 47ರಲ್ಲಿ ಒಟ್ಟು 21.16 ಎಕರೆ ಭೂ ಕಬಳಿಕೆ ಆರೋಪ ಸಂಬಂಧ ಕಂದಾಯ ಸಚಿವ ಕೃಷ್ಣಬೈರೇಗೌಡ ವಿರುದ್ಧ ಜಿಲ್ಲಾ ಲೋಕಾಯುಕ್ತ ಪೊಲೀಸರಿಗೆ ಬಿಜೆಪಿ ದೂರು ನೀಡಿದೆ. ಜಿಲ್ಲಾ ಬಿಜೆಪಿ ಅಧ್ಯಕ್ಷ ಓಂಶಕ್ತಿ ಚಲಪತಿ ನೇತೃತ್ವದಲ್ಲಿ ಆ ಪಕ್ಷದ ಮುಖಂಡರಾದ ವಿ.ವಿಜಯಕುಮಾರ್, ಎಸ್.ಎಂ. ಅನಿಲ್ ಕುಮಾರ್ ಸೋಮವಾರ ನಗರದ ಲೋಕಾಯುಕ್ತ ಕಚೇರಿಗೆ ವಕೀಲರೊಂದಿಗೆ ಬಂದು ಲೋಕಾಯುಕ್ತ ಡಿವೈಎಸ್ಪಿ ವೆಂಕಟೇಶ್ ಅವರಿಗೆ ದೂರಿನ ಪತ್ರ ನೀಡಿದ್ದು ತನಿಖೆಗೆ ಆಗ್ರಹಿಸಿದ್ದಾರೆ.

ಗರುಡನಪಾಳ್ಯದಲ್ಲಿ ಸಚಿವರು ಕೆರೆ, ಸ್ಮಶಾನದ ಜಮೀನು ಕಬಳಿಸಿ ತಮ್ಮ, ಕುಟುಂಬದ ಹೆಸರಿಗೆ ಮಾಡಿಕೊಂಡಿರುವ ಆರೋಪವಿದೆ. ದಾಖಲೆಗಳನ್ನು ತಿರುಚಿ ಕೆರೆ ಇರುವ ಸರ್ವೆ ಸಂಖ್ಯೆ 46ರಲ್ಲಿ 20.16 ಎಕರೆ ಹಾಗೂ ಸ್ಮಶಾನವಿರುವ ಸರ್ವೆ ಸಂಖ್ಯೆ 47ರಲ್ಲಿ 1 ಎಕರೆ ಭೂಮಿ ಕಬಳಿಸಿದ್ದಾರೆ. ಇದರಲ್ಲಿ ಕೋಲಾರ ತಹಶೀಲ್ದಾರ್ ಹಾಗೂ ಕಂದಾಯ ಇಲಾಖೆಯ ಇತರ ಅಧಿಕಾರಿಗಳು ಭಾಗಿಯಾಗಿರುವ ಶಂಕೆ ಇದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ಜಿಲ್ಲಾ ಅಧ್ಯಕ್ಷ ಓಂಶಕ್ತಿ ಚಲಪತಿ, ಸರ್ಕಾರಿ ಜಮೀನು ಉಳಿಸಲು ಹೋರಾಟ ಮಾಡುತ್ತಿರುವುದಾಗಿ ಹೇಳುವ ಕೃಷ್ಣಬೈರೇಗೌಡ ವಿರುದ್ಧವೇ ಭೂ ಕಬಳಿಕೆ ಆರೋಪವಿದೆ. ಈ ಅನುಮಾನ ಬಗೆಹರಿಸಿಕೊಳ್ಳಲು ಸಮಗ್ರ ತನಿಖೆ ನಡೆಯಬೇಕು. ಯಾರು ದಾಖಲೆ ಸೃಷ್ಟಿ ಮಾಡಿದ್ದಾರೆ ಯಾರೆಲ್ಲಾ ಅಧಿಕಾರಿಗಳು ಭಾಗಿಯಾಗಿದ್ದಾರೆ ಎಂಬುದು ಗೊತ್ತಾಗಬೇಕು. ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

**21 ಎಕರೆ ಭೂ ಕಬಳಿಕೆ ಆರೋಪ**

**ಬೆಳಗಾವಿ ಅಧಿವೇಶನದ ವೇಳೆ ಆರೋಪ:** ಕಂದಾಯ ಸಚಿವ ಕೃಷ್ಣಬೈರೇಗೌಡ ಭೂ ಕಬಳಿಕೆ ಮಾಡಿದ್ದಾರೆ ಎಂದು ಬೆಳಗಾವಿ ಅಧಿವೇಶನದ ವೇಳೆ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹಾಗೂ ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶಗೌಡ ಆರೋಪ ಮಾಡಿದ್ದರು. ಅದಕ್ಕೆ ಸಂಬಂಧಿಸಿದ ಪೂರಕ ದಾಖಲೆ ಬಿಡುಗಡೆ ಮಾಡಿದ್ದರು.

ಈ ಸಂಬಂಧ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಸ್ತಾಪ ಮಾಡಿ ತನಿಖೆಗೆ ಆಗ್ರಹಿಸಿದ್ದರು. ತಮ್ಮ ಮೇಲಿನ ಆರೋಪ ಸಂಬಂಧ ಸಚಿವರು ವಿವರವಾಗಿ ಉತ್ತರ ನೀಡಿ ಇದು ಪಿತ್ರಾರ್ಜಿತ ಆಸ್ತಿ. ಯಾವುದೇ ತನಿಖೆಗೆ ಸಿದ್ಧ' ಎಂದು ಹೇಳಿದ್ದರು.

# ದೇವರಾಜ ಅರಸು ದಾಖಲೆ ಮುರಿದ ಸಿದ್ದರಾಮಯ್ಯ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ರಾಜ್ಯದ ಧೀರ್ಘಾವದಿ ಮುಖ್ಯಮಂತ್ರಿಯಾ ದೇವರಾಜ ಅರಸು ದಾಖಲೆಯನ್ನ ಸರಿಸಿದ ಖ್ಯಾತಿಗೆ ಸಿದ್ದರಾಮಯ್ಯ ಭಾಜನರಾದ ಹಿನ್ನೆಲೆ ಜ.7 ರಂದು ಅಹಿಂದ ಯುವ ಸಮುದಾಯ ಹಾಗೂ ಮುಖಂಡರಿಂದ ನಾಟಿಕೋಳಿ ಔತಣ ಕೂಟ ಆಯೋಜಿಸಿದ್ದು ಸುಮಾರು 2 ಸಾವಿರ ಮಂದಿಗೆ ಬಿರಿಯಾನಿ ವಿತರಣೆ ಮಾಡಲಾಗುವುದು ಎಂದು ಮುಖಂಡ ಜಿ.ಎಲ್.ರಾಜು ತಿಳಿಸಿದರು.

**ಸಂಭ್ರಮಕ್ಕೆ ಸಕಲ ಸಿದ್ಧತೆ**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸು ಅವರ ದಾಖಲೆಯನ್ನ ಸರಿಗಟ್ಟುವ ಮೂಲಕ ದೀರ್ಘಾವಧಿ ಕಾಲ ಆಡಳಿತ ನಡೆಸಿದ ಸಿಎಂ ಎಂಬ ಹೆಗ್ಗಳಿಕೆಗೆ ಸಿದ್ದರಾಮಯ್ಯ ಪಾತ್ರರಾಗುತ್ತಿರುವ ಹಿನ್ನೆಲೆ ಅಹಿಂದ ಮುಖಂಡರು ಬೆಂಬಲಿಗರು ಸಂಭ್ರಮಾಚರಣೆ ಮಾಡುವ ಉದ್ದೇಶದಿಂದ ನಾಟಿ ಕೋಳಿ ಬಿರಿಯಾನಿ ನೀಡಲು ಸಿದ್ಧತೆ ಮಾಡಲಾಗಿದೆ ಎಂದರು. ಜ 7ಕ್ಕೆ ಸಂಭ್ರಮಾಚರಣೆಗೆ ರೂಪುರೇಷೆ ಸಿದ್ಧಪಡಿಸಲಾಗಿದ್ದು ಪಟ್ಟಣದ ಕನಕದಾಸ ವೃತ್ತದಿಂದ ಬೈಕ್ ಜಾಥಾದಲ್ಲಿ ಹೊರಟು ಕನಕದಾಸ ಭವನ ಬಳಿ ಸಮಾಪ್ತಿಗೊಳ್ಳಲಿದೆ ಸರ್ವಸಮುದಾಯದ ನಾಯಕರಾಗಿರುವ ಸಿದ್ದರಾಮಯ್ಯ ಅವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಮುಖಂಡ ಎಚ್‌ಎನ್. ಬಸವರಾಜು ಮಾತನಾಡಿ ಪಂಚ ಗ್ಯಾರಂಟಿಗಳ ಮೂಲಕ ಬಡಜನರ ಏಳ್ಗೆಗಾಗಿ ಶ್ರಮಿಸಿದ ಧೀಮಂತ ನಾಯಕ ಸಿದ್ದರಾಮಯ್ಯ ಅವರ ಸಾಧನೆ ಸಂಭ್ರಮದ ಗಳಿಗೆಯಲ್ಲಿ ಎಲ್ಲಾ ಸಮುದಾಯದ ಯುವಕರು ಮುಖಂಡರು ಭಾಗಿಯಾಗಬೇಕು ಎಂದು ವಿನಂತಿಸಿದರು. ಅಭಿಮಾನಿಗಳ ಒತ್ತಾಸೆ ಮೇರೆಗೆ ನಾಟಿ ಕೋಳಿ ಬಿರಿಯಾನಿ ವಿತರಣೆ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಜಿ.ಎಲ್. ರಾಜು, ಉಪಾಧ್ಯಕ್ಷ ಹೊಣಕಣಪುರ ಸ್ವಾಮಿ, ಹೊಸೂರು ಶಿವಣ್ಣ, ಹೊಸೂರು ನಾಗರಾಜು, ಗೋವಿಂದು, ರಘು, ವಿಶ್ವ ಜಿ.ಕೆ. ರಾಜೇಶ್ ಮಂಜುನಾಥ. ಜಿ ವಿ, ಸಂದೀಪ್ ಕುಮಾರ್ ಜಿ.ಎಸ್, ಸಾಗರ್, ಮನು, ಪ್ರಮೋದ್, ಮಲ್ಲಯ್ಯನಪುರ ಶಶಿಕುಮಾರ್ , ಮಹದೇವ ಇನ್ನಿತರರಿದ್ದರು.

# ಹುಲುಸೆಯಲ್ಲಿ ಜೆಸಿಬಿ ತಡೆದು ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕುಶಾಲನಗರ

ತಾಲ್ಲೂಕಿನ ಹೆಬ್ಬಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಲುಸೆ ಗ್ರಾಮದಲ್ಲಿ ಬೀದಿ ನಾಯಿಗಳ ಸಂರಕ್ಷಣೆ ಕೇಂದ್ರ ನಿರ್ಮಾಣಕ್ಕಾಗಿ ಕೈಗೊಂಡಿದ್ದ ಸಮತಟ್ಟು ಕಾರ್ಯಕ್ಕೆ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿ, ಪ್ರತಿಭಟನೆ ನಡೆಸಿದರು. ಇಲ್ಲಿ ಬೀದಿ ನಾಯಿಗಳ ಸಂರಕ್ಷಣಾ ಕೇಂದ್ರಕ್ಕೆ ಕಂದಾಯ ಇಲಾಖೆಯಿಂದ ಸ್ಥಳ ಗುರುತಿಸಲಾಗಿದೆ. ಗ್ರಾಮಸ್ಥರ ವಿರೋಧದ ನಡುವೆಯೂ ಏಕಾಏಕಿ ಬೆಟ್ಟ ಅಗೆದು ನೆಲವನ್ನು ಸಮತಟ್ಟು ಮಾಡುವ ಕಾರ್ಯ ಕೈಗೊಳ್ಳಲಾಗಿತ್ತು. ಸ್ಥಳೀಯರು ಕಾಮಗಾರಿಗೆ ತಡೆಯೊಡ್ಡಿದರು. ಕಾಮಗಾರಿ ಪ್ರಾರಂಭವಾಗಿರುವ ವಿಚಾರ ತಿಳಿದು ಸ್ಥಳಕ್ಕೆ ಬಂದಿದ್ದ ಹಕ್ಕೆ, ಮರೂರು ಗ್ರಾಮಸ್ಥರು ಹಿಟಾಚಿ ಚಾಲನೆ ತಡೆದು ಕಾಮಗಾರಿ ನಿಲ್ಲಿಸಿದರು. ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿಗಳು ಆಗಮಿಸಿ ಪರಿಶೀಲಿಸಿದರು.


ಹುಲುಸೆಯಲ್ಲಿ ನಾಯಿಗಳ ಸಂರಕ್ಷಣೆ ಕೇಂದ್ರ ಸ್ಥಾಪಿಸಲು ಅರಣ್ಯ ಇಲಾಖೆ, ಗಣಿ, ಭೂವಿಜ್ಞಾನ ಇಲಾಖೆ ಅನುಮತಿ ಪಡೆದಿಲ್ಲ. ಕಾಮಗಾರಿ ಕಾರಣ ಅಪಾರ ಪ್ರಮಾಣದಲ್ಲಿ ಮರಗಳ ಹನನ ನಡೆಯಲಿದೆ. ಪರಿಸರಕ್ಕೆ ಹಾನಿ ಉಂಟಾಗಲಿದೆ ಎಂದು ಗ್ರಾಮಸ್ಥರು ಆರೋಪಿಸಿದರು. ಗ್ರಾಮ ಪಂಚಾಯಿತಿ, ತಾಲ್ಲೂಕು ಆಡಳಿತಕ್ಕೆ ಆಕ್ಷೇಪಣೆ ಸಲ್ಲಿಸಿದ್ದರೂ ಗುತ್ತಿಗೆದಾರರ ಮೂಲಕ ಏಕಏಕಿ ಕಾಮಗಾರಿ ಆರಂಭಿಸಲು ಮುಂದಾಗಿದ್ದಾರೆ. ಇಲ್ಲಿ ಬೀದಿ ನಾಯಿಗಳ ಸಂರಕ್ಷಣಾ ಕೇಂದ್ರ ಸ್ಥಾಪಿಸಬಾರದು. ತೀವ್ರ ಹೋರಟ ಹಮ್ಮಿಕೊಳ್ಳಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದರು.

# ಎತ್ತಿಹೊಳೆಗೆ ಅಡ್ಡಿ: ಜನಾಂದೋಲನದ ಎಚ್ಚರಿಕೆ

• ಉದಯವಾಹಿನಿ, ತಿಪಟೂರು

ಕಾರ್ಪೊರೇಟ್ ಸಂಸ್ಥೆಗಳಿಗೆ ಅಂಬಾನಿ, ಅದಾನಿಗಳಿಗೆ ಕೇಂದ್ರ ಸರ್ಕಾರ ಸಾವಿರಾರು ಎಕರೆ ಜಮೀನು ನೀಡಿದೆ. ಆದರೆ ಸಣ್ಣಪುಟ್ಟ ತಪ್ಪುಗಳನ್ನು ಎತ್ತಿ ಹಿಡಿದು ಎತ್ತಿನಹೊಳೆ ನೀರಾವರಿ ಯೋಜನೆ ಕಾಮಗಾರಿಗೆ ಅಡ್ಡಿ ಪಡಿಸುತ್ತಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷ ಮುರಳಿಧರ ಹಾಲಪ್ಪ ಆಕ್ರೋಶ ವ್ಯಕ್ತಪಡಿಸಿದರು. ತಾಲ್ಲೂಕಿನ ಕೆ.ಬಿ.ಕ್ರಾಸ್ ಬಳಿ ಹಾದು ಹೋಗುವ ಎತ್ತಿನಹೊಳೆ ಯೋಜನೆ ನಾಲಾ ಕಾಮಗಾರಿ ಸ್ಥಳದಲ್ಲಿ ನಡೆದ ಅಂದೋಲನ ಸಭೆಯಲ್ಲಿ ಮಾತನಾಡಿದರು.

2014ರಲ್ಲಿ ಅಂದಿನ ಸಿಎಂ ಸಿದ್ದರಾಮಯ್ಯ ಎತ್ತಿನಹೊಳೆ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು. ಅಲ್ಲಿಂದ ಈವರೆಗೆ 23 ಸಾವಿರ ಕೋಟಿ ಖರ್ಚಾಗಿದೆ. ಕೇಂದ್ರ ಸರ್ಕಾರ ಅನುದಾನ ನೀಡಿಲ್ಲ. ಸಂಪೂರ್ಣ ಕಾಮಗಾರಿಯ ಜವಾಬ್ದಾರಿ ರಾಜ್ಯ ಸರ್ಕಾರ ಹೊತ್ತಿದೆ. ಈ ಯೋಜನೆ ಪೂರ್ಣಗೊಂಡರೆ ಚಿಕ್ಕಮಗಳೂರು, ಹಾಸನ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಸೇರಿದಂತೆ ಎಂಟು ಜಿಲ್ಲೆಗಳ ರೈತರ ಬದುಕು ಹಸನಾಗುವುದರ ಜೊತೆಗೆ


ಉದಯವಾಹಿನಿ ಚಿತ್ರ

ಅಂತರ್ಜಲ ವೃದ್ಧಿಗೆ ಸಹಕಾರಿಯಾಗುತ್ತದೆ ಎಂದರು. ಕಾಮಗಾರಿ ಶೇ 90ರಷ್ಟು ಮುಗಿಯುವ ಹಂತ ತಲುಪುವ ಮಟ್ಟಕ್ಕೆ ಬಂದಾಗ ಅರಣ್ಯ ಮತ್ತು ಪರಿಸರ ಇಲಾಖೆ ತಕರಾರು ತೆಗೆದು ನಾಲೆ ಪಕ್ಕ ಹೆಚ್ಚುವರಿಯಾಗಿ ಜಾಗ ತೆಗೆದುಕೊಂಡಿದ್ದೀರ ಎಂದು 11 ಪ್ರಶ್ನೆಗಳನ್ನು ಕೇಳಿದೆ ಎಂದರು.

ನವೆಂಬರ್‌ನಲ್ಲಿ ಅರಣ್ಯ ಮತ್ತು ಪರಿಸರ ಇಲಾಖೆಯ ಸಚಿವರನ್ನು ಬೇಟಿ ಮಾಡಿ ಯೋಜನೆಯಿಂದ 76 ಲಕ್ಷ ಜನರಿಗೆ ಅನುಕೂಲವಾಗುತ್ತದೆ ಎಂದು ಮನವರಿಕೆ ಮಾಡಿದಾಗ ತೊಡಕು ನಿವಾರಣೆಯ ಭರವಸೆ ನೀಡಿದ್ದರು. ಆದರೆ ಯಾವ ಬೆಳವಣಿಗೆಯೂ ಕಾಣುತ್ತಿಲ್ಲ. ಜಿಲ್ಲೆಯ ಸಚಿವರು, ಜನಪ್ರತಿನಿಧಿಗಳನ್ನು ಆಹ್ವಾನಿಸಿ ಲಕ್ಷಾಂತರ ಜನರನ್ನು ಸೇರಿಸಿ ಜನಾಂದೋಲನ ನಡೆಸಲಾಗುವುದು ಎಂದು ಹೇಳಿದರು.

ಮಾಜಿ ಶಾಸಕ ಬಿ.ಲಕ್ಕಪ್ಪ ಮಾತನಾಡಿ, ಎತ್ತಿನಹೊಳೆ ನೀರು ಹರಿದರೆ ಕೆರೆಗಳು ತುಂಬಿ ಅಂತರ್ಜಲ ವೃದ್ಧಿಯಾಗುತ್ತದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ದೊಡ್ಡಮನಸ್ಸು ಮಾಡಿ ಸಣ್ಣಪುಟ್ಟ ಲೋಪಗಳನ್ನ ಎತ್ತಿ ಹಿಡಿಯಬಾರದು. ನೀರಿಗಾಗಿ ಹೋರಾಟಕ್ಕೆ ಸಿದ್ಧ ಎಂದರು.

# 13,215 ಕುಟುಂಬಗಳ ಬಿಪಿಎಲ್ ಚೀಟಿ ರದ್ದು

• ಉದಯವಾಹಿನಿ, ಚಿಕ್ಕಬಳ್ಳಾಪುರ

ವಾರ್ಷಿಕ 1.20 ಲಕ್ಷ ಆದಾಯ ಮೀರಿರುವ ಕುಟುಂಬಗಳ ಬಿಪಿಎಲ್ ಪಡಿತರ ಚೀಟಿ ರದ್ದುಗೊಳಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಆಹಾರ ಇಲಾಖೆ 13,215 ಕುಟುಂಬಗಳ ಬಿಪಿಎಲ್ ಪಡಿತರ ಚೀಟಿ ರದ್ದುಗೊಳಿಸಲು ಮುಂದಾಗಿದೆ. ಕೇಂದ್ರ ಸರ್ಕಾರದ ಆದೇಶದ ಅನ್ವಯ ಜಿಲ್ಲೆಯ ಆಹಾರ ಮತ್ತು ನಾಗರಿಕರ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ 6,523 ಅನರ್ಹ ಬಿಪಿಎಲ್



ಚೀಟಿಗಳನ್ನು ರದ್ದುಗೊಳಿಸಿದೆ. ಜಿಲ್ಲೆಯಲ್ಲಿ ಕೇಂದ್ರ ಸರ್ಕಾರವು ಒಟ್ಟು 13,215 ಬಿಪಿಎಲ್ ಕಾರ್ಡ್‌ದಾರರ ಕುಟುಂಬಗಳನ್ನು ಗುರುತಿಸಿ ಆ ಪಡಿತರ ಚೀಟಿಗಳನ್ನು ರದ್ದುಗೊಳಿಸುವಂತೆ ಪಟ್ಟಿ ಸಮೇತ ಆಹಾರ ಇಲಾಖೆಗೆ ನಿರ್ದೇಶನ ನೀಡಿದೆ.

ಅದರಂತೆ ಇಲ್ಲಿವರೆಗೂ ಜಿಲ್ಲೆಯಲ್ಲಿ ಆಹಾರ ಇಲಾಖೆ ಅಧಿಕಾರಿಗಳು ಪಡಿತರ ಅಂಗಡಿಗಳ ಮೂಲಕ 6,523 ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಿದ್ದಾರೆ. ಇನ್ನೂ 6,692 ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಲು ಬಾಕಿ ಇದೆ.

**ಜಿಲ್ಲೆಯಲ್ಲಿ 3,29 ಲಕ್ಷ ಪಡಿತರ ಚೀಟಿ:** ಜಿಲ್ಲೆಯಲ್ಲಿ ಒಟ್ಟು 27,815 ಅಂತ್ಯೋದಯ, 2,74,709 ಬಿಪಿಎಲ್. 27,107 ಎಪಿಎಲ್ ಕಾರ್ಡ್‌ಗಳು ಸೇರಿ ಒಟ್ಟು 3,29,631 ಕಾರ್ಡ್‌ಗಳು ಇವೆ. 11,06,891 ಮಂದಿ ಫಲಾನುಭವಿಗಳು ಇದ್ದಾರೆ.

**2.74 ಲಕ್ಷ ಬಿಪಿಎಲ್ ಕಾರ್ಡ್‌ಗಳು:** ಜಿಲ್ಲೆಯಲ್ಲಿ ಒಟ್ಟು 2,74,709 ಬಿಪಿಎಲ್ ಪಡಿತರ ಚೀಟಿಗಳು ಇವೆ. ಅದರ ಒಟ್ಟು ಫಲಾನುಭವಿಗಳು 9,11,487 ಮಂದಿ ಇದ್ದಾರೆ. ಕೇಂದ್ರ ಸರ್ಕಾರ ಬಿಪಿಎಲ್ ಕಾರ್ಡ್ ಇರುವ ಪ್ರತಿ ಕುಟುಂಬದ ಸದಸ್ಯನಿಗೆ ತಲಾ 5 ಕೆಜಿ ಅಕ್ಕಿ ವಿತರಿಸುತ್ತಿದೆ. ಇದೀಗ ಕೇಂದ್ರ ಸರ್ಕಾರವೇ ಜಿಲ್ಲೆಯಲ್ಲಿ ಒಟ್ಟು 13,215 ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ಗುರುತಿಸಿ ಅವುಗಳ ರದ್ದಿತಿಗೆ ಮುಂದಾಗಿದೆ.

# ಕೆಆರ್‌ಎಸ್ ಜಲಾಶಯದ ವಿಶ್ವೇಶ್ವರಯ್ಯ ನಾಲೆಗಳಿಗೆ ಜ. 12 ರಿಂದ ನೀರು

● ಲೈನಿಂಗ್ ಕಾಮಗಾರಿ ಹಿನ್ನೆಲೆಯಲ್ಲಿ ತುರುಗನೂರು, ಹೆಬ್ಬಕವಾಡಿ, ನಿಡಘಟ್ಟ ಶಾಖಾ ನಾಲೆಗಳು, ಸಂಪರ್ಕ ನಾಲೆಗಳಿಗೆ ನೀರು ಕೊಡದಿರಲು ತೀರ್ಮಾನ

• ಉದಯವಾಹಿನಿ, ಮಂಡ್ಯ

ಕೆಆರ್‌ಎಸ್ ಜಲಾಶಯದ ವಿಶ್ವೇಶ್ವರಯ್ಯ ನಾಲಾ ಜಾಲದ ಅಚ್ಚುಕಟ್ಟು ಪ್ರದೇಶಗಳಲ್ಲಿ ಬೆಳೆದು ನಿಂತಿರುವ ದೀರ್ಘಾವಧಿ ಬೆಳೆಗಳ ರಕ್ಷಣೆಗೆ ಬೇಸಿಗೆ ಹಂಗಾಮಿನಲ್ಲಿ ಕಟ್ಟು ಪದ್ಧತಿಯಡಿ ನಾಲೆಗಳಿಗೆ ನೀರು ಹರಿಸಲು ಸರಕಾರ ನಿರ್ಧರಿಸಿದೆ. ಆದರೆ, ಲೈನಿಂಗ್ ಕಾಮಗಾರಿ ಹಿನ್ನೆಲೆಯಲ್ಲಿ ತುರುಗನೂರು, ಹೆಬ್ಬಕವಾಡಿ, ನಿಡಘಟ್ಟ ಶಾಖಾ ನಾಲೆಗಳು ಮತ್ತು ಸಂಪರ್ಕ ನಾಲೆಗಳಿಗೆ ನೀರು ಕೊಡದಿರಲು ತೀರ್ಮಾನಿಸಲಾಗಿದೆ. ನಾಲೆಗಳಿಗೆ ನೀರು ಹರಿಸುವ ಸಂಬಂಧ ಜಿಲ್ಲಾಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಡಿ. 30ರಂದೇ ಕೃಷ್ಣರಾಜಸಾಗರ ಜಲಾಶಯದ ನೀರಾವರಿ ಸಲಹಾ ಸಮಿತಿ ಸಭೆ ಕರೆದು ಚರ್ಚಿಸಲಾಗಿತ್ತು. ಅಂದು ಸ್ಪಷ್ಟ ನಿರ್ಧಾರ ಕೈಗೊಳ್ಳಲು ಸಾಧ್ಯವಾಗಿರಲಿಲ್ಲ. ಹೀಗಾಗಿ ಮತ್ತೊಮ್ಮೆ ವಿಸ್ತೃತ ಚರ್ಚೆ ನಡೆಸಿ ಜ. 12ರಿಂದ ನಾಲೆಗಳಲ್ಲಿ ನೀರು ಹರಿಸಲು ಜ. 3ರಂದು ನಿರ್ಣಯ ಕೈಗೊಳ್ಳಲಾಗಿದೆ.

**ಕಟ್ಟು ನೀರು ಪದ್ಧತಿಯ ವೇಳಾಪಟ್ಟಿ...**

- ಮೊದಲ ಅವಧಿ- ಜ.12ರಿಂದ 30(18 ದಿನಗಳು)
- ಎರಡನೇ ಅವಧಿ- ಫೆ.11ರಿಂದ ಮಾ.1(18 ದಿನಗಳು)
- ಮೂರನೇ ಅವಧಿ- ಮಾ.13ರಿಂದ 31(18 ದಿನಗಳು)
- ನಾಲ್ಕನೇ ಅವಧಿ- ಏ.12ರಿಂದ 30(18 ದಿನಗಳು)



ಉದಯವಾಹಿನಿ ಚಿತ್ರ

ಬಾಕಿ ನಾಲಾ ಕಾಮಗಾರಿ ನಿರ್ವಹಣೆ ಹಿನ್ನೆಲೆಯಲ್ಲಿ ಈ ವರ್ಷ ಹೆಬ್ಬಕವಾಡಿ, ನಿಡಘಟ್ಟ ಶಾಖಾ ನಾಲೆಗಳು ಮತ್ತು ಸಂಪರ್ಕ ನಾಲೆಗಳಿಗೆ ಹರಿಸದಿರಲು ತೀರ್ಮಾನಿಸಲಾಗಿದೆ. ಇದರಿಂದ ಈ ಭಾಗದ ರೈತರು ಬೇಸಿಗೆಯಲ್ಲಿ ಯಾವುದೇ ಹೊಸ ಬೆಳೆಗಳನ್ನು ಬಿತ್ತನೆ, ನಾಟಿ ಮಾಡುವಂತಿಲ್ಲ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ವಿಶ್ವೇಶ್ವರಯ್ಯ ನಾಲಾ ಜಾಲದ ಮುಖ್ಯ ನಾಲೆ. ಶಾಖಾ ನಾಲೆಗಳಲ್ಲಿ ಮಾತ್ರ 18 ದಿನ ನೀರು ಹರಿಸಲಾಗುವುದು. ವಿತರಣಾ ನಾಲೆಗಳು ಮತ್ತು ಉಪ ನಾಲೆಗಳಲ್ಲಿ ನಿಗದಿತ ಅವಧಿಗೆ ಮತ್ತು ಅವಶ್ಯಕತೆಗೆ ತಕ್ಕಂತೆ ನೀರು ಕೊಡಲಾಗುತ್ತದೆ. 4 ಕಟ್ಟು ಹರಿಸಿದ ನಂತರವೂ ದೀರ್ಘಾವಧಿ ಬೆಳೆಗಳಿಗೆ ನೀರಿನ ಅವಶ್ಯಕತೆ ಕಂಡುಬಂದರೆ ಜಲಾಶಯದಲ್ಲಿನ ನೀರಿನ ಲಭ್ಯತೆ ಆಧರಿಸಿ, ಮತ್ತೊಮ್ಮೆ ನೀರಾವರಿ ಸಲಹಾ ಸಮಿತಿ ಸಭೆ ಕರೆದು ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು. ರೈತರು ಸಹಕರಿಸಬೇಕೆಂದು ನಿಗಮದ ಅಧಿಕಾರಿಗಳು ಕೋರಿದ್ದಾರೆ.

**123.54 ಅಡಿ ನೀರು ಸಂಗ್ರಹ**

**ಗರಿಷ್ಠ 124.80 ಅಡಿಗಳ ಕೆಆರ್ ಎಸ್ ಜಲಾಶಯದಲ್ಲಿ ಪ್ರಸ್ತುತ 123.54 ಅಡಿವರೆಗೆ ನೀರಿದೆ. 49.452 ಅಡಿ ನೀರು ಸಂಗ್ರಹ ಸಾಮರ್ಥ್ಯದ ಕನ್ನಂಬಾಡಿಕಟ್ಟೆಯಲ್ಲಿ ಈಗಲೂ 47.707 ಅಡಿ ನೀರು ಸಂಗ್ರಹವಾಗಿದೆ. ಜ. 4ರಂದು 2124 ಕ್ಯುಸೆಕ್ ಒಳ ಹರಿವು, 1285 ಕ್ಯುಸೆಕ್ ಹೊರ ಹರಿವಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ1 683ಕ್ಯುಸೆಕ್ ಒಳ ಹರಿವು, 1313 ಕ್ಯುಸೆಕ್ ಹೊರ ಹರಿವಿನೊಂದಿಗೆ 124.31 ಅಡಿ ನೀರಿತ್ತು.**

**ಸಂಕ್ರಾಂತಿ ನೀರು:** ಪ್ರತಿ ಬೇಸಿಗೆಯಲ್ಲಿ ಜಲಾಶಯದಲ್ಲಿ ನೀರಿನ ಸಂಗ್ರಹ ಪ್ರಮಾಣ ಆಧರಿಸಿ ಸಂಕ್ರಾಂತಿ ಹೊತ್ತಿಗೆ ನೀರು ಕೊಡುವುದು ವಾಡಿಕೆ. ಸಂಕ್ರಾಂತಿ ಹಬ್ಬದಲ್ಲಿ ಜಾನುವಾರುಗಳನ್ನು ಶುಚಿಗೊಳಿಸಿ ವಿಶೇಷವಾಗಿ ಹಬ್ಬ ಆಚರಿಸುವುದರಿಂದ ಹಬ್ಬಕ್ಕೂ ಮುನ್ನವೇ ನಾಲೆಗಳಿಗೆ ನೀರು ಹರಿಸಲಾಗುತ್ತದೆ. ಕಳೆದ ವರ್ಷ ಜ. 10ರಿಂದ ನಾಲೆಗಳಿಗೆ ನೀರು ಬಿಡಲಾಗಿತ್ತು. ಆದರೆ, ಈ ವರ್ಷ ಜ. 2ರವರೆಗೆ ಮದ್ದೂರು ಭಾಗದ ನಾಲೆಗಳಿಗೆ ನೀರು ಹರಿಸಿರುವುದರಿಂದ ಹತ್ತು ದಿನಗಳ ಕಾಲ ನಾಲೆಗಳು ಮತ್ತು ಗೇಟ್‌ಗಳ ನಿರ್ವಹಣೆಗೆ ಸಮಯಾವಕಾಶ ತೆಗೆದುಕೊಂಡು ಜ. 12ರಿಂದ ನಾಲೆಗಳಿಗೆ ನೀರು ಹರಿಸಲು ತೀರ್ಮಾನಿಸಲಾಗಿದೆ ಎಂದು ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ನಿಗಮದ ಅಧೀಕ್ಷಕ ಎಂಜಿನಿಯರ್ ಕೆ.ರಘುರಾಮನ್ ತಿಳಿಸಿದರು. ತುರುಗನೂರು ಶಾಖಾ ನಾಲೆಗೆ ಪ್ರತಿ ಬಾರಿಯೂ 400 ಕ್ಯುಸೆಕ್‌ಗಿಂತಲೂ ಅಧಿಕ ಪ್ರಮಾಣದ ನೀರನ್ನು ಸ್ಥಳೀಯ ರೈತರು ಕೇಳುತ್ತಿದ್ದರು. ಆದರೆ, ಕಳೆದ ವರ್ಷ ನಾಲೆಯ ಲೈನಿಂಗ್ ಕಾಮಗಾರಿ ನಡೆದಿರುವ ಹಿನ್ನೆಲೆಯಲ್ಲಿ ನೀರಿನ ಸೋರಿಕೆ ಮತ್ತು ಭೂಮಿಯಲ್ಲಿ ಇಂಗುವಿಕೆ ಪ್ರಮಾಣ ಕಡಿಮೆಯಾಗಿದೆ. ಇದರಿಂದ ಕಾಮಗಾರಿ ಬಳಿಕ 250ರಿಂದ 300 ಕ್ಯುಸೆಕ್ ಪ್ರಮಾಣದ ನೀರನ್ನು ಮಾತ್ರ ನಾಲೆಗೆ ಬಿಡುಗಡೆ ಮಾಡಲಾಗಿದೆ. ರೈತರು ಬೆಳೆಗಳಿಗೆ ಅಷ್ಟೇ ನೀರು ಹಾಯಿಸಿಕೊಂಡಿದ್ದಾರೆ. ಇದರಿಂದ ನೀರಿನ ಉಳಿತಾಯವಾಗಿದೆ' ಎಂದು ಹೇಳಿದರು.

**ಜ. 12ರಿಂದ ಏಪ್ರಿಲ್ 30ರವರೆಗೆ ನಾಲ್ಕು ಅವಧಿಗಳಲ್ಲಿ ತಲಾ 18 ದಿನಗಳ ಕಾಲ ಕಟ್ಟು ನೀರು ಪದ್ಧತಿಯಡಿ ನಾಲೆಗಳಿಗೆ ನೀರು ಹರಿಸಲಾಗುತ್ತದೆ. 18 ದಿನ ನೀರು ಕೊಟ್ಟು, 12 ದಿನಗಳ ಕಾಲ ಸ್ಥಗಿತಗೊಳಿಸಲಾಗುತ್ತದೆ. ಹೀಗಾಗಿ ಅಚ್ಚುಕಟ್ಟು ಪ್ರದೇಶದ ರೈತರು ನೀರನ್ನು ಮಿತವಾಗಿ ಬಳಸಿಕೊಳ್ಳಬೇಕು. ನೀರಿನ ಮಿತಬಳಕೆ ಮತ್ತು ಸಂರಕ್ಷಣೆಗೆ ಆದ್ಯತೆ ನೀಡಬೇಕು.**

**– ಕೆ.ರಘುರಾಮನ್, ಅಧೀಕ್ಷಕ ಎಂಜಿನಿಯರ್ ಕಾವೇರಿ ನೀರಾವರಿ ನಿಗಮ.**

ಅಂತರಾಳದಿಂದ.. EDITORIAL

# ಶಾಂತಿಯ ತೈಲ ನಿಕ್ಷೇಪಕ್ಕೆ ಕೊಳ್ಳಿ ಇಟ್ಟ ಅಮೆರಿಕ

ವೆನೆಜುವೆಲಾದ ಮೇಲೆ ಅಮೆರಿಕ ಮುಂಜಾನೆ ನಡೆಸಿದ ದಾಳಿ ಅನಿರೀಕ್ಷಿತವಾಗಿರಲಿಲ್ಲ. ಕಳೆದ ಅಕ್ಟೋಬರ್‌ನಲ್ಲಿ ಶಾಂತಿ ನೊಬೆಲ್‌ಗೆ ವೆನೆಜುವೆಲಾದ ವಿರೋಧ ಪಕ್ಷದ ನಾಯಕಿ ಮರಿಯಾ ಕೊರಿನಾ ಮಚಾದೋ ಅವರ ಆಯ್ಕೆ ಮಾಡಿದ್ದೇ ಇಂತಹದೊಂದು ದಾಳಿಗೆ ಬೇಕಾದ ವಾತಾವರಣವನ್ನು ನಿರ್ಮಾಣ ಮಾಡಲು. ಕಳೆದ ಶಾಂತಿ ನೊಬೆಲ್ ಸ್ಪರ್ಧೆಯಲ್ಲಿ ಸ್ವತಃ ತನ್ನ ಹೆಸರನ್ನೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಘೋಷಿಸಿಕೊಂಡಿದ್ದರು, ಆದರೆ ಕೊನೆಯ ಕ್ಷಣದಲ್ಲಿ ಪ್ರಶಸ್ತಿ ವೆನೆಜುವೆಲಾದ ವಿರೋಧ ಪಕ್ಷದ ನಾಯಕಿ ಮರಿಯಾ ಅವರ ಪಾಲಾಯಿತು. ಆದರೆ ಮರಿಯಾ ಅವರು ತನಗೆ ಸಿಕ್ಕಿದ ಗೌರವವನ್ನು ಡೊನಾಲ್ಡ್ ಟ್ರಂಪ್ ಗೆ ಅರ್ಪಿಸುವ ಮೂಲಕ, ತನ್ನ ಋಣವನ್ನು ತೀರಿಸಿಕೊಂಡರು. ಮರಿಯಾ ಅವರು ವೆನೆಜುವೆಲಾದ ಸರ್ವಾಧಿಕಾರದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ ಎನ್ನುವುದು ಶಾಂತಿ ನೊಬೆಲ್ ನೀಡುವುದಕ್ಕೆ ಕಾರಣವಾಗಿತ್ತು. ಆದರೆ ಅದೇ ಹೊತ್ತಿಗೆ ಗಾಝಾದಲ್ಲಿ ಮಕ್ಕಳು, ಮಹಿಳೆಯರ ಮಾರಣ ಹೋಮ ನಡೆಸುತ್ತಿದ್ದ ಸರ್ವಾಧಿಕಾರಿ ಇಸ್ರೇಲ್‌ನ ಜೊತೆಗೆ ಮರಿಯಾ ಮಚಾದೋ ಆತ್ಮೀಯ ಸಂಬಂಧ ಹೊಂದಿದ್ದರು. ಅಲ್ಲಿನ ತೈಲ ನಿಕ್ಷೇಪಗಳ ಮೇಲೆ ನಿಯಂತ್ರಣ ಸಾಧಿಸುವ ಅಮೆರಿಕದ ಮೂರು ದಶಕಗಳ ಪ್ರಯತ್ನ ಕೊನೆಗೂ ಯಶಸ್ವಿಯಾಗಿದೆ. ಹಿಂದೆ ಇರಾಕ್‌ನ ಮೇಲೆ ದಾಳಿ ನಡೆಸಲು ಅಮೆರಿಕವು ರಾಸಾಯನಿಕ ಶಸ್ತ್ರಾಸ್ತ್ರದ ನೆಪವನ್ನು ಮುಂದಿಟ್ಟಿತ್ತು. ಇರಾಕನ್ನು ಸರ್ವನಾಶ ಮಾಡಿದ ಬಳಿಕ ಗೊತ್ತಾಯಿತು, ಆ ದೇಶ ಯಾವುದೇ ರಾಸಾಯನಿಕ ಶಸ್ತ್ರಾಸ್ತ್ರವನ್ನು ಹೊಂದಿಲ್ಲ ಎನ್ನುವುದು. ಇದೀಗ ವೆನೆಜುವೆಲಾ ಮೇಲೆ ದಾಳಿ ನಡೆಸಲು ಅಮೆರಿಕವು ಡ್ರಗ್ಸ್ ಭಯೋತ್ಪಾದನೆಯನ್ನು ಮುಂದಿಟ್ಟಿದೆ. ಈ ಹಿಂದೆ ಇಂಥದೇ ಸೇನಾ ಕಾರ್ಯಾಚರಣೆಯ ಮೂಲಕ ಪನಾಮದ ಮಾಜಿ ಸೇನಾ ನಾಯಕ ಮ್ಯಾನುವೆಲ್ ನೊರೀಗಾ ಅವರನ್ನು ಪದಚ್ಯುತಗೊಳಿಸಿತ್ತು. ವೆನೆಜುವೆಲಾದಂತೆ ಲ್ಯಾಟಿನ್ ಅಮೆರಿಕದ ಭಾಗವೇ ಆಗಿರುವ ಪನಾಮದ ಮೇಲೆ 1989ರಲ್ಲಿ ಅಮೆರಿಕದ ಸೇನಾ ಪಡೆಗಳು ದಾಳಿ ನಡೆಸಿ ನೊರೀಗಾ ಅವರನ್ನು ಬಂಧಿಸಿತ್ತು. ಭ್ರಷ್ಟಾಚಾರ ಮತ್ತು ಮಾದಕದ್ರವ್ಯ ದಂಧೆಯನ್ನು ಈ ಕಾರ್ಯಾಚರಣೆಗೆ ನೆಪವಾಗಿ ಬಳಸಿಕೊಂಡಿತ್ತು. ಅಮೆರಿಕವು ವೆನೆಜುವೆಲಾದ ನಾಗರಿಕರ ಹಿತಾಸಕ್ತಿಯ ಬಗ್ಗೆ ಮಾತನಾಡುತ್ತಿದೆಯಾದರೂ, ವೆನೆಜುವೆಲಾದ ಮಧ್ಯಂತರ ಅಧ್ಯಕ್ಷೆಯಾಗಿ ಆಯ್ಕೆಯಾಗಿರುವ ಡೆಲ್ಸಿ ರೊಡ್ರಿಗೆಸ್ ಅವರು ಈ ಕಾರ್ಯಾಚರಣೆಯನ್ನು ವಿರೋಧಿಸಿದ್ದಾರೆ ಮಾತ್ರವಲ್ಲ ಮಡುರೊ ದಂಪತಿಯನ್ನು ತಕ್ಷಣ ಬಿಡುಗಡೆಗೊಳಿಸುವಂತೆ ಆಗ್ರಹಿಸಿದ್ದಾರೆ. ದೂರದರ್ಶನದಲ್ಲಿ ಪ್ರಸಾರಗೊಂಡ ಭಾಷಣದಲ್ಲಿ ರೊಡ್ರಿಗೆಸ್, ಈ ದಾಳಿಯು ಅಂತರ್‌ರಾಷ್ಟ್ರೀಯ ಕಾನೂನು ಮತ್ತು ವೆನೆಜುವೆಲಾದ ಸಾರ್ವಭೌಮತೆಯನ್ನು ಉಲ್ಲಂಘಿಸಿದೆ ಎಂದು ಆರೋಪಿಸಿದ್ದಾರೆ. ಈ ದೇಶದಲ್ಲಿ ಒಬ್ಬರೇ ಅಧ್ಯಕ್ಷರಿದ್ದಾರೆ. ಅವರ ಹೆಸರು ನಿಕೋಲಸ್ ಮಡುರೊ ಎಂದು ಅವರು ಸ್ಪಷ್ಟಪಡಿಸಿದ್ದಾರೆ.ಅಮೆರಿಕ ಈ ವಿಶ್ವದ ಹಲವು ಸರ್ವಾಧಿಕಾರಿ ಪ್ರಭುತ್ವಗಳ ಜೊತೆಗೆ ಕೈ ಜೋಡಿಸಿದೆ. ಸರ್ವಾಧಿಕಾರಿಗಳು ತನ್ನ ಹಿತಾಸಕ್ತಿಗೆ ಪೂರಕವಾಗಿರುವುದು ಅಮೆರಿಕದ ಅಗತ್ಯವಾಗಿದೆ.

> **ಇಸ್ರೇಲ್-ಟ್ರಂಪ್ ಜೊತೆಗೆ ಕೈ ಜೋಡಿಸಿಕೊಂಡಿರುವ ಮರಿಯಾ ಈ ಜಗತ್ತಿಗೆ ನೀಡುವ ಶಾಂತಿಯ ಸ್ವರೂಪ ಏನು ಎನ್ನುವುದು ಮುಂಜಾನೆಯ ಹೊತ್ತಿಗೆ ಜಗತ್ತಿಗೆ ಸ್ಪಷ್ಟವಾಗಿದೆ. ವೆನೆಜುವೆಲಾದ ರಾಜಧಾನಿ ಕ್ಯಾರಕಾಸ್ ಮೇಲೆ ಅಮೆರಿಕವು ಭಾರೀ ವಾಯುದಾಳಿಯನ್ನು ನಡೆಸಿದ್ದು ರಾತ್ರೋರಾತ್ರಿ ಅಲ್ಲಿನ ಅಧ್ಯಕ್ಷರನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದು, ವೆನೆಜುವೆಲಾವನ್ನೂ ಕೈ ವಶ ಮಾಡಿ ಕೊಂಡಿದೆ. ಅಷ್ಟೇ ಅಲ್ಲ ವೆನೆಜುವೆಲಾದ ಜನರ ಹಿತಾಸಕ್ತಿಗಳನ್ನು ರಕ್ಷಿಸದೆ ಯಾವುದೇ ನಾಯಕ ಅದನ್ನು ತನ್ನ ಕೈಗೆ ತೆಗೆದುಕೊಳ್ಳಲು ಅಮೆರಿಕ ಅವಕಾಶ ನೀಡುವುದಿಲ್ಲ ಎಂದು ಟ್ರಂಪ್ ತಿಳಿಸಿದ್ದಾರೆ.**

ಆದುದರಿಂದ, ಅಮೆರಿಕವು ಸರ್ವಾಧಿಕಾರಿ ಅಧ್ಯಕ್ಷನನ್ನು ಕಿತ್ತೊಗೆಯಲು ಈ ಕಾರ್ಯಾಚರಣೆ ನಡೆಸಿತು ಎನ್ನುವುದು ಅಣಕದ ಮಾತು. ಮಾದಕ ದ್ರವ್ಯ ಮಾಫಿಯಾದ ಹಿನ್ನೆಲೆಯಲ್ಲಿ ಇಂತಹ ದಾಳಿ ಅಮೆರಿಕಕ್ಕೆ ಅನಿವಾರ್ಯವಾಯಿತು ಎನ್ನುವುದೂ ಇನ್ನೊಂದು ದೊಡ್ಡ ಸುಳ್ಳಾಗಿದೆ. ವೆನೆಜುವೆಲಾ ಜೊತೆಗೆ ಅಮೆರಿಕದ ಸಂಘರ್ಷ ಇಂದು ನಿನ್ನೆಯದಲ್ಲ. ಅಮೆರಿಕಕ್ಕೆ ಕಣ್ಣಿರುವುದು ವೆನೆಜುವೆಲಾದಲ್ಲಿರುವ ತೈಲ ನಿಕ್ಷೇಪದ ಮೇಲೆ. ವೆನೆಜುವೆಲಾದ ಈ ಹಿಂದಿನ ಅಧ್ಯಕ್ಷ ಹ್ಯೂಗೋ ಚಾವರ್ಝ್ ರನ್ನು ಕಿತ್ತೊಗೆಯುವುದಕ್ಕೂ ಅಮೆರಿಕ ಸಾಕಷ್ಟು ಸಂಚುಗಳನ್ನು ನಡೆಸಿತ್ತು. ಕಳೆದ ವರ್ಷ ಶಾಂತಿ ನೊಬೆಲ್ ಪ್ರಶಸ್ತಿಯನ್ನು ಗಿಟ್ಟಿಸಿಕೊಂಡಿದ್ದ ಮರಿಯಾ ಮಚಾದೋ ಅವರನ್ನು ಮುಂದಿಟ್ಟು ಅಮೆರಿಕ ನಡೆಸಿದ್ದ ಎಲ್ಲಾ ಸಂಚುಗಳನ್ನು ಚಾವರ್ಝ್ ವಿಫಲಗೊಳಿಸಿದ್ದರು. 2001ರಲ್ಲಿ ಚಾವೆರ್ಝ್ ಸರಕಾರ ವೆನೆಜುವೆಲಾದಲ್ಲಿರುವ ತೈಲ ಮತ್ತು ಅನಿಲ ನಿಕ್ಷೇಪಗಳ ಮೇಲೆ ಸರಕಾರದ ಹಕ್ಕನ್ನು ಪ್ರತಿಪಾದಿಸಿದ್ದೇ ಅಮೆರಿಕದ ಸಿಟ್ಟಿಗೆ ಕಾರಣವಾಗಿದೆ. ಹೊಸ ನೀತಿಯಂತೆ ತೈಲ ಪರಿಶೋಧನೆ ಮತ್ತು ಹೊರತೆಗೆಯುವಂತಹ ಪ್ರಮುಖ ಕಾರ್ಯಗಳನ್ನು ಸರಕಾರಿ ಕಂಪೆನಿಗಳಿಗೇ ವಹಿಸಲಾಯಿತು. ಖಾಸಗಿ ಮತ್ತು ವಿದೇಶಿ ಕಂಪೆನಿಗಳಿಗೆ ಸಂಸ್ಕರಣೆ, ಮಾರಾಟದಂತಹ ಸೀಮಿತ ಅವಕಾಶಗಳು ಮೀಸಲಾಯಿತು. 1990ರಲ್ಲಿ ಜಾರಿಗೆ ಬಂದ ಉದಾರೀಕರಣವನ್ನು ಬಳಸಿಕೊಂಡು ವೆನೆಜುವೆಲಾದ ತೈಲ ನಿಕ್ಷೇಪಗಳನ್ನು ದೋಚಲು ತುದಿಗಾಲಲ್ಲಿ ನಿಂತಿದ್ದ ಖಾಸಗಿ ಕಂಪೆನಿಗಳಿಗೆ ಹ್ಯೂಗೋ ಚಾವೆರ್ಝ್ ಜಾರಿಗೆ ತಂದ ಹೊಸ ಕಾನೂನು ಗಂಟಲ ಮುಳ್ಳಾಯಿತು. ಪರಿಣಾಮವಾಗಿ ಅಮೆರಿಕದ ತೈಲ ಕಂಪೆನಿಗಳು ಚಾವರ್ಝ್ ಮೇಲೆ ಕ್ರಮ ಕೈಗೊಳ್ಳಲು ಅಮೆರಿಕದ ಮೇಲೆ ಒತ್ತಡ ಹೇರುತ್ತಲೇ ಬಂದಿವೆ. 2002ರಲ್ಲಿ ಅಮೆರಿಕದ ಕುಮ್ಮಕ್ಕಿನಿಂದ ನಡೆದ ದಂಗೆಯೂ ವಿಫಲಗೊಂಡಿತು. ಮರಿಯಾ ಮಚಾದೋ ಮೂಲಕ ನಡೆಸಿದ ಜನಾಂದೋಲನಕ್ಕೂ ಹಿನ್ನಡೆಯಾಯಿತು. ಹ್ಯೂಗೋ ಚಾವೆರ್ಝ್‌ಅಮೆರಿಕದ ಮಸಲತ್ತುಗಳನ್ನು ಎದುರಿಸುತ್ತಲೇ ಸರಕಾರಿ ಸಂಪತ್ತನ್ನು ಪರಿಣಾಮಕಾರಿಯಾಗಿ ಸಮಾಜವಾದಿ ನೆಲೆಯಲ್ಲಿ ಸಾಮಾಜಿಕ ಅಭಿವೃದ್ಧಿಗೆ ಬಳಸಿದರು.



# ರಾಮಾಯಣ

## ವಾಲಿಯನ್ನು ವಧಿಸುತ್ತೇನೆಂದು ಶ್ರೀ ರಾಮನ ಪ್ರತಿಜ್ಞೆ

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ನೀನಿಲ್ಲದಿದ್ದ ಕಾರಣ ನಾನು ಈ ರಾಜ್ಯವನ್ನು ಪರಿಪಾಲನೆ ಮಾಡಿಕೊಂಡಿದ್ದೆನು. ಈ ರಾಜ್ಯ ದುರ್ಗ ಬಲ ಕೋಶ ಪ್ರಧಾನರಿಂದ ಸಹಿತವಾದ ಸಮಸ್ತಾಧಿಪತ್ಯವನ್ನೂ ನಿನಗೆ ತಿರುಗಿ ಕೊಟ್ಟಿರುವೆನು. ನಿನಗೆ ನನ್ನಲ್ಲಿ ನಿಷ್ಕಾರಣವಾಗಿ ರೋಷವು ಬೇಡ. ನಾನು ನಿನಗೆ ಕೈಮುಗಿದು ಸಾಷ್ಟಾಂಗವೆರಗಿ ಬೇಡಿಕೊಳ್ಳುತ್ತೇನೆ. ಮಂತ್ರಿಗಳೂ ಪ್ರಜೆಗಳೂ ಸೇರಿ ಬಲಾತ್ಕಾರದಿಂದ ನನಗೆ ರಾಜ್ಯಾಧಿಪತ್ಯವನು. ಕೊಟ್ಟರು. ಈ ರಾಜ್ಯದಲ್ಲಿ ನೀನೂ ಇಲ್ಲದೆ ನಾನೂ ಇಲ್ಲದೆ ಸುಮ್ಮನಿರಬಾರದೆಂದು ಮಂತ್ರಾಲೋಚನೆ ಮಾಡಿ ಸಚಿವರು ರಾಜ್ಯವನ್ನು ನನ್ನ ವಶಮಾಡಿದರು. ಈ ರಾಜ್ಯವನ್ನು ನೀನೇ ಪರಿಪಾಲಿಸಿಕೊಂಡಿರು ಎಂದು ಅತಿ ವಿನಯದಿಂದ ಹೇಳಿದೆನು.

ವಾಲಿಯು ನನ್ನನ್ನು ಬಹು ನಿಷ್ಟುರವಾಗಿ ನುಡಿದು ಮಂತ್ರಿಗಳನ್ನೂ ಸ್ನೇಹಿತರನ್ನೂ ಕರೆದು ಅವರ ಮಧ್ಯದಲ್ಲಿ ನನ್ನನ್ನು ದಂಡಿಸಿ ಆಡಬಾರದ ನುಡಿಗಳನ್ನಾಡಿ ಹೀಗೆಂದನು: ಎಲೈ ಮಂತ್ರಿಗಳಿರಾ, ನೀವೆಲ್ಲರೂ ಬಲ್ಲಿರಷ್ಟೆ. ಅರ್ಧರಾತ್ರಿಯ ಸಮಯದಲ್ಲಿ ಮಾಯಾವಿಯು ಈ ಪಟ್ಟಣದ ಬಾಗಿಲಲ್ಲಿ ಬಂದು ನಿಂತುಕೊಂಡು ನನ್ನನ್ನು ಯುದ್ಧಕ್ಕೆ ಬರಹೇಳಿ ಕರೆದನು. ನಾನು ಆ ಅಸುರನ ಭಯಂಕರವಾದ ಧ್ವನಿಯನ್ನು ಕೇಳಿ ಅರಮನೆಯಿಂದ ಹೊರಟು ಆತನನ್ನು ಅಟ್ಟಿಕೊಂಡು ಹೋಗುತ್ತಿರಲು ಪಾಪಿಷ್ಠನಾದ ಈ ಸುಗ್ರೀವನು ನನ್ನೊಡನೆ ಬಂದನು. ನಮ್ಮಿಬ್ಬರನ್ನು ನೋಡಿ ಮಾಯಾವಿಯು ಭಯಪಟ್ಟು ವೇಗದಿಂದ ಓಡಿಹೋಗಿ ಒಂದು ಗುಹೆಯನ್ನು ಹೊಕ್ಕನು. ನಾನು ಆ ಗುಹೆಯನ್ನು ಹೊಕ್ಕಾದರೂ ಅವನನ್ನು ಕೊಂದು ತಿರುಗಿಬರಬೇಕೆಂದು ಪ್ರತಿಜ್ಞೆಯನ್ನು ಮಾಡಿ, ನಾನು ತಿರುಗಿಬರುವವರೆಗೆ ಆ ಗುಹೆಯ ಬಾಗಿಲನ್ನು ಕಾದುಕೊಂಡಿರಲು ಆಜ್ಞೆ ಮಾಡಿ, ಇವನನ್ನು ಗುಹೆಯ ಬಾಗಿಲಲ್ಲಿರಿಸಿ ಗುಹೆಯೊಳಕ್ಕೆ ಹೋದೆನು. ಅಲ್ಲಿ ಆ ರಾಕ್ಷಸರನ್ನು ಅರಸಿಕೊಂಡು ಹೋಗಿ ಆತನನ್ನು ಕೊಂದೆನು, ಅಷ್ಟರೊಳಗೆ ಒಂದು ವರುಷವು ಕಳೆಯಿತು. ಆ ರಾಕ್ಷಸನ ರಕ್ತಜಿ ಆ ಗಾಹೆಯನ್ನು ತುಂಬಿಕೊಂಡು ಬಾಗಿಲಲ್ಲಿ ಹೊರಹೊಮ್ಮಿ ಬಂದಿತು. ಆಮೇಲೆ ನಾನು ಹೊಜ

ಬರಲು ಯತ್ನಿಸಿ ಬಾಗಿಲಲ್ಲಿ ದೊಡ್ಡ ಶಿಲೆಯು ಇದ್ದುದರಿಂದ ಸುಗ್ರೀವಾ ಸುಗ್ರೀವಾ' ಎಂದು ಬಹಳವಾಗಿ ಕೂಗಿಕೊಂಡೆನು. ಪ್ರತಿವಚನವನ್ನು ಕೇಳದೆ ಮನಸ್ಸಿನಲ್ಲಿ ಬಹುದುಃಖಪಟ್ಟು ಕಾಲಲ್ಲಿ ಒದೆಯಲು ಆ ಬಾಗಿಲಲ್ಲಿದ್ದ ಕಲ್ಲು ಉರುಳಿಹೋಯಿತು. ಆಮೇಲೆ ನಾನು ಆ ಬಾಗಿಲಿನಿಂದ ಹೊರಟುಬಂದೆನು. ಸುಗ್ರೀವನು ನನ್ನ ರಾಜ್ಯವನ್ನು ಬಯಸಿ ಗುಹೆಯಲ್ಲಿ ಹೊಕ್ಕ ನಾನು ತಿರುಗಿ ಬಾರದಹಾಗೆ ಗುಹೆಯ ಬಾಗಿಲಿಗೆ ದೊಡ್ಡಗುಂಡುಕಲ್ಲನ್ನು ಚಾಚಿದನು 'ಎಂದು ಪ್ರಧಾನರೊಡನೆಯೂ ಸಮಸ್ತ ಪರಿಜನ ಪುರಜನರೊಡನೆಯೂ ನುಡಿದು ಅತ್ಯಂತ ಕೋಪಯುಕ್ತನಾಗಿ ತಾನೇ ಸಮಸ್ತ ರಾಜ್ಯವನ್ನೂ ಆಕ್ರಮಿಸಿ ನನ್ನ ಸ್ತ್ರೀಯನ್ನೂ ಅಪಹರಿಸಿಕೊಂಡನು. ಆಮೇಲೆ ಆತನ ದ್ವೇಷಬುದ್ಧಿಯನ್ನು ಕಂಡು ನಾನು ಕಿಕ್ಕಿಂಧಾಪಟ್ಟಣದಲ್ಲಿರುವುದಕ್ಕೆ ಭಯಪಟ್ಟನು. ನನ್ನ ಸ್ತ್ರೀಯನ್ನು ಅಪಹರಿಸಿದನೆಂಬ ದುಃಖದಿಂದ ಈ ಋಷ್ಯಮೂಕಪರ್ವತಕ್ಕೆ ಬಂದೆನು. ಈ ಪ್ರಕಾರದಲ್ಲಿ ನನಗೂ ವಾಲಿಗೂ ಮಹತ್ತಾದ ವೈರವು ಹುಟ್ಟಿತು.

ಮುಂದುವರಿಯುವುದು...

# ರಾಷ್ಟ್ರೀಯ ಪಕ್ಷಿಗಳ ದಿನ: ಪ್ರಕೃತಿಯ ರೆಕ್ಕೆಗಳಲ್ಲಿರುವ ನಮ್ಮ ಭವಿಷ್ಯ

☛ ವಿಶ್ವಾಸ್.ಡಿ.ಗೌಡ



ರಾಷ್ಟ್ರೀಯ ಪಕ್ಷಿಗಳ ದಿನ ವು ಪ್ರಕೃತಿಯ ಅತ್ಯಂತ ಸುಂದರ ಮತ್ತು ಸಂವೇದನಾಶೀಲ ಜೀವಿಗಳಾದ ಪಕ್ಷಿಗಳನ್ನು ನೆನಪಿಸಿಕೊಳ್ಳುವ, ಗೌರವಿಸುವ ಹಾಗೂ ಸಂರಕ್ಷಿಸುವ ಉದ್ದೇಶದಿಂದ ಆಚರಿಸಲ್ಪಡುವ ಮಹತ್ವದ ದಿನ. ಈ ದಿನವು ಕೇವಲ ಒಂದು ಆಚರಣೆಯಷ್ಟೇ ಅಲ್ಲ; ಅದು ಮಾನವನ ಬದುಕು ಮತ್ತು ಪ್ರಕೃತಿಯ ನಡುವಿನ ಅವಿನಾಭಾವ ಸಂಬಂಧವನ್ನು ಅರಿತುಕೊಳ್ಳುವ ಸಂದರ್ಭವೂ ಹೌದು. ಪಕ್ಷಿಗಳು ನಮ್ಮ ಪರಿಸರದ ಆರೋಗ್ಯವನ್ನು ಸೂಚಿಸುವ ಜೀವಂತ ಸೂಚಕಗಳು. ಅವುಗಳ ಹಾರಾಟ, ಹಾಡು, ವಾಸಸ್ಥಾನ ಚಟುವಟಿಕೆಗಳು ಪರಿಸರ ಸಮತೋಲನದ ಕಥೆಯನ್ನು ಹೇಳುತ್ತವೆ.

ಭಾರತದ ಸಂದರ್ಭದಲ್ಲಿ ಪಕ್ಷಿಗಳಿಗೆ ವಿಶೇಷ ಸ್ಥಾನವಿದೆ. ಸಾವಿರಾರು ವರ್ಷಗಳ ಸಂಸ್ಕೃತಿ, ಸಾಹಿತ್ಯ ಮತ್ತು ಧಾರ್ಮಿಕ ಪರಂಪರೆಯಲ್ಲಿ ಪಕ್ಷಿಗಳು ರೂಪಕಗಳಾಗಿ, ಸಂಕೇತಗಳಾಗಿ ಮತ್ತು ಕಥಾನಾಯಕರಾಗಿ ಕಾಣಿಸಿಕೊಂಡಿವೆ. ಈ ಪರಂಪರೆಯಲ್ಲೇ ಭಾರತೀಯ ನವಿಲು ನಮ್ಮ ದೇಶದ ರಾಷ್ಟ್ರೀಯ ಪಕ್ಷಿಯಾಗಿ ಆಯ್ಕೆಯಾಗಿದ್ದು, ಅದರ ವೈಭವ, ಸೌಂದರ್ಯ ಮತ್ತು ಶಾಂತಿಯ ಸಂಕೇತವಾಗಿ ನಿಂತಿದೆ. ನವಿಲಿನ ಬಣ್ಣಬಣ್ಣದ ರೆಕ್ಕೆಗಳು ಭಾರತೀಯ ವೈವಿಧ್ಯತೆಯ ಪ್ರತೀಕವಾಗಿದ್ದರೆ, ಮಳೆಯ ಕಾಲದಲ್ಲಿ ಅದರ ನೃತ್ಯ ಪ್ರಕೃತಿಯ ಉಲ್ಲಾಸವನ್ನು ಸಾರುತ್ತದೆ.




ಪಕ್ಷಿಗಳು ಪರಿಸರ ವ್ಯವಸ್ಥೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಕೀಟ ನಿಯಂತ್ರಣ, ಬೀಜ ಹರಡುವಿಕೆ, ಪರಾಗಸಂಚರಣೆ ಇವೆಲ್ಲವೂ ಪಕ್ಷಿಗಳಿಂದಲೇ ಸಾಧ್ಯವಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ರೈತರಿಗೆ ಪಕ್ಷಿಗಳು ನೈಸರ್ಗಿಕ ಸಹಾಯಕರಾಗಿವೆ. ಅನಗತ್ಯ ಕೀಟಗಳನ್ನು ತಿನ್ನುವ ಮೂಲಕ ಬೆಳೆಗಳನ್ನು ರಕ್ಷಿಸುತ್ತವೆ. ಅರಣ್ಯಗಳಲ್ಲಿ ಬೀಜಗಳನ್ನು ದೂರದೂರಿಗೆ ಹರಡುವುದರಿಂದ ಹೊಸ ಸಸ್ಯಜೀವನಕ್ಕೆ ಕಾರಣವಾಗುತ್ತವೆ. ಈ ಕಾರಣದಿಂದಲೇ ಪಕ್ಷಿಗಳ ಅಸ್ತಿತ್ವವು ಪರಿಸರ ಸಮತೋಲನದ ಅಡಿಪಾಯವೆಂದು ಹೇಳಬಹುದು. ಆದರೆ ಇತ್ತೀಚಿನ ವರ್ಷಗಳಲ್ಲಿ ಪಕ್ಷಿಗಳ ಸಂಖ್ಯೆ ಗಂಭೀರವಾಗಿ ಕುಸಿಯುತ್ತಿರುವುದು ಕಳವಳಕಾರಿ ಸಂಗತಿ. ಅರಣ್ಯ ನಾಶ, ನಗರೀಕರಣ, ವಿದ್ಯುತ್ ತಂತಿಗಳು, ಪ್ಲಾಸ್ಟಿಕ್ ಮಾಲಿನ್ಯ, ರಾಸಾಯನಿಕ ಕೀಟನಾಶಕಗಳ ಅತಿಯಾದ ಬಳಕೆ ಇವುಗಳೆಲ್ಲ ಪಕ್ಷಿಗಳ ಬದುಕಿಗೆ ಭಾರೀ ಅಪಾಯ ತಂದಿವೆ. ಜಲಾಶಯಗಳ ಒಣಗುವಿಕೆ ಮತ್ತು ಹವಾಮಾನ ಬದಲಾವಣೆಯ ಪರಿಣಾಮಗಳು ಪಕ್ಷಿಗಳ ವಲಸೆ ಮಾರ್ಗಗಳನ್ನೂ ಅಸ್ತವ್ಯಸ್ತಗೊಳಿಸುತ್ತಿವೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪಕ್ಷಿಗಳ ದಿನವು ಎಚ್ಚರಿಕೆಯ ಘಂಟೆಯಂತೆ ಕೆಲಸ ಮಾಡುತ್ತದೆ.

ಶಿಕ್ಷಣ ಕ್ಷೇತ್ರದಲ್ಲಿ ಈ ದಿನದ ಮಹತ್ವ ಮತ್ತಷ್ಟು ಹೆಚ್ಚಾಗಿದೆ. ಶಾಲಾ-ಕಾಲೇಜುಗಳಲ್ಲಿ ಪಕ್ಷಿ ವೀಕ್ಷಣಾ ಕಾರ್ಯಕ್ರಮಗಳು, ಚಿತ್ರಕಲೆ ಸ್ಪರ್ಧೆಗಳು, ಪ್ರಬಂಧ ಬರವಣಿಗೆ, ನೈಸರ್ಗಿಕ ಸಂರಕ್ಷಣೆಯ ಕುರಿತು ಉಪನ್ಯಾಸಗಳು ಇವುಗಳ ಮೂಲಕ ಮಕ್ಕಳಲ್ಲಿ ಪ್ರಕೃತಿಯ ಬಗ್ಗೆ ಪ್ರೀತಿ ಬೆಳೆಸಬಹುದು. ಬಾಲ್ಯದಲ್ಲೇ ಪಕ್ಷಿಗಳೊಂದಿಗೆ ಆತ್ಮೀಯತೆ ಬೆಳೆದರೆ, ಮುಂದಿನ ಪೀಳಿಗೆ ಪರಿಸರ ರಕ್ಷಣೆಗೆ ಸಹಜವಾಗಿ ಬದ್ಧವಾಗುತ್ತದೆ. ಮನೆಯಲ್ಲೇ ನೀರಿನ ಪಾತ್ರೆಗಳು ಇಡುವುದು, ಮರಗಳನ್ನು ನೆಡುವುದು, ಗೂಡುಗಳಿಗೆ ಸ್ಥಳ ಕಲ್ಪಿಸುವುದು ಇವೆಲ್ಲ ಸಣ್ಣ ಆದರೆ ಅರ್ಥಪೂರ್ಣ ಹೆಜ್ಜೆಗಳು. ನವಿಲು ಸೇರಿದಂತೆ ಎಲ್ಲಾ ಪಕ್ಷಿಗಳ ಸಂರಕ್ಷಣೆಯ ಹೊಣೆಗಾರಿಕೆ ಸರ್ಕಾರದೊಂದಿಗೇ ಸೀಮಿತವಲ್ಲ. ಪ್ರತಿಯೊಬ್ಬ ನಾಗರಿಕನೂ ತನ್ನ ಮಟ್ಟದಲ್ಲಿ ಜವಾಬ್ದಾರಿ ವಹಿಸಬೇಕು. ನಗರಗಳಲ್ಲಿ ಹಸಿರು ಪ್ರದೇಶಗಳನ್ನು ಉಳಿಸುವುದು, ಅನಗತ್ಯ ಶಬ್ದಮಾಲಿನ್ಯವನ್ನು ಕಡಿಮೆ ಮಾಡುವುದು, ಪಟಾಕಿ ಬಳಕೆಯನ್ನು ನಿಯಂತ್ರಿಸುವುದು ಪಕ್ಷಿಗಳಿಗೆ ದೊಡ್ಡ ನೆರವಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಕೆರೆ-ಕೊಳಗಳನ್ನು ಕಾಪಾಡುವುದು, ಕೃಷಿಯಲ್ಲಿ ರಾಸಾಯನಿಕಗಳ ಬಳಕೆಯನ್ನು ನಿಯಂತ್ರಿಸುವುದು ಅತ್ಯಗತ್ಯ. ರಾಷ್ಟ್ರೀಯ ಪಕ್ಷಿಗಳ ದಿನವು ನಮಗೆ ಒಂದು ಮಹತ್ವದ ಸಂದೇಶವನ್ನು ನೀಡುತ್ತದೆ ಪ್ರಕೃತಿಯನ್ನು ಉಳಿಸಿದರೆ ಮಾತ್ರ ಮಾನವ ಬದುಕು ಸುಸ್ಥಿರವಾಗಿರುತ್ತದೆ. ಪಕ್ಷಿಗಳ ಹಾರಾಟ ನಮ್ಮ ಕನಸುಗಳಂತೆ ಮುಕ್ತವಾಗಿರಬೇಕು; ಅವುಗಳ ಹಾಡು ನಮ್ಮ ಪರಿಸರದ ಆರೋಗ್ಯದ ಘೋಷಣೆಯಾಗಬೇಕು. ಇಂದು ನಾವು ಕೈಗೊಳ್ಳುವ ಸಂರಕ್ಷಣಾ ಕ್ರಮಗಳು ನಾಳೆಯ ಪೀಳಿಗೆಗೆ ಸುಂದರವಾದ ಆಕಾಶವನ್ನು ನೀಡುತ್ತವೆ. ಸಾರಾಂಶವಾಗಿ ಹೇಳುವುದಾದರೆ, ರಾಷ್ಟ್ರೀಯ ಪಕ್ಷಿಗಳ ದಿನವು ಪ್ರಕೃತಿಯ ಸೌಂದರ್ಯವನ್ನು ಸಂಭ್ರಮಿಸುವುದಷ್ಟೇ ಅಲ್ಲ, ನಮ್ಮ ಕರ್ತವ್ಯವನ್ನು ನೆನಪಿಸುವ ದಿನವೂ ಹೌದು. ಪಕ್ಷಿಗಳನ್ನು ಉಳಿಸುವುದು ಎಂದರೆ ಪರಿಸರವನ್ನು, ಬದುಕನ್ನು ಮತ್ತು ಭವಿಷ್ಯವನ್ನು ಉಳಿಸುವುದೇ ಆಗಿದೆ. ಈ ದಿನದಂದು ನಾವು ಎಲ್ಲರೂ ಒಂದು ಸಂಕಲ್ಪ ಮಾಡೋಣ-ಪಕ್ಷಿಗಳ ರೆಕ್ಕೆಗಳಿಗೆ ಸ್ವಾತಂತ್ರ್ಯ, ಅವುಗಳ ಗಾನಕ್ಕೆ ಗೌರವ ಮತ್ತು ಪ್ರಕೃತಿಗೆ ನಿಷ್ಠೆ.



# ಈ ಪುರುಷರನ್ನು ಮಹಿಳೆಯರು ಆಯ್ಕೆ ಮಾಡಲೇ ಬಾರದು

ಮಹಿಳೆಯರೇ, ಈ ಮೂರು ಗುಣಗಳನ್ನು ಹೊಂದಿರುವ ಪುರುಷರನ್ನು ಯಾವತ್ತೂ ಜೀವನ ಸಂಗಾತಿಯನ್ನಾಗಿ ಆಯ್ಕೆ ಮಾಡಬಾರದು ಎನ್ನುತ್ತಾರೆ ಸಂಬಂಧ ತಜ್ಞೆ ಸೋಫಿಯಾ ಚೌಹಾಣ್ . ಸಂಬಂಧದ ಬಗ್ಗೆ ಹಲವಾರು ಧಾರ್ಮಿಕ ಗ್ರಂಥಗಳಲ್ಲೂ ಹೇಳಲಾಗಿದೆ.



ಜೀವನದ ಪ್ರತಿಯೊಂದು ಅಂಶದಲ್ಲೂ ನಮಗೆ ಮಾರ್ಗದರ್ಶನ ನೀಡುತ್ತದೆ ಎಂದು ಹೇಳಲಾಗುತ್ತದೆ. ಅದು ಸಂಬಂಧಗಳೇ ಆಗಿರಲಿ, ಸ್ವಾಭಿಮಾನ ಅಥವಾ ತಪ್ಪುಗಳಿಂದ ಸರಿಯನ್ನು ಆರಿಸಿಕೊಳ್ಳುವುದೇ ಆಗಿರಲಿ, ಭಗವದ್ಗೀತೆಯು ಪ್ರತಿಯೊಂದು ಪ್ರಶ್ನೆಗೆ ಮತ್ತು ನಿಮ್ಮ ಸಂದಿಗ್ಧತೆಗೆ ಪರಿಹಾರವನ್ನು ಹೊಂದಿದೆ. ಸಂಬಂಧದಲ್ಲಿ ಯಾವ ರೀತಿಯ ಪುರುಷರಿಂದ ದೂರವಿರುವುದು ಉತ್ತಮ ಎನ್ನುವುದನ್ನು ರಿಲೇಶನ್‌ಶಿಪ್ ಸ್ಪೆಶಲಿಸ್ಟ್ ಕೆಲವೊಂದು ಟಿಪ್ಸ್ ನೀಡಿದ್ದಾರೆ.

> **ಅಪ್ರಾಮಾಣಿಕ, ಕುತಂತ್ರಿ ಮನುಷ್ಯ**
> **ಮೂರನೆಯ ಮತ್ತು ಅತ್ಯಂತ ಅಪಾಯಕಾರಿ ಪ್ರಕಾರ ಅಪ್ರಾಮಾಣಿಕ ಮನುಷ್ಯ. ಅಂತಹ ಜನರು ಸಿಹಿ ಮಾತುಗಳಿಂದ ವಿಶ್ವಾಸವನ್ನು ಗಳಿಸುತ್ತಾರೆ, ಆದರೆ ಅವರ ಉದ್ದೇಶಗಳು ಸ್ಪಷ್ಟವಾಗಿರುವುದಿಲ್ಲ. ಸುಳ್ಳು ಹೇಳುವುದು, ಸತ್ಯವನ್ನು ಮರೆಮಾಡುವುದು ಮತ್ತು ಭಾವನೆಗಳೊಂದಿಗೆ ಆಟವಾಡುವುದು ಅವರ ವಿಧಾನಗಳು. ಗೀತೆಯು ಸತ್ಯವನ್ನು ಧರ್ಮದ ಅಡಿಪಾಯವೆಂದು ಪರಿಗಣಿಸುತ್ತದೆ. ಸತ್ಯವಿಲ್ಲದೆ, ಸಂಬಂಧಗಳು ದ್ರೋಹ ಮತ್ತು ದುಃಖಕ್ಕೆ ಮಾತ್ರ ಕಾರಣವಾಗುತ್ತವೆ. ಯಾವಾಗಲೂ ವಿನಮ್ರ, ಸಂಯಮ ಮತ್ತು ಸತ್ಯವಂತ ಜನರ ಒಡನಾಟ ಬೆಳೆಸಿ. ಅಂತಹ ಸಂಗಾತಿ ನಿಮ್ಮನ್ನು ಗೌರವಿಸುವುದಲ್ಲದೆ ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ನಿಮ್ಮನ್ನು ಬಲಪಡಿಸುತ್ತಾರೆ.**

ಯಾವ ರೀತಿಯ ಜನರಿಂದ ದೂರವಿರಬೇಕು ಸಂಬಂಧ, ಮನಸ್ಥಿತಿ ತರಬೇತುದಾರ ಸೋಫಿಯಾ ಚೌಹಾಣ್ ಈ ವಿಷಯದ ಕುರಿತು ತಮ್ಮ ಇನ್‌ಸ್ಟಾಗ್ರಾಮ್ ಹ್ಯಾಂಡಲ್‌ನಲ್ಲಿ ವಿಡಿಯೋವನ್ನು ಹಂಚಿಕೊಂಡಿದ್ದಾರೆ. ಭಗವದ್ಗೀತೆಯು ಸರಿಯಾದ ಜನರನ್ನು ಹೇಗೆ ಆಯ್ಕೆ ಮಾಡಬೇಕೆಂದು ನಮಗೆ ಕಲಿಸುತ್ತದೆ. ಪ್ರತಿಯೊಬ್ಬರೂ ನಿಮ್ಮ ಜೀವನದಲ್ಲಿ ಸ್ಥಾನ ಪಡೆಯಲು ಅರ್ಹರಲ್ಲ. ಕೆಲವರು ನಿಧಾನವಾಗಿ ನಿಮ್ಮ ಮನಸ್ಸಿನ ಶಾಂತಿ, ಆತ್ಮವಿಶ್ವಾಸ ಮತ್ತು ಶಕ್ತಿಯನ್ನು ಕಸಿದುಕೊಳ್ಳುತ್ತಾರೆ. ಗೀತೆಯ ಬೋಧನೆಗಳ ಪ್ರಕಾರ, ವಿಶೇಷವಾಗಿ ಮೂರು ರೀತಿಯ ಪುರುಷರಿಂದ ದೂರವನ್ನು ಕಾಯ್ದುಕೊಳ್ಳುವುದು ಬುದ್ಧಿವಂತಿಕೆಯಾಗಿದೆ ಎನ್ನುತ್ತದೆ.

**ದುರಹಂಕಾರಿ ವ್ಯಕ್ತಿ:** ಈ ವ್ಯಕ್ತಿಯು ತನ್ನನ್ನು ತಾನು ಶ್ರೇಷ್ಠನೆಂದು ಪರಿಗಣಿಸುತ್ತಾನೆ ಮತ್ತು ಇತರರ ಅಭಿಪ್ರಾಯಗಳು, ಭಾವನೆಗಳು ಅಥವಾ ಆಲೋಚನೆಗಳಿಗೆ ಬೆಲೆ ನೀಡುವುದಿಲ್ಲ. ಅವನ ದೃಷ್ಟಿಯಲ್ಲಿ, ಅವನು ಸರಿ ಮತ್ತು ಉಳಿದವರೆಲ್ಲರೂ ತಪ್ಪು. ಅವನು ನಿಮ್ಮ ಭಾವನೆಗಳನ್ನು ಅಥವಾ ನಿಮ್ಮ ಅಭಿಪ್ರಾಯಗಳನ್ನು ಗೌರವಿಸುವುದಿಲ್ಲ. ಅವನ ನಾನು ಅವನಿಗೆ ಅತ್ಯಂತ ಮುಖ್ಯವಾದ ವಿಷಯ. ಅಂತಹ ವ್ಯಕ್ತಿಯೊಂದಿಗಿನ ಸಂಬಂಧವು ಸಮಾನವಲ್ಲ. ಭಗವದ್ಗೀತೆಯು ಅಹಂಕಾರವನ್ನು ಅಜ್ಞಾನದ ಮೂಲ ಎಂದು ವಿವರಿಸುತ್ತದೆ. ಅಹಂ ಇರುವಲ್ಲಿ, ಪ್ರೀತಿ, ಗೌರವ ಮತ್ತು ತಿಳುವಳಿಕೆಯ ಕೊರತೆ ಇರುತ್ತದೆ. ಅಂತಹ ಸಂಬಂಧಗಳು ಕಾಲಾನಂತರದಲ್ಲಿ ಹೊರೆಯಾಗಲಾರಂಭಿಸುತ್ತವೆ.

# ಸರಳ ಸಜ್ಜನಿಕೆಯ ವ್ಯಕ್ತಿತ್ವದ ಜನ ನಾಯಕರು ಬಸವರಾಜ ಹೊರಟ್ಟಿರವರು



ಸಾಮಾಜಿಕ ಕಳಕಳಿ

ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

ನೇರನುಡಿ ಹೇಳುವುದು ಸರಿಯಿಹುದು ಜೀವನದಿ
ಸಾರುವುದು ಜನಗಳಿಗೆ ಸಮಾನತೆಯ
ಮೋರಿಯಲಿ ಬೀಳುತಲಿ ಸುಳ್ಳುಗಳ ಹೇಳದಿರು
ಮಾರದಲೆ ತನ್ನತನ ಲಕ್ಷ್ಮಿ ದೇವಿ....

ಈ ಮೇಲಿನ ಮುಕ್ತಕವನ್ನು ಶ್ರೀಯುತ ಬಸವರಾಜ ಹೊರಟ್ಟಿರವರಿಗಾಗಿ ಬರೆದಿದ್ದೇನೆ. ಏಕೆ ಬರೆದಿದ್ದೇನೆ ಎಂಬುದನ್ನು ಸವಿವರವಾಗಿ ತಿಳಿಸುತ್ತೇನೆ. ನೇರವಾದ ಮಾತುಗಳನ್ನು ಹೇಳುತ್ತಾ ಜೀವನದಲ್ಲಿ ಸರಿಯಾದ ಸರಿ ಸಮಾನತೆಯನ್ನು ಹೊಂದುತ್ತಾ ಬದುಕು ಎಂದರೆ ಒಳ್ಳೆಯ ಕಾರ್ಯಕ್ಕೆ ಸೀಮಿತ ಎಂಬುದನ್ನು ತಿಳಿಸಿದ್ದಾರೆ. ಪ್ರತಿಯೊಬ್ಬರೂ ಸಮಾನತೆಯಿಂದ ಜೀವನ ಮಾಡಬೇಕು ಎಂಬುದನ್ನು ಎಲ್ಲರಿಗೂ ಸಾರುತ್ತಿದ್ದಾರೆ. ಲಂಚ, ಭ್ರಷ್ಟಾಚಾರದ ವಿರುದ್ಧ ಸಿಡಿಯುವವರು. ಸಮಾಜಕ್ಕೆ ತನ್ನನ್ನು ತಾನು ತೊಡಗಿಸಿಕೊಂಡು ಕಾರ್ಯ ನಿರ್ವಹಿಸುತ್ತಿರುವುದು ಅಷ್ಟೇ ಅಲ್ಲ ಸುಳ್ಳುಗಳನ್ನು ಹೇಳದಂತೆ ಜೀವನದಲ್ಲಿ ಮಹತ್ವದ ಪಾತ್ರವನ್ನು ಹೊಂದಬೇಕು ಎಂದು ಹೇಳುತ್ತ, ಸುಳ್ಳು ಹೇಳಿದವನು ಮೋರಿಯಲ್ಲಿ ಬಿದ್ದಂತೆ ಸತ್ಯಕ್ಕೆ ಪ್ರಾಮುಖ್ಯತೆಯನ್ನು ನೀಡಬೇಕೆಂಬುದನ್ನು ತಿಳಿಸಿದ್ದಾರೆ. ತನ್ನತನವನ್ನು ಎಂದಿಗೂ ಮಾರಬಾರದು ಎಂದು ತಿಳಿಸಿದ್ದಾರೆ. ಜನಸೇವೆಯೇ ಜನಾರ್ಧನನಾ ಸೇವೆ ಎಂದು ಹೇಳುತ್ತಾ ಸಾಗುತ್ತಿರುವ ಇವರು ತುಂಬಿದ ಕೊಡದಂತೆ ಸಾಧಕರಿಗೆ ಪ್ರೋತ್ಸಾಹ, ಬೆಂಬಲ ನೀಡುವವರು. ಸ್ವಲ್ಪವೂ ಹಮ್ಮಿಲ್ಲದೆ ವರ್ತಿಸುವವರು ಬದುಕಿನ ಜೀವನವ ಅರಿತವರು ಕಷ್ಟ ಸುಖಗಳನು ಸಮಾನತೆಯಲಿ ಕಂಡವರು ಬದುಕಲ್ಲಿ ಅತೀ ಎತ್ತರದ ಶಿಖರ ಏರಿದವರು..... ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಸ್ವಲ್ಪವೂ ಜಂಭವಿಲ್ಲದ ಸ್ವಭಾವ ಹೊಂದಿದವರು. ಇವರ ಹೆಸರನ್ನು ಕೇಳಿದವರು ಇವರಿಗೆ ಮೊದಲು ಹೇಳುವುದು ಬಸವರಾಜ ಹೊರಟ್ಟಿರವರು ಸಮಾಜಮುಖಿ ಕೆಲಸಗಳಲ್ಲಿ ತನ್ನದೇ ಆದ ಅಸ್ತಿತ್ವವನ್ನು ಒಳಗೊಂಡಿದ್ದು. ಕಾರ್ಯಸಿದ್ಧಿ ಮಾಡಿದವರೆಂದು. ಅರೆ ಇದೇನಪ್ಪಾ ಇದು ಯಾವ ರಾಜಕೀಯದ ವಿಷಯಕ್ಕೂ ಹೋಗದ ಪ್ರತಿಮಾ ಹಾಸನವರು ಈ ರೀತಿಯಾಗಿ ಬಸವರಾಜ ಹೊರಟ್ಟಿ ರವರ ಬಗ್ಗೆ ಬರೆಯಲು ಕಾರಣವೇನು? ಯೋಚಿಸೋದು ಸಾಮಾನ್ಯ ಓದುಗರ ಪ್ರಶ್ನೆ ಗೆ ಮುಂದೆ ಉತ್ತರ ಸಿಗಲಿದೆ. ಇವರು ಮಹಾನ್ ಸಾಧಕರು ಯಾರಿಗೆ ತಿಳಿದಿಲ್ಲ ಹೇಳಿ ಎಲ್ಲರಿಗೂ ತಿಳಿದವರು ಇವರ ಬಗ್ಗೆ ನಾನು ಹೇಳಿ ತಿಳಿಯಬೇಕಾದದ್ದು ಏನು ಇಲ್ಲ. ಪ್ರತಿಯೊಂದಕ್ಕೂ ಒಂದು ಕಾರಣ ಇದ್ದೆ ಇರುತ್ತದೆ. ಹೀಗೆ ಬೆಂಗಳೂರಿಗೆ ಪ್ರಶಸ್ತಿಗೆ ಎಂದು ಹೊರಟ ನನ್ನ ಪಯಣ ಒಂದು ದಿನ ಕೆಲಸಗಳ ಅನಿವಾರ್ಯ ಅಲ್ಲಿಯೇ ಉಳಿಯುವ ಪರಿಸ್ಥಿತಿ ಬಂದದ್ದು ಅಕ್ಕ ಮಮತಾ ರವರ ಮನೆಯಲ್ಲಿ ಇದ್ದು. ಬೇಗನೆ ಹಾಸನ ತಲುಪುವ ಮಧ್ಯ ಟ್ರಾಫಿಕ್‌ನಲ್ಲಿ ಸಿಕ್ಕವರೇ ನಮ್ಮ ಜನ ನಾಯಕರು ಬಸವರಾಜು ಹೊರಟ್ಟಿ ರವರು ಅವರ ಧರ್ಮ ಪತ್ನಿರವರು ಸಿಗ್ನಲ್‌ನಲ್ಲಿ ನಮಸ್ಕಾರ ಮಾಡಿದೆ ಅವರು ನಮಸ್ಕಾರ ಮಾಡಿದರು. ಸ್ಕೂಟಿಯಲ್ಲಿ ಬಹಳ ದೊಡ್ಡ ಬ್ಯಾಗ್ ಅದರೊಳಗೆ ನನ್ನ ಪುಸ್ತಕ ಆ ಪುಸ್ತಕ ಕೊಡುವ ಆಸೆ ಆದರೆ ತೆಗೆಯಲು ಆಗದು ಬೀಳುವುದನ್ನು ಲೆಕ್ಕಿಸದೆ ಗಡಿಬಿಡಿಯಲ್ಲೇ ಪುಸ್ತಕ ಕೊಟ್ಟೇನು ಅವರು ಬಹಳ ವಿನಯದಿಂದ ಪುಸ್ತಕ ಪಡೆದರು. ಮಾತನಾಡಿಸಿ ಫೋನ್ ಮಾಡುವುದಾಗಿ ತಿಳಿಸಿದ್ದರು

ಮುಂದುವರೆಯುವುದು..



# ಗರ್ಭಿಣಿಯರು, ಈ ಬೀಜಗಳನ್ನು ಸೇವಿಸಿ

ಗರ್ಭಿಣಿಯರು ಯಾವೆಲ್ಲಾ ಬೀಜಗಳನ್ನು ತಿನ್ನೋದು ರಕ್ತಹೀನತೆ ತಡೆಯೋದಲ್ಲದೆ ಭ್ರೂಣದ ಬೆಳವಣಿಗೆಗೆ ಉತ್ತಮವಾಗಿದೆ. ಮೊದಲ ತ್ರೈಮಾಸಿಕದಲ್ಲಿನ ಕೆಲವೊಂದು ಸಮಸ್ಯೆಗಳನ್ನು ನಿವಾರಿಸಲು ಇದು ಅವಶ್ಯಕ. ಗರ್ಭಾವಸ್ಥೆಯಲ್ಲಿ ತಾಯಿ ಹಾಗೂ ಮಗು ಆರೋಗ್ಯಕರವಾಗಿರಲು ಅವರಿಗೆ ಬೇಕಾಗಿರುವ ಅಗತ್ಯ ಪೋಷಕಾಂಶಗಳನ್ನು ಒದಗಿಸುವುದು ಮುಖ್ಯ. ಸೈನ್ಸ್ ಡೈರೆಕ್ಟ್‌ನಲ್ಲಿ ಪ್ರಕಟವಾದ ಅಧ್ಯಯನದ ಪ್ರಕಾರ, ಗರ್ಭಾವಸ್ಥೆಯಲ್ಲಿ ಪೌಷ್ಠಿಕಾಂಶದ ಅಗತ್ಯಗಳು ತಾಯಿ ಭ್ರೂಣದ ಆರೋಗ್ಯಕ್ಕೆ ನಿರ್ಣಾಯಕವಾಗಿವೆ ಮತ್ತು ಈ ನಿಟ್ಟಿನಲ್ಲಿ ಬೀಜಗಳು ಸೂಪರ್‌ಫುಡ್ ಆಗಿ ಕಾರ್ಯನಿರ್ವಹಿಸುತ್ತವೆ. ಭ್ರೂಣದ ಬೆಳವಣಿಗೆಯನ್ನು ಬೆಂಬಲಿಸುವಲ್ಲಿ ಮತ್ತು ಗರ್ಭಾವಸ್ಥೆಯ ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಅವಧಿಪೂರ್ವ ಜನನದಂತಹ ತೊಡಕುಗಳ ಅಪಾಯವನ್ನು ಕಡಿಮೆ ಮಾಡುವಲ್ಲಿ ಅವು ಮಹತ್ವದ ಪಾತ್ರ ವಹಿಸುತ್ತವೆ.

**ಕುಂಬಳಕಾಯಿ ಬೀಜಗಳು:** ಕುಂಬಳಕಾಯಿ ಬೀಜಗಳು ಕಬ್ಬಿಣ, ಸತು, ಮೆಗ್ನೀಸಿಯಮ್‌ನಲ್ಲಿ ಸಮೃದ್ಧವಾಗಿವೆ, ಇದು ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ ಮತ್ತು ಆಯಾಸವನ್ನು ಕಡಿಮೆ ಮಾಡುತ್ತದೆ. ಹೆಚ್ಚಿದ ರಕ್ತದ ಪ್ರಮಾಣವನ್ನು ಬೆಂಬಲಿಸುವಲ್ಲಿ ಮತ್ತು ರಕ್ತಹೀನತೆಯನ್ನು ಎದುರಿಸುವಲ್ಲಿ ಕಬ್ಬಿಣವು ಪ್ರಮುಖ ಪಾತ್ರ ವಹಿಸುತ್ತದೆ. ಸ್ತ್ರೀರೋಗತಜ್ಞರು ಸೂಚಿಸಿದಂತೆ, ಅವು ಬೆಳಗಿನ ಬೇನೆಯ ಅವಧಿಯಲ್ಲಿ ಶಕ್ತಿಯನ್ನು ಹೆಚ್ಚಿಸಲು ಉತ್ತಮ, ಸರಳವಾದ ತಿಂಡಿಯಾಗಿದೆ.

**ಸೂರ್ಯಕಾಂತಿ ಬೀಜಗಳು:** ಈ ಬೀಜಗಳು ಫೋಲೇಟ್, ವಿಟಮಿನ್ ಇ ಮತ್ತು ಆರೋಗ್ಯಕರ ಕೊಬ್ಬನ್ನು ತರುತ್ತವೆ, ಇದು ಅಭಿವೃದ್ಧಿ ಹೊಂದುತ್ತಿರುವ ಕೋಶಗಳನ್ನು ಆಕ್ಸಿಡೇಟಿವ್ ಒತ್ತಡದಿಂದ ರಕ್ಷಿಸಲು ಸಹಾಯ ಮಾಡುತ್ತದೆ. ಫೋಲೇಟ್ ಮೊದಲ ಕೆಲವು ವಾರಗಳಲ್ಲಿ ಅತ್ಯಗತ್ಯ ಏಕೆಂದರೆ ಇದು ಮಗುವಿನ ನರ ಕೊಳವೆಯ ನಿರ್ಣಾಯಕ ಬೆಳವಣಿಗೆಯನ್ನು ಬೆಂಬಲಿಸುತ್ತದೆ. ಸೂರ್ಯಕಾಂತಿ ಬೀಜಗಳ ಸಣ್ಣ ದೈನಂದಿನ ಸೇವನೆಯು ತಾಯಿಯ ದೈನಂದಿನ ವಿಟಮಿನ್ ಸೇವನೆಯನ್ನು ಪೂರೈಸುತ್ತದೆ.



**ಅಗಸೆಬೀಜಗಳು:** ಅಗಸೆಬೀಜಗಳು ಸಸ್ಯ ಆಧಾರಿತ ಒಮೆಗಾ-3 ಗಳನ್ನು ಒದಗಿಸುತ್ತವೆ, ಇದು ಆರಂಭಿಕ ತಿಂಗಳುಗಳಲ್ಲಿ ಹಾರ್ಮೋನುಗಳ ನಿಯಂತ್ರಣವನ್ನು ಬೆಂಬಲಿಸುತ್ತದೆ. ಅವುಗಳು ಲಿಗ್ನಾನ್‌ಗಳನ್ನು ಸಹ ಹೊಂದಿರುತ್ತವೆ, ಇದು ಮೊದಲ ತ್ರೈಮಾದಸಿಕದ ಮೇಲೆ ಪರಿಣಾಮ ಬೀರುವ ಹಾರ್ಮೋನುಗಳ ಬದಲಾವಣೆಗಳನ್ನು ಸಮತೋಲನಗೊಳಿಸಲು ಸಹಾಯ ಮಾಡುತ್ತದೆ.

**ಕಲ್ಲಂಗಡಿ ಬೀಜಗಳು:** ಕಲ್ಲಂಗಡಿ ಬೀಜಗಳು ಕಬ್ಬಿಣ, ಆರೋಗ್ಯಕರ ಕೊಬ್ಬುಗಳು ಮತ್ತು ವಿಟಮಿನ್ ಬಿ ಯಿಂದ ತುಂಬಿರುತ್ತವೆ. ಇದು ಕೆಂಪು ರಕ್ತ ಕಣಗಳ ಉತ್ಪಾದನೆಯನ್ನು ಬೆಂಬಲಿಸುತ್ತದೆ, ಅಂತಿಮವಾಗಿ ಮೊದಲ ತ್ರೈಮಾಸಿಕದಲ್ಲಿ ದೌರ್ಬಲ್ಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಅವುಗಳ ಸಮೃದ್ಧ ವಿಟಮಿನ್ ಬಿ ಅಂಶವು ಚಯಾಪಚಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ ಮತ್ತು ಸೂಕ್ಷ್ಮ ಪೋಷಕಾಂಶಗಳು ಅತ್ಯುತ್ತಮ ರಕ್ತದ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

# ಗ್ರೀನ್ ಸಿಗ್ನಲ್ ಕೊಟ್ಟು ವರ್ಷ ಕಳೆದ್ರೂ

## ಆರಂಭವಾಗದ ಆರೆಂಜ್ ಲೈನ್ ಮೆಟ್ರೋ ಕಾಮಗಾರಿ



• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿ ಬೆಂಗಳೂರಿನ ಬಹು ನಿರೀಕ್ಷಿತ ಮೆಟ್ರೋ ಮಾರ್ಗ ಕೇಂದ್ರ ಸರ್ಕಾರ ಗ್ರೀನ್ ಸಿಗ್ನಲ್ ನೀಡಿ ಒಂದು ವರ್ಷ ಕಳೆದಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರೇ ಶಂಕುಸ್ಥಾಪನೆಯನ್ನು ಮಾಡಿದ್ದರು. ಆದರೆ ಬಿಎಂಆರ್‌ಎಲ್ ಅಧಿಕಾರಿಗಳು ಕಾಮಗಾರಿ ಆರಂಭಿಸಲು ಮುಂದಾಗ್ತಿಲ್ಲ. ಕಾಮಗಾರಿ ವಿಳಂಬ ನೂರಾರು ಕೋಟಿ ರೂ. ನಷ್ಟಕ್ಕೆ ಕಾರಣವಾಗ್ತಿದೆ. ಆರೆಂಜ್ ಲೈನ್ ಮೆಟ್ರೋ ಕಾಮಗಾರಿಗೆ ಕೇಂದ್ರ ಸರ್ಕಾರ ಗ್ರೀನ್ ಸಿಗ್ನಲ್ ನೀಡಿ ಒಂದು ವರ್ಷ ಕಳೆದರು ಆರೆಂಜ್ ಲೈನ್ ಮೆಟ್ರೋ ಕಾಮಗಾರಿ ಮಾಡಲು ನಮ್ಮ ಮೆಟ್ರೋ ಟೆಂಡರ್ ಕರೆಯಲು ಮುಂದಾಗಿಲ್ಲ. ಕೇಂದ್ರ ಸರ್ಕಾರ ಅನುಮತಿ ನೀಡಿ 1 ವರ್ಷ 123 ದಿನಗಳು ಕಳೆದಿವೆ. ಮೆಟ್ರೋ ಕಾಮಗಾರಿ ಮಾತ್ರ ಶುರು ಮಾಡಲು ಮುಂದಾಗ್ತಿಲ್ಲ. 1 ದಿನ ಕಾಮಗಾರಿ ಮಾಡಲು ವಿಳಂಬವಾದ್ರೆ ಬಿಎಂಆರ್ ಸಿಎಲ್‌ಗೆ ಸುಮಾರು 2 ಕೋಟಿ ರೂ. ಹೆಚ್ಚುವರಿ ಹೊರೆ ಆಗಲಿದೆ. 487 ದಿನ ವಿಳಂಬವಾಗಿರೋದಕ್ಕೆ 974 ಕೋಟಿ ರೂ. ಹೆಚ್ಚುವರಿ ಹೊರೆ ಆಗಲಿದೆಯಂತೆ. ಆಗಸ್ಟ್ 16. 2024ಕ್ಕೆ ಕೇಂದ್ರ ಸರ್ಕಾರ ಮೂರನೇ ಹಂತ ಆರೆಂಜ್ ಲೈನ್‌ಗೆ ಅನುಮತಿ ನೀಡಿತ್ತು. ಇಲ್ಲಿಯವರೆಗೆ ನಮ್ಮ ಮೆಟ್ರೋ ಅಧಿಕಾರಿಗಳು ಸಿವಿಲ್ ವರ್ಕ್ ಮಾಡಲು ಟೆಂಡರ್ ಕರೆಯಲು ಮುಂದಾಗಿಲ್ಲ. ರಾಜ್ಯ ಸರ್ಕಾರ ಇಡೀ ಮಾರ್ಗವನ್ನು ಡಬ್ಬಲ್ ಡೆಕ್ಕರ್ ಮಾಡಲು ತೀರ್ಮಾನ ಮಾಡಿದೆ. ಪರಿಣಾಮ ಕಾಮಗಾರಿಗೆ ಹೆಚ್ಚುವರಿ 9 ಸಾವಿರ ಕೋಟಿ ರೂ. ಬೇಕಾಗಲಿದೆ. ಇದೇ ಕಾರಣಕ್ಕೆ ಸದ್ಯ ಟೆಂಡರ್ ಪ್ರಕ್ರಿಯೆ ವಿಳಂಬವಾಗ್ತಿದೆ ಎನ್ನಲಾಗಿದೆ.

● ರೈತ ಭಾಂದವರು ಸಮಗ್ರ ಮಾಹಿತಿಯನ್ನು ಪಡೆದುಕೊಂಡು ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸುವಂತೆ ಕರೆ

# ಸಾವಯವ ಕೃಷಿ ಪದ್ಧತಿಯಿಂದ ಹೆಚ್ಚು ಇಳುವರಿ: ಶಾಸಕ ಕಟಕದೊಂಡ

• ಉದಯವಾಹಿನಿ ವಿಜಯಪುರ

ಕೃಷಿಯಲ್ಲಿ ನವೋದ್ಯಮವನ್ನು ಎಂಬ ಘೋಷವಾಕ್ಯದೊಂದಿಗೆ ರೈತರನ್ನು ಪ್ರೋತ್ಸಾಹಿಸಲು ಈ ಭಾಗದ ಹೆಚ್ಚಿನ ರೈತ ಫಲಾನುಭವಿಗಳು ತಮ್ಮ ಚಿಂತನೆಗಳನ್ನು ಆವಿಷ್ಕಾರವಾಗಿ ಪರಿವರ್ತಿನೆ ಕಂಡುಕೊಳ್ಳಲು ಆಧುನಿಕ ಕೃಷಿ ತಂತ್ರಜ್ಞಾನಗಳ ಮಾಹಿತಿ ರೈತರಿಗೆ ಈ ಕೃಷಿ ಮೇಳದಲ್ಲಿ ಪರಿಚಯಿಸಲಾಗುತ್ತಿದೆ. ರೈತರು ಈ ಕೃಷಿ ಮೇಳದ ಸದುಪಯೋಗ ಪಡೆದುಕೊಂಡು ತಮ್ಮ ಕೃಷಿಯೊಂದಿಗೆ ಸಾವಯವ ಪದ್ಧತಿ ಅಳವಡಿಸಿಕೊಳ್ಳಬೇಕೆಂದು ಎಂದು ನಾಗಠಾಣ ಶಾಸಕ ವಿಠ್ಠಲ ಕಟಕದೋಂಡ ಹೇಳೀದರು.

ಕೃಷಿ ಮೇಳ 2025-26

ಕೃಷಿ ವಿಶ್ವವಿದ್ಯಾಲಯ ಧಾರವಾಡ, ಕೃಷಿ ಇಲಾಖೆ, ಜಿಲ್ಲಾ ಪಂಚಾಯತ್, ಆತ್ಮಾಯೋಜನೆ ಇವುಗಳ ಸಂಯುಕ್ತ ಆಶ್ರಯದಲ್ಲಿ, ನಗರದ(ಹಿಟ್ನಳ್ಳಿ ಫಾರ್ಮ)ಪ್ರಾದೇಶಿಕ ಸಂಶೋಧನಾ ಕೇಂದ್ರದಲ್ಲಿ 3 ದಿನಗಳ ಕಾಲ ನಡೆಯುವ ಕೃಷಿ ಮೇಳ 2025-26 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸುವ ರೈತರು ವಿವಿಧ ಬೆಳೆಗಳು ಮತ್ತು ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳುಳ್ಳ ಪ್ರಾಯೋಗಿಕ ತಾಕುಗಳ ವೀಕ್ಷಣೆ, ವಿಚಾರ ಗೋಷ್ಠಿ, ಪೌಷ್ಟಿಕತೆ ಮತ್ತು ಆರ್ಥಿಕ ಭದ್ರತೆಗಾಗಿ ಸಾವಯವ ಮತ್ತು ನೈಸರ್ಗಿಕ ಕೃಷಿ, ಕೃಷಿ ಉದ್ದಿಮೆ ಅಭಿವೃದ್ಧಿ ಮತ್ತು ಮಾರುಕಟ್ಟೆ ಹಾಗೂ ಸುಸ್ಥಿರ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನಗಳು ಎಂಬ ವಿಷಯಗಳ ಮೇಲೆ ಈ ಕೃಷಿ ಮೇಳದಲ್ಲಿ ಚರ್ಚಾ ಗೋಷ್ಠಿ ರೈತರೊಂದಿಗೆ ವಿಚಾರ ವಿನಿಮಯ ಜರುಗಲಿವೆ ಅದರೊಂದಿಗೆ ಒಣ ಬೇಸಾಯ ತಂತ್ರಜ್ಞಾನ, ಹಿಂಗಾರಿ ಜೋಳದ ತಳಿ ಅಭಿವೃದ್ಧಿ, ಮಳೆ ನೀರು ಕೊಯ್ಲು, ಜೈವಿಕ ಗೊಬ್ಬರಗಳ ಉತ್ಪಾದನೆ ಹಾಗೂ ಬಳಕೆ, ಕಡಲೆ ಮತ್ತು ತೋಗರಿಯ ತಳಿಗಳು. ಎರೆಹುಳು ತಂತ್ರಜ್ಞಾನ, ಸಾವಯವ ಕೃಷಿ, ಕೃಷಿ ಸ್ಟಾರ್ಟಅಪ್, ನೈಸರ್ಗಿಕ ಕೃಷಿ, ಪಶು ಸಂಗೋಪನೆ, ಕೃಷಿ ಹವಾಮಾನ ಮಾಹಿತಿ, ಕೃಷಿ ಯಾಂತ್ರಿಕತೆ, ಬೀಜೋತ್ಪಾದನೆ, ಬೀಜ ಸಂಸ್ಕರಣೆ, ಕೃಷಿ ಮಾರುಕಟ್ಟೆ/ ಗೃಹ ವಿಜ್ಞಾನ ಮಾಹಿತಿ, ಬೃಹತ್ ಜಲಾನಯನ ಅಭಿವೃದ್ಧಿ ಪ್ರಾತ್ಯಕ್ಷಿಕೆ. ಮಣ್ಣು ಮತ್ತು ನೀರು ಸಂರಕ್ಷಣಾ ಕ್ರಮಗಳ ಕುರಿತು ಒಂದೇ ಸೂರಿನಡಿಯಲ್ಲಿ ಲಭ್ಯವಿದ್ದು ರೈತ ಭಾಂದವರು ಸಮಗ್ರ ಮಾಹಿತಿಯನ್ನು ಪಡೆದುಕೊಂಡು ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸುವಂತೆ ಅವರು ಕರೆ ನೀಡಿದರು.

ದೇವಹಿಪ್ಪರಗಿ ಮತಕ್ಷೇತ್ರದ ಶಾಸಕ ಭೀಮನಗೌಡ (ರಾಜುಗೌಡ) ಬಸನಗೌಡ ಪಾಟೀಲ್ ಕೃಷಿ ಮೇಳದಲ್ಲಿ ಸ್ಥಾಪಿಸಲಾಗಿರುವ ಮಳಿಗೆಗಳನ್ನು ವೀಕ್ಷಿಸಿ ಮಾತನಾಡಿ, ರೈತರಿಗೆ ಉಪಯುಕ್ತವಾದ ಮಳಿಗೆಗಳನ್ನು ಸ್ಥಾಪಿಸಲಾಗಿದ್ದು ಕೃಷಿಯಲ್ಲಿ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಬಳಸಿಕೊಂಡು ರೈತರು ಅಭಿವೃದ್ಧಿ ಹೊಂದುವಂತೆ ಅವರು ಕರೆ ನೀಡಿದರು.

ಧಾರವಾಡದ ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಮಾತನಾಡಿ, ಕೃಷಿ ಇಲಾಖೆಯಿಂದ ಪ್ರಕಟಗೊಂಡ ಕೃಷಿ ಪ್ರಕಟಣೆಗಳನ್ನು ಬಿಡುಗಡೆಗೊಳಿಸಿ, 3 ದಿನಗಳ ಕಾಲ ನಡೆಯುವ ಈ ಕೃಷಿ ಮೇಳದಲ್ಲಿ ರೈತರಿಗಾಗಿ ಅಭಿವೃದ್ಧಿ ಪಡಿಸಿದ ಅತ್ಯಾಧುನಿಕ ಕೃಷಿ ಪರಿಕರಗಳ ಪ್ರದರ್ಶನ ಹಾಗೂ ಮಾರಾಟ ಮಳಿಗಗಳು ಇದ್ದು ರೈತರು ಈ ಕೃಷಿ


ಉದಯವಾಹಿನಿ ಚಿತ್ರ

ಮೇಳದ ಸದುಪಯೋಗ ಪಡೆದುಕೊಳ್ಳುವಂತೆ ಅವರು ಹೇಳಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಮಾತನಾಡಿ, ರೈತರು ಇಂದು ಕೃಷಿ ಕ್ಷೇತ್ರದ ಅಭಿವೃದ್ಧಿ ಹಾಗೂ ಸಮಗ್ರ ಬದಲಾವಣೆಯತ್ತ ಸಾಗಿ ಕೃಷಿಯಲ್ಲಿ ಹೊಸತನ ತರುವ ಚಿಂತನೆ ಹೊಂದಬೇಕು ಹಾಗೂ ನೂತನ ತಂತ್ರಜ್ಞಾ ಅಳವಡಿಸಿಕೊಂಡು ಕೃಷಿ ಪ್ರಗತಿ ಹೊಂದಬೇಕು ಎಂದು ಅವರು ಹೆಳಿದರು.

ಕೃಷಿಕ ಸಮಾಜದ ಜಿಲ್ಲಾಧ್ಯಕ್ಷರಾದ ಶಿವಾನಗೌಡ ಎಸ್. ಬಿರಾದಾರ ಮಾತನಾಡಿದ ಕೃಷಿ ಮೇಳವು ರೈತರ ಹಬ್ಬವಾಗಿದೆ ಇಂದಿನ ಆಹಾರ ಪದ್ಧತಿ ಹೇಗಿರಬೇಕು, ಯಾವ ಋತುವಿನಲ್ಲಿ ಯಾವ ಬೆಳೆಗಳನ್ನು ಬೆಳೆಯಬೇಕು ಎಂಬ ಕುರಿತು ಕೃಷಿ ಮಹಾವಿದ್ಯಾಲಯಗಳು ಹಾಗೂ ಕೃಷಿ ವಿಜ್ಞಾನಿಗಳು ರೈತರಿಗೆ ನಿರಂತರವಾಗಿ ಮಾರ್ಗದರ್ಶನ, ಅನೇಕ ಸಂಶೋಧನೆಗಳು, ತರಬೇತಿಗಳು ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಹಿಂದಿನ ಕಾಲದ ಬಿತ್ತನೆ ವಿಧಾನಗಳು ಮತ್ತು ಇಂದಿನ ಆಧುನಿಕ ಬಿತ್ತನೆ ಕ್ರಮಗಳಲ್ಲಿ ಅಪಾರ ಬದಲಾವಣೆಗಳು ಕಂಡುಬರುತ್ತಿವೆ.

ಹೊಸ ತಂತ್ರಜ್ಞಾನ, ಸುಧಾರಿತ ಬೀಜ, ನೀರಾವರಿ ವ್ಯವಸ್ಥೆ ಹಾಗೂ ಸಮಗ್ರ ಕೃಷಿ ಪದ್ಧತಿಗಳಿಂದ ರೈತರ ಆದಾಯವನ್ನು ದ್ವಿಗುಣಗೊಳಿಸಲು ಸಾಧ್ಯವಾಗಿದೆ ರೈತರು ತಮ್ಮ ಬಳಿ ಇರುವ ಜಮೀನನ್ನು ಮಾರದೆ, ಮಣ್ಣಿನ ಆರೋಗ್ಯ ಕಾಪಾಡುವ ದಿಸೆಯಲ್ಲಿ ಕಾರ್ಯನಿರ್ವಹಿಸಿ ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳಬೇಕು ಎಂದು ಅವರು ರೈತರಲ್ಲಿ ಮನವಿ ಮಾಡಿದರು.

**ರೈತರಿಗೆ ಸನ್ಮಾನ**

**ರೈತ ಪಂಡಿತ ಗೌರವ ಪಡೆದ ಬತಗುಣಕಿ ರೈತರಾದ ಮುದ್ದುಗೌಡ ಪಾಟೀಲ್ ಮಾತನಾಡಿ, ಇಂದಿನ ರೈತರು ರಾಸಾಯನಿಕ ಕೃಷಿಯಿಂದ ದೂರ ಸರಿದು ನೈಸರ್ಗಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ನೈಸರ್ಗಿಕ ಹಾಗೂ ಸಾವಯವ ಕೃಷಿಯಿಂದ ಪರಿಸರ ಹಾನಿ ಕಡಿಮೆಯಾಗುತ್ತದೆ, ಮಣ್ಣಿನ ಫಲವತ್ತತೆ ಕಾಪಾಡಬಹುದು ಮತ್ತು ಮುಂದಿನ ಪೀಳಿಗೆಗೆ ಆರೋಗ್ಯಕರ ಆಹಾರ ವ್ಯವಸ್ಥೆ ನೀಡಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.**

**ಈ ವರ್ಷದ ಕೃಷಿ ಮೇಳದ ಅಗ್ರಿಬ್ಯುಸಿನೆಸ್ ಇನ್ಕ್ಯೂಬಟರ್ 2019ರಲ್ಲಿ ಪ್ರಾರಂಭಿಸಲಾಗಿದ್ದು, ಕೃಷಿ ನವೋದ್ಯಮಕ್ಕೆ ಪ್ರೋತ್ಸಾಹಿಸಲು ಅನುಕೂಲವಾಗಿದೆ. ಈಗಾಗಲೇ 3 ನವೋದ್ಯಮಗಳು ಕಾರ್ಯ ನಿರ್ವಹಿಸುತ್ತಿದ್ದು, ದ್ರಾಕ್ಷಿಯಲ್ಲಿ ರೋಬೋಟ್ ಚಾಲಿತ ಸಿಂಪರಣೆ, ಸೌರ ವಿದ್ಯುತ್ ಚಾಲಿತ ಕುಡಿ ಚೂಟುವ, ಸಿಂಪರಣೆ ಹಾಗೂ ಕಳೆ ತೆಗೆಯುವ ಯಂತ್ರಗಳ ತಯಾರಿಕೆ, ಬೆಂಚ್ ಗ್ರಾಫ್ಟಿಂಗ್ ತಂತ್ರಜ್ಞಾನ ಅಳವಡಿಕೆ ಮಾಹಿತಿ ನೀಡಲಾಗುತ್ತಿದೆ. ಕೃಷಿ ಮೇಳದಲ್ಲಿ ಒಟ್ಟು 200 ಮಳಿಗೆಗಳನ್ನು ಹಾಕಲಾಗಿದ್ದು ಅದರಲ್ಲಿ 10 ಯಂತ್ರೋಪಕರಣ,10 ಊಟದ ಮಳಿಗೆ, ರೈತರ ಕಬ್ಬಿನ ವಿವಿಧ ಉತ್ಪನ್ನಗಳ ಕುರಿತ ಕಬ್ಬಿನ ಅಂಕಣ, ಶಿರಿಧಾನ್ಯ ಮಳಿಗೆ, ಕೃಷಿ ಕೌಶಲ್ಯ ಆಧಾರಿತ ಮಳಿಗೆ ಹಾಗೂ ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ ರೈತರು ಈ ಮೇಳದ ಲಾಭವನ್ನು ಪಡೆದುಕೊಳ್ಳಬೇಕು -ಡಾ. ಪಿ.ಎಲ್ ಪಾಟೀಲ್, ಧಾರವಾಡ ಕೃಷಿ ವಿಶ್ವವಿದ್ಯಾಲಯ ಕುಲಪತಿ**

## ಉತ್ತಮ ಬದುಕು ಕಟ್ಟಿಕೊಳ್ಳಲು ಶಿಕ್ಷಣ ಅವಶ್ಯಕ

• ಉದಯವಾಹಿನಿ,ಚಿಂಚೋಳಿ

ಉತ್ತಮ ಬದುಕು ಕಟ್ಟಿಕೊಳ್ಳಲು ಹಾಗೂ ಸಮಾಜದಲ್ಲಿ ಗೌರವ ಸಿಗಲು ಶಿಕ್ಷಣ ಅತ್ಯವಶ್ಯಕವಾಗಿದೆ, ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ದಿ.ಆರ್.ಎಂ.ನಾಟೀಕಾರ ಮೃದು ಸ್ವಾಭಾವವುಳ್ಳರಾಗಿ ಬಡ ಮಕ್ಕಳಿಗೆ ಶಿಕ್ಷಣ ನೀಡಲು ಶಿಕ್ಷಣ ಸಂಸ್ಥೆ ಸ್ಥಾಪಿಸಿದ್ದಾರೆ ಎಂದು ಕರ್ನಾಟಕ ಸರ್ಕಾರದ ಜವಾಹರ ಬಾಲಭವನ ಸೂಸೈಟಿ ರಾಜ್ಯ ಉಪಾಧ್ಯಕ್ಷ ಅನೀಲ ಜಮಾದಾರ ಹೇಳಿದರು.

ತಾಲ್ಲೂಕಿನ ಕಲ್ಲೂರ ರೋಡ್ ಗ್ರಾಮದ ವೀರಭದ್ರೇಶ್ವರ ಕನ್ನಡ ಪ್ರಾಥಮಿಕ ಶಾಲೆ ಮತ್ತು ಆರ್.ಎಂ.ಎನ್ ಆರ್.ಫ್ರೌಢಶಾಲೆಯ 34ನೇ ಶಾಲಾ ವಾರ್ಷಿಕೋತ್ಸವ ಮತ್ತು ಸಂಸ್ಥಾಪಕರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಶಿಕ್ಷಣ ಸಂಸ್ಥೆಯಲ್ಲಿ ಕಳೆದ ಮೂರು ದಶಕಗಳಿಂದ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಅನೇಕ ದೊಡ್ಡ ದೊಡ್ಡ ಹುದ್ದೆಗಳನ್ನು ಡಾಕ್ಟರ್,ಇಂಜಿನಿಯರಿಂಗ್,ಶಿಕ್ಷಕರ ಹುದ್ದೆಗಳು ಪಡೆದುಕೊಂಡಿದ್ದಾರೆ,ಇವೆಲ್ಲವೂ ನೋಡಿದರೆ ಸಂಸ್ಥೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡುವುದರ ಮೂಲಕ ಉತ್ತಮ ಸಂಸ್ಕೃತಿ ಸಂಸ್ಕಾರದ ಶಿಕ್ಷಣ ಶಿಕ್ಷಕರು ನೀಡಿದ್ದಾರೆ ಎಂದರು. ನಿವೃತ್ತ ಜಿಲ್ಲಾ ವೈದ್ಯಾಧಿಕಾರಿ ಡಾ.ಮಲ್ಲಿಕಾರ್ಜುನ ಮುಕ್ಕಾ ಮಾತನಾಡಿ ಶಿಕ್ಷಕರು ಮಕ್ಕಳಿಗೆ ಉತ್ತಮ ಶಿಕ್ಷಣದ ಜೋತೆ ಮಾನವೀಯ ಮೌಲ್ಯಗಳು ಕಲಿಸಬೇಕು, ಮಹಾಪುರುಷರ ಜೀವನ ಚರಿತ್ರೆ ಹಾಗೂ ಋಷಿ ಮುನಿಗಳ ಬಗ್ಗೆ ಹಾಗೂ ಧಾರ್ಮಿಕವಾಗಿಯೂ ಮಕಳ್ಳಿಗೆ ಕಲಿಸಬೇಕು.


ಉದಯವಾಹಿನಿ ಚಿತ್ರ

**ಭೂಮಿಗೆ ಬಿದ್ದ ಜೀಜ ಎದೆಗೆ ಬಿದ್ದ ಅಕ್ಷರ ಎಂದೂ ಹೂಸಿಯಾಗದು,ಜಗತ್ತಿನಲ್ಲಿ ಎಲ್ಲರೂ ಶಿಕ್ಷಣದ ಕಡೆ ಹೆಚ್ಚಿನ ಗಮನಹರಿಸಿ ಹಾಗೂ ಕಲಾಲೋಕ,ಕವಿಗಳಿಗೂ ಮಾನ್ಯತೆ ನೀಡಿ,ಮೌಲ್ಯ ಆಧಾರಿತ ಶಿಕ್ಷಣ ಕೂಡ ನೀಡಬೇಕು. -ಶಿವಶರಣಪ್ಪ ಕೋಬಾಳ**

ಆರೋಗ್ಯ ಇಲಾಖೆ ಸೂಚಿಸುವ ಎಲ್ಲಾ ಲಸಿಕೆಗಳು ಚಾಚುತಪ್ಪದೆ ಎಲ್ಲರೂ ಪಡೆದುಕೊಳ್ಳಬೇಕು,ಹಿಂದಿನ ಕಾಲದಲ್ಲಿ ಯಾರು ಲಸಿಕೆಗಳು ಪಡೆದುಕೊಳ್ಳಲು ಹಿಂದೆಟ್ಟು ಹಾಕುತ್ತಿದರೂ,ಮಕ್ಕಳಿಗೆ ಓದುವ ಹವ್ಯಾಸ ಬೆಳೆಸಬೇಕು,ಪಾಲಕರು ಸಹ ಮಕ್ಕಳು ವಿದ್ಯಾಭ್ಯಾಸ ಮಾಡುವುದು ಗಮನಿಸಬೇಕು ಎಂದರು. ಬಿಇಓ ವಿ.ಲಕ್ಷ್ಮಯ್ಯ, ಅಕ್ಷರ ದಾಸೋಹ ಅಧಿಕಾರಿ ಜಯಪ್ಪ ಚಾಪಲ್, ಹಳೆ ವಿದ್ಯಾರ್ಥಿಗಳಾದ ಐಶ್ವರ್ಯ, ಅರವಿಂದ, ಶಶಿಕುಮಾರ, ಓಂಪ್ರಕಾಶ, ಮಾತನಾಡಿದರು. ಮುಖ್ಯಗುರು ಗಣಪತ ದೇವಕತ್ತೆ ಸ್ವಾಗತಿಸಿದರು, ಶಿಕ್ಷಕ ಭೀಮರಾವ ಪೂಜಾರಿ ನಿರೂಪಿಸಿದರು,ಮುಖ್ಯಗುರು ಸಿದ್ದಪ್ಪ ಬಿರಾದಾರ ವಂದಿಸಿದರು. ಈ ಸಂದರ್ಭದಲ್ಲಿ ಮಿರಿಯಾಣ ಗ್ರಾಪಂ.ಅಧ್ಯಕ್ಷೆ ಪಲ್ಲವಿ ಜಯಶಂಕರ, ವೀರಾರೆಡ್ಡಿ ಪಾಟೀಲ, ಸುಧಾಕರರಾವ ಪಾಟೀಲ,ಅನೀಲ ಕಂಟ್ಲಿ, ನರಸಿಂಹಮ್ಲು ಪೂಜಾರಿ, ವೆಂಕಟೇಶ,ರವೀಂದ್ರ ನಾಟೀಕಾರ, ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶಂಕರರಾವ ನಾಟೀಕಾರ, ಜಗನ್ನಾಥ ಇದಲಾಯಿ, ಈಶಪ್ಪಾ ಇದಲಾಯಿ, ಚಂದ್ರು ಜೋನ್ನಲ್, ಜಗನ್ನಾಥ ಸಜ್ಜನಶೇಟ್ಟಿ, ಚಂದ್ರಶೇಖರ ಕಾಕೇರ್, ಮೋಹನ್,ಜಗನ್ನಾಥ ಬೆಡಕಪಳ್ಳಿ, ಶಿಕ್ಷಕ ಗುಲುಮೂರ್ತಿ, ಮೀನಾಕ್ಷಿ,ಲಕ್ಷ್ಮಿ,ವಿದ್ಯಾ ಸಹಚಿ, ಸಂತೋಷಕುಮಾರ, ಜೈಶೀಲಾ,ನಾಗವೇಣಿ,ನೀಲಮ್ಮ, ವೆಂಕಟರಾವ ರಾಠೋಡ, ಶೀವಲೀಲಾ, ಪ್ರೀಯಾಂಕಾ, ಸೇರಿದಂತೆ ಅನೇಕ ಮುದ್ದು ಮಕ್ಕಳು ಪಾಲಕರು ಇದ್ದರು. ಕಾರ್ಯಕ್ರಮದಲ್ಲಿ ಹಳೆ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಹುದ್ದೆ ಪಡೆದ 5ಜನ ವೈದ್ಯಕೀಯ ಕ್ಷೇತ್ರದ ಐಶ್ವರ್ಯ, ರಕ್ಷೀತಾ,ಅರವೀಂದ,ಶಶಿಕುಮಾರ, ವಿಜಯಲಕ್ಷ್ಮಿ ಹಾಗೂ ಇಂಜಿನಿಯರಿಂಗ್ ಪಡೆದ 26 ವಿದ್ಯಾರ್ಥಿಗಳಿಗೂ ಸನ್ಮಾನಿಸಿ ಗೌರವಿಸಿದರು.

## ಕರಾವಳಿ ಜನರ ಸ್ವಾಭಿಮಾನ ಕೆಣಕಿದ ಕಾಂಗ್ರೇಸ್‌ಗೆ ಈ ಫಲಿತಾಂಶ ತಕ್ಕ ಉತ್ತರ: ಸಂಸದ ಕ್ಯಾ. ಚೌಟ

• ಉದಯವಾಹಿನಿ ಮಂಗಳೂರು

ಕಿನ್ನಿಗೋಳಿ ಹಾಗೂ ಬಜಪೆ ಪಟ್ಟಣ ಪಂಚಾಯತ್ ಚುನಾವಣೆ ಗೆಲುವು ಕರಾವಳಿ ಜನರ ಸ್ವಾಭಿಮಾನ ಕೆಣಕಿರುವ ಕಾಂಗ್ರೇಸ್‌ಗೆ ತಕ್ಕ ಉತ್ತರವಾಗಿದ್ದು, ಆ ಮೂಲಕ ಬಿಜೆಪಿಯ ಈ ವಿಜಯಯಾತ್ರೆಯು ಇದೀಗ ಕಟೀಲು ಶ್ರೀ ದುರ್ಗಾ ಪರಮೇಶ್ವರಿ ಕ್ಷೇತ್ರದಿಂದಲೇ ಆರಂಭವಾಗಿದೆ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದ್ದಾರೆ.

ಕಿನ್ನಿಗೋಳಿ ಹಾಗೂ ಬಜಪೆ ಪಟ್ಟಣ ಪಂಚಾಯತ್ ಚುನಾಣೆಯಲ್ಲಿ ಬಿಜೆಪಿಯು ಐತಿಹಾಸಿಕ ಗೆಲುವು ಸಾಧಿಸಿದ ಹಿನ್ನಲೆಯಲ್ಲಿ ಇಂದು ಕ್ಷೇತ್ರ ವ್ಯಾಪ್ತಿಯಲ್ಲಿ ನಡೆದ ವಿಜಯೋತ್ಸವ ಹಾಗೂ ಗೆಲುವು ಸಾಧಿಸಿದ ಅಭ್ಯರ್ಥಿಗಳ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಜಪೆ ಹಾಗೂ ಕಿನ್ನಿಗೋಳಿ ಪ.ಪಂಚಾಯತ್‌ನಲ್ಲಿನ ಬಿಜೆಪಿ ಅಭ್ಯರ್ಥಿಗಳ ಈ ಗೆಲುವು ಅತ್ಯಂತ ವಿಶಿಷ್ಟವಾದ ಗೆಲುವು. ಬಜಪೆ ಅಥವಾ ಕಿನ್ನಿಗೋಳಿಗೆ ಸೀಮಿತವಾದ ಗೆಲುವು ಇದಲ್ಲ ಬದಲಿಗೆ ಇಡೀ ಕರಾವಳಿ ಕರ್ನಾಟಕದ ಬಿಜೆಪಿ ಕಾರ್ಯಕರ್ತರು ಹಾಗೂ ಮತದಾರರ ಸ್ವಾಭಿಮಾನದ ಗೆಲುವು. ಏಕೆಂದರೆ, ಈ ಕಾಂಗ್ರೇಸ್ ಸರ್ಕಾರವು ಕಳೆದ ಎರಡೂವರೆ ವರ್ಷದಿಂದ ನಮ್ಮ ಕರಾವಳಿ ಜನರನ್ನು ದ್ವೇಷ-ತಾತ್ಸಾರ ಭಾವದಿಂದ ನೋಡುತ್ತ ಬೆಂಕಿ ಹಚ್ಚುವವರು ಎಂದು ದೂಷಿಸುತ್ತಿದ್ದಾರೆ. ಅಂಥಹ


ಉದಯವಾಹಿನಿ ಚಿತ್ರ

ಹಣೆಪಟ್ಟಿ ಕಟ್ಟಲು ಹೊರಟಿರುವ ಕಾಂಗ್ರೇಸ್‌ನವರಿಗೆ ಈ ಭಾಗದ ಹಿಂದೂ, ಬಿಜೆಪಿ ಕಾರ್ಯಕರ್ತರು ತಕ್ಕ ಉತ್ತರ ಕೊಟ್ಟಿದ್ದಾರೆ. ಕರಾವಳಿ ಜನರು ಹಿಂದುತ್ವ, ರಾಷ್ಟ್ರೀಯತೆ ಪರ ಇರುವವರು. ಜಿಲ್ಲೆಯ ಜನರ ಸ್ವಾಭಿಮಾನ ಕೆಣಕಿಸುವುದಕ್ಕೆ ಅಥವಾ ಅವಮಾನಿಸುವ ಯತ್ನ ಮಾಡಿದರೆ ಮುಂದೆ ಯಾವುದೇ ಚುನಾವಣೆ ಬಂದರೂ ಕರಾವಳಿ ಮಾತ್ರವಲ್ಲ ರಾಜ್ಯದಲ್ಲೇ ಇದೇ ರೀತಿಯ ಉತ್ತರವನ್ನು ಮತದಾರರು ನೀಡುತ್ತಾರೆ ಎಂದು ಕ್ಯಾ. ಚೌಟ ಸವಾಲು ಹಾಕಿದ್ದಾರೆ.

ರಾಜ್ಯದಲ್ಲಿ ಯಾವಾಗ ಚುನಾವಣೆ ಬರಬಹುದು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ ಹಾಗೂ ಅದನ್ನು ಎದುರಿಸುವುದಕ್ಕೆ ನಮ್ಮ ಕಾರ್ಯಕರ್ತರು ಸಿದ್ಧರಾಗಿರಬೇಕು.

ಈ ಸ್ಥಳೀಯ ಚುನಾವಣೆ ಗೆಲುವು ಮುಂದಿನ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವುದಕ್ಕೆ ಮತದಾರರು ನಮ್ಮ ಮೇಲೆ ವಿಶ್ವಾಸ ಇಟ್ಟಿದ್ದಾರೆ ಎನ್ನುವುದರ ಸೂಚನೆ.ಎಂದು ಕ್ಯಾ. ಚೌಟ ಹೇಳಿದ್ದಾರೆ.

## ಜಿಲ್ಲೆಯಾದ್ಯಂತ ರಸ್ತೆ ಸುರಕ್ಷಾ ಸಪ್ತಾಹ

• ಉದಯವಾಹಿನಿ, ಮಂಗಳೂರು

ಎಲ್ಲಾ ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ರಸ್ತೆ ಸುರಕ್ಷತಾ ಅರಿವು ಮಾಸಾಚಾರಣೆ ಕಾರ್ಯಕ್ರಮವನ್ನು ಜನವರಿ 1 ರಿಂದ 31 ರವರೆಗೆ ಹಮ್ಮಿಕೊಳ್ಳಲಾಗಿದ್ದು, ಜನರು ಮಾರಕ ಖಾಯಿಲೆ ಕ್ಯಾನ್ಸರ್‌ನಿಂದ ಮೃತಪಡುವ ಪ್ರಮಾಣಕ್ಕಿಂತಲೂ ಹೆಚ್ಚಾಗಿ ಸಂಚಾರಿ ನಿಯಮಗಳನ್ನು ಪಾಲಿಸದೇ ಅಪಘಾತಗಳಿಂದ ಮೃತಪಡುತ್ತಿದ್ದಾರೆ. ಆದ್ದರಿಂದ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದಂತೆ ಎಲ್ಲಾ ನಗರ, ಸ್ಥಳೀಯಾಡಳಿತ ಮತ್ತು ಗ್ರಾಮಾಂತರ ಆಡಳಿತ ವ್ಯಾಪ್ತಿಯಲ್ಲಿ ಜನವರಿ ಮಾಸವನ್ನು ರಸ್ತೆ ಸುರಕ್ಷತಾ ಮಾಸವನ್ನಾಗಿ ಆಚರಿಸಿ ಎಲ್ಲಾ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಸಂಚಾರಿ ನಿಯಮಗಳನ್ನು ಪಾಲಿಸುವಂತೆ ಪ್ರೇರೇಪಿಸುವ ಕೆಲಸವನ್ನು ಜಿಲ್ಲಾಡಳಿತದ ಸಹಕಾರ ಪಡೆದು ಮಾಡಲಾಗುವುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಸವರಾಜ್ ತಿಳಿಸಿದ್ದಾರೆ. ದ್ವಿಚಕ್ರ


ಉದಯವಾಹಿನಿ ಚಿತ್ರ

ವಾಹನ ಸವಾರರು ಹೆಲ್ಮೆಟ್ ಹಾಗೂ ಲಘು ವಾಹನಗಳ ಚಾಲಕರು ಸೀಟ್ ಬೆಲ್ಟ್ ಧರಿಸಿ ಪ್ರಯಾಣ ಮಾಡಿದರೆ ಶೇ.90ರಷ್ಟು ಅಪಘಾತಗಳನ್ನು ತಡೆಗಟ್ಟಬಹುದು ಎಂದು ಅಂಕಿ ಅಂಶಗಳು ಸಾಬೀತು ಪಡಿಸಿವೆ. ಅದೇ ರೀತಿ ಅಪ್ರಾಪ್ತ ವಯಸ್ಕರಿಗೆ ವಾಹನ ಚಾಲನೇ ಮಾಡದಂತೆ ಪೋಷಕರು ಮತ್ತು ಶಿಕ್ಷಕ ವರ್ಗದವರು ಅರಿವು ಮೂಡಿಸಬೇಕು.

ಈ ಮಾಹಿತಿಯನ್ನು ಮತ್ತು ಅರಿವನ್ನು ಜಿಲ್ಲೆಯ ಪ್ರತಿಯೊಬ್ಬ ಸಾರ್ವಜನಿಕರಿಗೂ ತಿಳಿಸುವ ನಿಟ್ಟಿನಲ್ಲಿ ರಸ್ತೆ ಸುರಕ್ಷತಾ ಮಾಸವನ್ನು ಆಚರಣೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ಸವದಿ ಅವರನ್ನ ತೇಜೋವಧೆ ಮಾಡುವ ಷಡ್ಯಂತ್ರ ಕಾರ್ಯ: ರಾಹುಲ್

• ಉದಯವಾಹಿನಿ ಜಮಖಂಡಿ

ಕಳೆದ ಎರಡು ದಿನಗಳಿಂದ ಅಥನಿ ಮತ ಕ್ಷೇತ್ರದಲ್ಲಿ ಮಾಜಿ ಡಿಸಿಎಂ ಹಾಗೂ ಅಥನಿ ಶಾಸಕ ಲಕ್ಷ್ಮಣ ಸವದಿ ಅವರನ್ನ ತೇಜೋವಧೆ ಮಾಡುವ ಕಾರ್ಯ ನಡೆಯುತ್ತಾದೆ ಎಂದು ಅರ್ಬನ್ ಬ್ಯಾಂಕಿನ ಅಧ್ಯಕ್ಷ ರಾಹುಲ್ ಕಲೂತಿ ಸುದ್ದಿ ಗೋಷ್ಠಿಯಲ್ಲಿ ಹೇಳಿದರು.

ಲಕ್ಷ್ಮಣ ಸವದಿ ಅವರು ಪಕ್ಷಾತಿತ ಹಾಗೂ ಜಾತ್ಯಾತೀತವಾಗಿ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದವರು ಕೆಲವು ದಿನಗಳ ಹಿಂದೆ ಡಿಸಿಸಿ ಬ್ಯಾಂಕಿನ ಸಿಬ್ಬಂದ್ದಿ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ಆರೋಪಗಳನ್ನು ಮಾಡಿ ಅವರನ್ನ ತೇಜೋವಧೆ ಮಾಡುವ ಕೆಲಸ ನಡೆದಿದೆ. ಸವದಿ ಅವರು ಚುನಾವಣೆಗಳಲ್ಲಿ ಸತತವಾಗಿ ಗೆಲವು ಹಾಗೂ ಅವರ ಏಳಿಗೆ ಎನ್ನು ಸಹಿಸಿಕೊಳ್ಳದೆ ಅವರ ಮೇಲೆ ಹಲ್ಲೆ ಆರೋಪಗಳನ್ನು ಮಾಡಿ ಅವರನ್ನು ಕುಗ್ಗಿಸುವ ಹುನ್ನಾರ ನಡೆದಿದೆ. ಅವರನ್ನು ರಾಜಕೀಯವಾಗಿ ಹಿನ್ನಡೆ ಮಾಡಬೇಕೆಂದು


ಉದಯವಾಹಿನಿ ಚಿತ್ರ

**ಸವದಿ ಅವರು ರಾಜ್ಯ ಕಂಡ ಹಾಗೂ ಬಹಳಷ್ಟು ಕಷ್ಟ ಪಟ್ಟು ರಾಜಕಿಯದಲ್ಲಿ ಬೆಳೆದಿರುವ ನಾಯಕ ಹೇಗಾದರೂ ಮಾಡಿ ಅವರನ್ನ ರಾಜಕೀಯದಿಂದ ಮುಗಿಸುಬೇಕೆಂದು ಷಡ್ಯಂತ್ರ ಮಾಡುತ್ತಿದ್ದರೆ ಅದು ಇನ್ನೂ ನಡಿಯುದಿಲ್ಲ ಅವರ ಜೊತೆಗೆ ಸಾವಿರಾರು ಅಭೀಮಾನಿಗಳು ಹಾಗೂ ಕಾರ್ಯಕರ್ತರು ಇದ್ದಾರೆ ಅವರು ಭಯೆಪಡುವ ಅವಶ್ಯಕತೆ ಇಲ್ಲ ಸವದಿ ಅವರು ಕೇವಲ ಅಥಣಿಯ ನಾಯಕರಲ್ಲ ಇಡಿ ರಾಜ್ಯದ ನಾಯಕರು ಬರುವಂತಹ ದಿನಮಾನಗಳಲ್ಲಿ ಷಡ್ಯಂತ್ರ ಮಾಡುವವರಿಗೆ ಕಾರ್ಯಕರ್ತರು ಹಾಗೂ ರಾಜ್ಯದ ಜನರು ತಕ್ಕ ಉತ್ತರ ನೀಡುತ್ತಾರೆ ಮತ್ತು ಆದಷ್ಟು ಬೇಗ ಈ ಷಡ್ಯಂತ್ರ ಹಿಂದೆ ಯಾರಿದ್ದಾರೆ ಯಾವರೀತಿ ಷಡ್ಯಂತ್ರ ಮಾಡಿದ್ದಾರೆ ಎಂದು ಸತ್ಯಾಸತ್ಯತೆ ಎಲ್ಲರಿಗೂ ತಿಳಿಯುತ್ತದೆ. -ರಾಹುಲ್ ಕಲೂತಿ**

ಷೇಢ್ಯಂತ್ರ ನಡೆಯುತ್ತಾಯಿದೆ ಅದನ್ನು ನಾವು ಖಂಡಿಸುತ್ತೆವೆ. ಇದೆ ರೀತಿ ಮುಂದುವರೆದರೆ ನಾವುಗಳುಕೂಡಸವದಿ ಅವರನ್ನು ಬೆಂಬಲಿಸಿ ಪ್ರತಿಭಟನೆ ಮಾಡ ಬೇಕಾಗುತ್ತದೆ ಎಂದರು.

## ಏತ ನೀರಾವರಿ ಯೋಜನೆಗೆ ಅನುದಾನ: ಹರ್ಷ

• ಉದಯವಾಹಿನಿ, ಶ್ರವಣಬೆಳಗೊಳ

ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಹತ್ತಾರು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ದಿಡಗ ಏತ ನೀರಾವರಿ ಯೋಜನೆಗೆ ರಾಜ್ಯ ಕಾಂಗ್ರೇಸ್ ಸರ್ಕಾರ ರೂ.74 ಕೋಟಿ ಅನುದಾನ ಬಿಡುಗಡೆ ಮಾಡುವ ಮೂಲಕ ರೈತಾಪಿ ವರ್ಗದವರ ದೊಡ್ಡ ಕನಸು ನನಸಾಗಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಹೇಳಿದರು. ಹೋಬಳಿಯ ಬೆಕ್ಕ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಚೇನಹಳ್ಳಿಯಲ್ಲಿ ಆಯೋಜಿಸಿದ್ದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮತ್ತು ಕಾಂಗ್ರೇಸ್ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು. ದಿಡಗ ಮತ್ತು ನುಗ್ಗೇಹಳ್ಳಿ ವ್ಯಾಪ್ತಿಯ ರೈತರ ನಿಯೋಗದೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಖುದ್ದು ಭೇಟಿ ಮಾಡಿ ಮನವಿ ಸಲ್ಲಿಸಿ ಆಗ್ರಹಿಸಿದ್ದರಿಂದಾಗಿ ನೀರಾವರಿ ಯೋಜನೆಗೆ ಸ್ಪಂದಿಸಿ, ಹಣ ಬಿಡುಗಡೆ ಮಾಡಿ ಹಾಸನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಾಲನೆ ನೀಡಿದ್ದಾರೆ ಎಂದು ಶ್ಲಾಘಿಸಿದರು. ಈ ಬೃಹತ್ ನೀರಾವರಿ ಯೋಜನೆಯಿಂದಾಗಿ ಈ ಭಾಗದ ಎಲ್ಲಾ ಕೆರೆ ಕಟ್ಟೆಗಳಿಗೆ ನೀರು ತುಂಬಿಸಲು ಶಾಶ್ವತ ಅನುಕೂಲವಾಗಲಿದ್ದು, ಅಂತರ್ಜಲವೂ ಹೆಚ್ಚಾಗಿ ತೆಂಗಿನ ತೋಟಗಳಿಗೆ, ಜಾನುವಾರಿಗೆ ಕುಡಿಯುವ ನೀರಿಗೂ ಪರಿಹಾರವಾಗುತ್ತದೆ ಎಂದರು.ಸಭೆಯಲ್ಲಿ ಬೆಕ್ಕ, ಸುಂಡಹಳ್ಳಿ, ಜುಟ್ಟನಹಳ್ಳಿ ದಮ್ಮನಿಂಗಲ, ಕಾಂತರಾಜಪುರ ಕಬ್ಬಾಳು, ಶ್ರವಣಬೆಳಗೊಳ ಪಂಚಾಯಿತಿಯ ಅನೇಕ ಮುಖಂಡರು ಸಮಸ್ಯೆಗಳ ಬಗ್ಗೆ ಗಮನಕ್ಕೆ ತಂದು ಚರ್ಚಿಸಿದರು. ಮುಖಂಡ ಅಣತಿ ಆನಂದ್ ಮಾತನಾಡಿ, ಗ್ಯಾರಂಟಿ ಯೋಜನೆ ಅನುಷ್ಠಾನದಿಂದ ಪ್ರತಿಯೊಂದೂ ಸಮುದಾಯ ವರ್ಗದವರಿಗೆ ಹೆಚ್ಚಿನ ಅನುಕೂಲವಾಗಿದೆ' ಎಂದರು.

## ಹಾವೇರಿಯಲ್ಲಿ ಕಬ್ಬಿನ ಬಿಲ್ ಪಾವತಿಯಾಗದೆ ರೈತರ ಪರದಾಟ

● ಲಕ್ಷಾಂತರ ಟನ್ ಕಬ್ಬು ಸರಬರಾಜಾದ್ರೂ, ಹಣ ಪಾವತಿಸದೆ ಕಾರ್ಖಾನೆಗಳ ನಿರ್ಲಕ್ಷ್ಯವೇಕೆ?

• ಉದಯವಾಹಿನಿ, ಹಾವೇರಿ

ಜಿಲ್ಲೆಯಲ್ಲಿರುವ ಕಬ್ಬು ಬೆಳೆಗಾರರು ಕಬ್ಬು ನುರಿಸುವ ಸಕ್ಕರೆ ಕಾರ್ಖಾನೆಗಳಿಗೆ ಲಕ್ಷಾಂತರ ಟನ್‌ಗಳಷ್ಟು ಕಬ್ಬು ಸಾಗಣೆ ಮಾಡಿದ್ದಾರೆ. ಆದರೆ ಕಬ್ಬು ಸಾಗಣೆ ಮಾಡಿ ಎರಡು ತಿಂಗಳು ಗತಿಸಿದರೂ ಇದುವರೆಗೂ ಕಬ್ಬಿನ ಬಿಲ್ ಪಾವತಿಯಾಗಿಲ್ಲ. ಈ ಹಿನ್ನೆಲೆ ಜಿಲ್ಲೆಯಲ್ಲಿರುವ ಬಹುತೇಕ ಕಬ್ಬು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಪ್ರಸ್ತುತ ಹಂಗಾಮಿನಲ್ಲಿ ಜಿಲ್ಲಾದ್ಯಂತ ಅಕ್ಟೋಬರ್ ಎರಡನೇ ವಾರದಿಂದಲೇ ಕಬ್ಬು ಕಟಾವು , ಸಾಗಣೆ ನಡೆಸಲಾಗಿದೆ. ಪ್ರತಿ ಟನ್ ಕಬ್ಬಿಗೆ 3,500 ರೂ. ದರ ನಿಗದಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಳೆದ ನವೆಂಬರ್‌ನಲ್ಲಿ ಅಹೋರಾತ್ರಿ ಧರಣಿ ನಡೆಸಿ ಸರಕಾರದ ಗಮನ ಸೆಳೆಯಲಾಗಿತ್ತು. ಈ ನಡುವೆ, ರೈತರು ಹಾಗೂ ಸರಕಾರದ ನಡುವೆ ಮಾತುಕತೆಯಾಗಿ ರೈತರು ಒಪ್ಪಂದಕ್ಕೆ ಬದ್ಧರಾಗಿ ಕಬ್ಬು ಕಟಾವು ಮಾಡಿ ಸರಬರಾಜು ಮಾಡಿದ್ದರು.

ಹಾವೇರಿ ಜಿಲ್ಲೆಯನ್ನೊಳಗೊಂಡಂತೆ ಪಕ್ಕದ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಣೆ ಮಾಡಿದ್ದರು. ಅಂದಾಜು ಸುಮಾರು 15 ಲಕ್ಷ ಟನ್‌ಗೂ ಹೆಚ್ಚು ಸರಬರಾಜು ಮಾಡಲಾಗಿತ್ತು. ಕಬ್ಬು ಸರಬರಾಜು ಮಾಡಿ 15 ದಿನಗಳೊಳಗಾಗಿ ಬಿಲ್ ಪಾವತಿಸಬೇಕೆಂಬ ನಿಯಮವಿದ್ದರೂ ಯಾವ ಕಾರ್ಖಾನೆಗಳು ಪಾಲಿಸುತ್ತಿಲ್ಲ. ಆದರೀಗ ಕಬ್ಬು ಸಾಗಣೆ ಮಾಡಿ ಎರಡು ತಿಂಗಳು ಕಳೆಯುತ್ತಾ ಬಂದರೂ ಸಕ್ಕರೆ ಕಾರ್ಖಾನೆ ಮಾಲೀಕರು ಮಾತ್ರ ರೈತರಿಗೆ ಹಣ ನೀಡುತ್ತಿಲ್ಲ. ಇದರಿಂದ ಕಬ್ಬು ಬೆಳೆಗಾರ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದಂತಾಗಿದೆ.


ಉದಯವಾಹಿನಿ ಚಿತ್ರ

- ಹಾವೇರಿ ಜಿಲ್ಲೆಯಲ್ಲಿ ಕಾರ್ಖನೆಗಳಿಗೆ ಕಬ್ಬು ಪೂರೈಕೆಯಾದರೂ ರೈತರ ಕೈಗೆ ಸಿಗುತ್ತಿಲ್ಲ ಬಿಡಿಗಾಸು
- ಲಕ್ಷಾತಂರ ಟನ್ ಕಬ್ಬು ಸರಬರಾಜು ಮಾಡಿದರೂ ಚಿಂತೆಯಲ್ಲೇ ಕಳೆಯುತ್ತಿದ್ದಾರೆ ಕಬ್ಬು ಬೆಳೆಗಾರರು
- ಕಬ್ಬು ಸರಬರಾಜು ಮಾಡಿ 1ದಿನದೊಳಗೆ ಬಿಲ್ ಪಾವತಿಸಬೇಕೆಂಬ ನಿಯಮಿದ್ದರೂ ಕಾರ್ಖಾನೆಗಳಿಂದ ದಿವ್ಯ ನಿರ್ಲಕ್ಷ್ಯವೇಕೆ?

**ಸಾಲಗಾರರದ್ದೇ ಚಿಂತೆ:** ಕಬ್ಬು ಕಟಾವು ಮಾಡುವ ಹಂಗಾಮಿನಲ್ಲಿ ಲಕ್ಷಾಂತರ ರೂ. ಸಾಲ ಮಾಡಿ ಕೂಲಿ ಕಾರ್ಮಿಕರಿಗೆ ಸಂಬಳ ನೀಡಲಾಗಿದೆ. ಆದರೆ ಕಬ್ಬಿನ ಹಣ ಪಾವತಿಯಾಗಿಲ್ಲ. ಇತ್ತ ಸಾಲ ನೀಡಿದವರು ಮನೆ ಬಾಗಿಲಿಗೆ ಬಂದು ಒತ್ತಡ ಹಾಕುತ್ತಿದ್ದು, ಬೆಳೆಗಾರರನ್ನು ಇಕ್ಕಟ್ಟಿಗೆ ಸಿಲುಕಿಸಿದಂತಿದೆ.

ಇನ್ನೊಂದೆಡೆ ಬನದ ಹುಣ್ಣಿಮೆ ಬಳಿಕ ಜಿಲ್ಲೆಯ ಬಹುತೇಕ ಗ್ರಾಮೀಣ ಪ್ರದೇಶದಲ್ಲಿ ಜಾತ್ರಾ ಮಹೋತ್ಸವ, ಉತ್ಸವ ಬರುತ್ತವೆ. ಕೈಯಲ್ಲಿ ದುಡ್ಡೆ ಇಲ್ಲದಾಗಿದ್ದು, ರೈತರನ್ನು ಚಿಂತೆಗೀಡಾಗುವಂತೆ ಮಾಡಿದೆ.

**ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಣೆ ಮಾಡಿ ಎರಡು ತಿಂಗಳು ಕಳೆದರೂ ಈವರೆಗೂ ಬಿಲ್ ಪಾವತಿಯಾಗಿಲ್ಲ. ಕಬ್ಬು ಸರಬರಾಜು ಮಾಡಿ 15 ದಿನದೊಳಗಾಗಿ ಬಿಲ್ ನೀಡಬೇಕು. ನ.10ರಂದು ಸ್ವಲ್ಪ ಹಣ ಪಾವತಿ ಮಾಡಿದ್ದು ಬಿಟ್ಟರೆ ಈವರೆಗೂ ಕೊಟ್ಟಿಲ್ಲ. ಶನಿವಾರವಷ್ಟೇ ದಾವಣಗೆರೆಗೆ ತೆರಳಿ ಶುಗರ್ಸ್ ಕಾರ್ಖಾನೆ ಮಾಲೀಕರ ಜತೆ ಚರ್ಚಿಸಿದ್ದೇವೆ. ಜ.5ರಂದು ಹಾಕಿಸುವುದಾಗಿ ಭರವಸೆ ನೀಡಿದ್ದಾರೆ.**
**-ಭುವನೇಶ್ವರ ಶಿಡ್ಲಾಪುರ, ಜಿಲ್ಲಾಧ್ಯಕ್ಷ, ಕಬ್ಬು ಬೆಳೆಗಾರರ ಸಂಘ**

**ಲಕ್ಷಾಂತರ ಟನ್ ಕಬ್ಬು ಪೂರೈಕೆ**

**ಜಿಲ್ಲೆಯ ಹಾವೇರಿ ತಾಲ್ಲೂಕು ಸಂಗೂರು, ರಟ್ಟೀಹಳ್ಳಿ ತಾಲ್ಲೂಕು ಬೈರನಪಾದ, ಶಿಗ್ಗಾವಿ ತಾಲ್ಲೂಕು ಕೋಣನಕೆರಿಯ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಲಾಗಿದೆ. ಇದರ ನಡುವೆ ಪಕ್ಕದ ದಾವಣಗೆರೆ ಜಿಲ್ಲೆಯ ಕುಕ್ಕವಾಡ, ದುಗ್ಗತ್ತಿ, ವಿಜಯನಗರ ಜಿಲ್ಲೆಯ ಶುಗರ್ಸ್ ಕಾರ್ಖಾನೆಗಳಿಗೆ ಸುಮಾರು 15 ಲಕ್ಷ ಟನ್ ಕಬ್ಬು ಸರಬರಾಜಾಗಿದೆ. ಆದರೆ ಈವರೆಗೂ ಯಾವ ರೈತರಿಗೆ ಕಬ್ಬಿನ ಬಿಲ್ ಬಂದಿಲ್ಲ ಎಂದು ಕಬ್ಬು ಬೆಳೆಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.**

## ಮಿನಿ ನ್ಯೂಸ್

### ಫೆಬ್ರವರಿಯಲ್ಲಿ 75 ವರ್ಷ ತುಂಬಿದ ನಿವೃತ್ತರ ಸನ್ಮಾನ ಸಭೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಬಸವನಬಾಗೇವಾಡಿ

ತಾಲ್ಲೂಕ ನಿವೃತ್ತ ನೌಕರರ ಸಂಘದ ಸಭೆಯು ಸೋಮವಾರ ಪಟ್ಟಣದಲ್ಲಿ ಜರುಗಿತು. ಆಗಲಿದ ಸಂಘದ ಸದಸ್ಯರಾದ ಎಮ್.ಸಿ ಕಟ್ಟಿ ಎಸ್.ಜಿ ಕುಲಕರ್ಣಿ ಎಂ.ಬಿ .ಬ್ಯಾಕೋಡ. ಶ್ರೀ ಕೈನೂರ ಅವರ ಆತ್ಮಕ್ಕೆ ಶಾಂತಿ ಕೋರಿ ಮೌನ ಆಚರಿಸಲಾಯಿತು. ಫೆಬ್ರವರಿ ತಿಂಗಳಲ್ಲಿ 75 ವರ್ಷ ತುಂಬಿದ ಸಂಘದ ಸದಸ್ಯರನ್ನು ಸನ್ಮಾನಿಸುವ ಸಮಾರಂಭವನ್ನು ಏರ್ಪಡಿಸಲು ತೀರ್ಮಾನಿಸಲಾಯಿತು. ಕೆನರಾ ಬ್ಯಾಂಕ್ ವ್ಯವಸ್ಥಾಪಕ ರಾಜೇಶ ಹಾಗೂ ಶ್ರೀ ಬಸವೇಶ್ವರ ಅರ್ಬನ್ ಬ್ಯಾಂಕ್ ವ್ಯವಸ್ಥಾಪಕ ಸಿ. ಎಸ್ ತಳ್ಳೊಳ್ಳಿ ಸಭೆಗೆ ಆಗಮಿಸಿ, ಬ್ಯಾಂಕಿನ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಪಿಂಚಣಿದಾರರ ಸಮಸ್ಯೆಗಳನ್ನು ನಿವಾರಿಸಲು ಪ್ರಯತ್ನಿಸುತ್ತೇನೆ ಎಂದು ಹೇಳಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಫ್ ಡಿ ಮೇಟಿ ವಹಿಸಿದ್ದರು. ಸುರೇಶ ಪಾಟೀಲ, ಸಿದ್ದರಾಮ ಬಿರಾದಾರ, ಆರ್ .ಜಿ ಆಳ್ಳಗಿ, ಹಾಗೂ ಎಸ್ ಜೆ ಹೆಗಡ್ಯಾಳ ಮಾತನಾಡಿದರು. ಕಾರ್ಯದರ್ಶಿ ಎಸ್ ಕೆ ಸೋಮನಕಟ್ಟಿ ಸೇರಿದಂತೆ ಅನೇಕ ಸದಸ್ಯರು ಭಾಗವಹಿಸಿದ್ದರು.

### ಸರ್ಕಾರಿ ಆಸ್ಪತ್ರೆಗಳಲ್ಲಿ ಶಿಸ್ತು ಪಾಲನೆಗೆ ಒತ್ತಾಯ: ಸಿದ್ದು ಸುಲ್ತಾನಪೂರ ಮನವಿ

• ಉದಯವಾಹಿನಿ ಕರಜಗಿ

ಅಫಜಲಪೂರ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ವೈದ್ಯಕೀಯ ಸಿಬ್ಬಂದಿಗಳು ಕರ್ತವ್ಯ ಸಮಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಜೊತೆಗೆ ಸಮವಸ್ತ್ರ ಹಾಗೂ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸಿ ಸೇವೆ ಸಲ್ಲಿಸಬೇಕು ಎಂದು ಕರುನಾಡ ವಿಜಯಸೇನೆ ತಾಲ್ಲೂಕು ಅಧ್ಯಕ್ಷ ಸಿದ್ದು ಸುಲ್ತಾನಪೂರ ಅವರು ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಆರೋಗ್ಯಾಧಿಕಾರಿಗಳನ್ನು ಭೇಟಿ ಮಾಡಿ ಮಾತನಾಡಿದ ಅವರು, ಕೆಲ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳ ಸಮಯ ಪಾಲನೆ ಕೊರತೆಯಿಂದ ಸಾರ್ವಜನಿಕರಿಗೆ ಅನಗತ್ಯ ತೊಂದರೆ ಎದುರಾಗುತ್ತಿದೆ ಎಂದು ದೂರಿದರು. ಸಮವಸ್ತ್ರ ಹಾಗೂ ಗುರುತಿನ ಚೀಟಿಯಿಲ್ಲದೇ ಕರ್ತವ್ಯ ನಿರ್ವಹಿಸುವುದರಿಂದ ಯಾರು ಸಿಬ್ಬಂದಿ, ಯಾರು ಸಾರ್ವಜನಿಕರು ಎಂಬ ಗೊಂದಲ ಉಂಟಾಗಿ ರೋಗಿಗಳಿಗೆ ಸೇವೆ ಪಡೆಯುವುದು ಕಷ್ಟವಾಗುತ್ತಿದೆ ಎಂದು ಹೇಳಿದರು.

ಸರ್ಕಾರಿ ಸಂಬಳ ಪಡೆಯುವ ಸಿಬ್ಬಂದಿಗಳು ನಿಯಮಗಳನ್ನು ಪಾಲಿಸದೇ ನಿರ್ಲಕ್ಷ್ಯ ವಹಿಸುವುದು ಸರಿಯಲ್ಲ. ಕೆಲ ಆಸ್ಪತ್ರೆಗಳಲ್ಲಿ ಮನಸೋ ಇಚ್ಛೆಯಂತೆ ಕಾರ್ಯನಿರ್ವಹಿಸುವ ಪ್ರವೃತ್ತಿ ಕಂಡುಬರುತ್ತಿದ್ದು, ಇದರಿಂದ ರೋಗಿಗಳು ಮತ್ತು ಅವರ ಕುಟುಂಬಗಳು ಸಮಸ್ಯೆ ಎದುರಿಸಬೇಕಾಗಿದೆ ಎಂದು ಅವರು ಹೇಳಿದರು.

### ತ್ಯಾಜ್ಯಕ್ಕೆ ಬೆಂಕಿ: ಪರಿಸರಕ್ಕೆ ಹಾನಿ

• ಉದಯವಾಹಿನಿ ಬಾಗಲಕೋಟೆ

ನವನಗರದ ವಿವಿಧ ಸೆಕ್ಟರ್‌ಗಳಲ್ಲಿ ರಸ್ತೆ ಬದಿಯ ಸಣ್ಣ ಗಿಡಗಳನ್ನು ಕತ್ತರಿಸಿ. ಎಲೆಗಳನ್ನು ಒಂದೆಡೆ ಸೇರಿಸಿ ಹೊರಗಡೆ ಸಾಗಿಸಬೇಕಿದ್ದ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಸ್ವಚ್ಛತಾ ಸಿಬ್ಬಂದಿಯೇ ಬೆಂಕಿ ಹಚ್ಚಿ ಪರಿಸರವನ್ನು ಕಲುಷಿತಗೊಳಿಸುತ್ತಿದ್ದಾರೆ.

ಹಸಿರಿನಿಂದ ಕಂಗೊಳಿಸುತ್ತಿರುವ ಬಾಗಲಕೋಟೆ ಶುದ್ಧವಾದ ಗಾಳಿಯನ್ನು ಹೊಂದಿದೆ. ಇತ್ತೀಚೆಗೆ ಸೆಂಟರ್ ಫಾರ್ ಕ್ಲಿನ್ ಏರ್ ಎಂಬ ಸಂಸ್ಥೆ ಸಿದ್ಧಪಡಿಸಿದ ವರದಿಯಲ್ಲಿ ದೇಶದಲ್ಲಿಯೇ ಬಾಗಲಕೋಟೆಗೆ 10ನೇ ಸ್ಥಾನ ಲಭಿಸಿತ್ತು. ನಿತ್ಯ ವಿವಿಧ ರಸ್ತೆಗಳಲ್ಲಿ ತ್ಯಾಜ್ಯಕ್ಕೆ ಬೆಂಕಿ ಹಚ್ಚುತ್ತಿರುವುದರಿಂದ ಪರಿಸರ ಹಾಳಾಗುತ್ತಿದೆ. ಹತ್ತಾರು ವರ್ಷಗಳ ಹಿಂದೆ ನೆಟ್ಟ ಬೇವು, ಅಲ, ಕಣಗಲೆ ಸೇರಿದಂತೆ ವಿವಿಧ ಗಿಡಗಳನ್ನು ದೊಡ್ಡದಾಗಿ ಬೆಳೆದು ನಿಂತಿವೆ. ನಿತ್ಯ ಅವುಗಳಿಂದ ಎಲೆಗಳು ಉದುರಿ ಬೀಳುತ್ತವೆ. ಜೊತೆಗೆ ರಸ್ತೆ ಹಾಗೂ ಗಟಾರ ಮಧ್ಯದಲ್ಲಿಯೂ ಸಣ್ಣ, ಸಣ್ಣದಾಗಿ ಗಿಡಗಳು ಬೆಳೆದಿರುತ್ತವೆ. ಅವುಗಳನ್ನು ಕತ್ತರಿಸಿ ಎಲೆಗಳನ್ನು ಒಂದೆಡೆ ಗೂಡಿಸುವ ಕೆಲಸವನ್ನು ಬಿಟಿಡಿಎ ಸ್ವಚ್ಛತಾ ಸಿಬ್ಬಂದಿ ಮಾಡುತ್ತಾರೆ. ರಸ್ತೆಯಲ್ಲಿ ಸಾಕಷ್ಟು ಎಲೆಗಳು ಬಿದ್ದಿದ್ದರೂ, ಬದಿಯಲ್ಲಿ ಸಣ್ಣದಾಗಿ ಗಿಡಗಳು ಬೆಳೆದಿದ್ದರೂ, ಹತ್ತಾರು ದಿನಕ್ಕೊಮ್ಮೆ ಸ್ವಚ್ಛತೆ ಮಾಡಲಾಗುತ್ತದೆ. ಹದಿನೈದು ಇಪ್ಪತ್ತು ಅಡಿಗೊಂದು ಗುಂಪು ಹಾಕಲಾಗುತ್ತದೆ. ನಂತರ ಸಾಲಾಗಿ ಬೆಂಕಿ ಹಚ್ಚಿಕೊಂಡು ಬರುವ ಕೆಲಸ ನಿತ್ಯವೂ ನಡೆಯುತ್ತಿದೆ. ಇದರಿಂದಾಗಿ ಗಂಟೆಗಟ್ಟಲೇ ದಟ್ಟವಾದ ಹೊಗೆ ಆವರಿಸಿರುತ್ತದೆ. ಬೆಳಿಗ್ಗೆ ಶುದ್ಧವಾದ ಗಾಳಿ ಇರುತ್ತದೆ ಎಂದು ಹಲವರು ವಾಕಿಂಗ್ ಬರುತ್ತಾರೆ. ಇವರು ಹೊತ್ತಿಸಿದ ಬೆಂಕಿಯಿಂದಾಗಿ ಹೊಗೆ ಕುಡಿದುಕೊಂಡು ಹೋಗಬೇಕಾದ ಸ್ಥಿತಿ ಇದೆ. ಶಾಲೆಗೆ ಹೋಗುವ ಮಕ್ಕಳ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಕೆಲವೊಮ್ಮೆ ಅದರಲ್ಲಿ ಪ್ಲಾಸ್ಟಿಕ್ ತ್ಯಾಜ್ಯವೂ ಸೇರಿರುವುದರಿಂದ ಪ'ರಿಸರದ ಮೇಲೆ ತೀವ್ರ ಪರಿಣಾಮವಾಗುತ್ತದೆ.

### ಯುವಕರು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿ: ಸುನಿಲ್

• ಉದಯವಾಹಿನಿ ಹೆಬ್ರಿ

ಯುವಕರು ನಿಸ್ವಾರ್ಥವಾಗಿ ಸಮಾಜಮುಖಿ ಸೇವೆಗಳನ್ನು ಮಾಡಿದಾಗ ಸದೃಢ ಸಮಾಜ ನಿರ್ಮಾಣವಾಗುತ್ತದೆ. ಯುವ ಮನಸ್ಸುಗಳು ಒಂದಾದಾಗ ಸಮಾಜದಲ್ಲಿ ಪರಿವರ್ತನೆ ಸಾಧ್ಯ. ಆರೋಗ್ಯ ಸೇವೆಯ ಜೊತೆ ಜನಸೇವೆಗೆ ಜನನಿ ಫ್ರೆಂಡ್ಸ್ ಕುಕ್ಕುದಕಟ್ಟೆ ಮಾದರಿಯಾಗಿದೆ ಎಂದು ಶಾಸಕ ಸುನಿಲ್ ಕುಮಾರ್ ಶ್ಲಾಘಿಸಿದರು.

ಅವರು ಪಡುಕುಡೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜನನಿ ಫ್ರೆಂಡ್ಸ್ ಕುಕ್ಕುದಕಟ್ಟೆ ವತಿಯಿಂದ ಮಣಿಪಾಲ ಕೆಎಂಸಿ ಆಸ್ಪತ್ರೆಯ ತಜ್ಞ ವೈದ್ಯರಿಂದ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದರು. ಮುನಿಯಾಲು ಉದಯ ಕೃಷ್ಣಯ್ಯ ಶೆಟ್ಟಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಉದಯ ಕುಮಾರ್ ಶೆಟ್ಟಿ ಮಾತನಾಡಿ, ಗ್ರಾಮೀಣ ಪ್ರದೇಶದ ಜನರಿಗೆ ಜನನಿ ಫ್ರೆಂಡ್ಸ್ ನಡೆಸಿದ ಆರೋಗ್ಯ ತಪಾಸಣಾ ಕಾರ್ಯ ಮಹತ್ವದ್ದು. ನಾವು ಇಂದು ಒತ್ತಡ ಮುಕ್ತವಾಗಿ ಆರೋಗ್ಯಯುತವಾಗಿ ಸಾರ್ಥಕ ಜೀವನ ನಡೆಸಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಜನನಿ ಫ್ರೆಂಡ್ಸ್ ಕುಕ್ಕುದಕಟ್ಟೆ ಅಧ್ಯಕ್ಷ ಚೇತನ್ ಕುಮಾರ್ ಮಾತನಾಡಿವರು, ಸಂಸ್ಥೆಯ ಬೆಳವಣಿಗೆಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ಆರೋಗ್ಯ ಸೇವೆ, ಆರ್ಥಿಕ ನೆರವು, ಶಾಲೆ ಮತ್ತು ಶ್ರದ್ಧಾ ಕೇಂದ್ರಗಳ ಪರಿಸರ ಸ್ವಚ್ಛತೆ, ಮಾನವ ಸಂಪತ್ತಿನ ಅಭಿವೃದ್ಧಿ, ಮಾವಿನಕಟ್ಟೆಯ ಹೆಸರನ್ನು ಉಳಿಸಿ ಬೆಳೆಸಲು ಮಾವಿನ ಗಿಡ ನೆಡುವ ಯೋಜನೆ ಸಹಿತ ಮುಂದಿನ ವರ್ಷದ ಹಲವು ಸಮಾಜಮುಖಿ ಯೋಜನೆಗಳನ್ನು ಪ್ರಕಟಿಸಿದರು.

# 'ಜನ ನಾಯಗನ್' ತಂಡದಿಂದ ಇದೆಂಥಾ ತಪ್ಪು



ಟ್ರೋಲಿಗರಿಗೆ ಆಹಾರವಾದ ನಿರ್ದೇಶಕ

ದಳಪತಿ ವಿಜಯ್ ಅವರ ಕೊನೆಯ ಚಿತ್ರ 'ಜನ ನಾಯಗನ್' ಟ್ರೇಲರ್ ಬಿಡುಗಡೆಯ ನಂತರ ದೊಡ್ಡ ವಿವಾದಕ್ಕೊಳಗಾಗಿದೆ. ಇದು ತೆಲುಗಿನ 'ಭಗವಂತ ಕೇಸರಿ' ರಿಮೇಕ್ ಎಂಬ ಆರೋಪಕ್ಕೆ ಸ್ಪಷ್ಟನೆ ಸಿಕ್ಕಂತೆ ಆಗಿದೆ. ಟ್ರೇಲರ್‌ನಲ್ಲಿ ಎಐ ತಂತ್ರಜ್ಞಾನದ ಶಾಟ್ ಬಳಕೆ ಆಗಿದೆ. ಇದು ಪ್ರೇಕ್ಷಕರನ್ನು ಕೆರಳಿಸಿದೆ. ದಳಪತಿ ವಿಜಯ್ ವೃತ್ತಿ ಜೀವನದ ಕೊನೆಯ ಸಿನಿಮಾ ಆಗಿ 'ಜನ ನಾಯಗನ್' ಮೂಡಿ ಬರುತ್ತಿದೆ. ಈ ಸಿನಿಮಾ ಬಗ್ಗೆ ಅಭಿಮಾನಿಗಳಿಗೆ ಸಾಕಷ್ಟು ನಿರೀಕ್ಷೆ ಇದೆ. ಆದರೆ, ಯಾವಾಗ ಚಿತ್ರದ ಟ್ರೇಲರ್ ಬಿಡುಗಡೆ ಆಯಿತೋ ಅಲ್ಲಿಂದ ಸಿನಿಮಾಗೆ ಹಿನ್ನಡೆ ಉಂಟಾಗುತ್ತಿದೆ. ತೆಲುಗಿನ 'ಭಗವಂತ ಕೇಸರಿ' ಚಿತ್ರದ ರಿಮೇಕ್ ಇದು ಎಂಬುದು ಟ್ರೇಲರ್ ನೋಡಿದವರಿಗೆ ಸ್ಪಷ್ಟವಾಗಿದೆ. ಇದರ ಜೊತೆಗೆ ಎಐ ಚಿತ್ರ ಟ್ರೇಲರ್‌ನಲ್ಲಿ ಬಳಕೆ ಮಾಡಲಾಗಿದೆ.

ಇದಕ್ಕೆ ಅನೇಕರು ಕೋಪ ಹೊರಹಾಕಿದ್ದಾರೆ. 'ಜನ ನಾಯಗನ್' ಇದು ದಳಪತಿ ವಿಜಯ್ ವೃತ್ತಿ ಜೀವನದ ಅತಿ ದೊಡ್ಡ ಸಿನಿಮಾ. ಇದು ಅವರ ಕೊನೆಯ ಚಿತ್ರ ಕೂಡ ಹೌದು. ಹೀಗಾಗಿ, ಸಹಜವಾಗಿಯೇ ನಿರೀಕ್ಷೆ ಇದೆ. ಸಿನಿಮಾಗೆ ಹೈಪ್ ಸಿಗಬೇಕು ಎಂದರೆ ಚಿತ್ರದ ಟ್ರೇಲರ್ ಬಿಡುಗಡೆ ಆಗಬೇಕು. ಆದರೆ, 'ಜನ ನಾಯಗನ್' ವಿಷಯದಲ್ಲಿ ಅದು ಉಲ್ಟಾ ಆಗಿದೆ. ಟ್ರೇಲರ್ ರಿಲೀಸ್ ಬಳಿಕ ಚಿತ್ರಕ್ಕೆ ನೆಗೆಟಿವ್ ಕಮೆಂಟ್ ಹೆಚ್ಚಿದೆ. 'ಜನ ನಾಯಗನ್' ಚಿತ್ರ 'ಭಗವಂತ ಕೇಸರಿ'ಯ ರಿಮೇಕ್ ಎಂದು ಹೇಳಲಾಗುತ್ತಾ ಬರುತ್ತಿತ್ತು. ಆದರೆ, ತಂಡ ಇದನ್ನು ಒಪ್ಪಿಲ್ಲ.



# ಗಡ್ಡಪ್ಪ ಸಾವಿನ ಬೆನ್ನಲ್ಲೇ ಸಿಂಗ್ರಿ ಗೌಡ ನಿಧನ

'ತಿಥಿ' ಸಿನಿಮಾ ಖ್ಯಾತಿಯ ಗಡ್ಡಪ್ಪ ಮತ್ತು ಸೆಂಚುರಿ ಗೌಡ ನಿಧನರಾಗಿದ್ದಾರೆ. 100 ವರ್ಷಕ್ಕೂ ಹೆಚ್ಚು ವಯಸ್ಸಿನವರಾಗಿದ್ದ ಸೆಂಚುರಿ ಗೌಡ ಅನಾರೋಗ್ಯದಿಂದ ಬಳಲುತ್ತಿದ್ದರು. ಗಡ್ಡಪ್ಪ ಅವರ ಸಾವಿನ ಕೇವಲ ಒಂದೂವರೆ ತಿಂಗಳ ನಂತರ ಸೆಂಚುರಿ ಗೌಡ ಅಗಲಿದ್ದಾರೆ.



'ತಿಥಿ' ಸಿನಿಮಾ ಖ್ಯಾತಿ ಗಡ್ಡಪ್ಪ ಪಾತ್ರಧಾರಿ ಚನ್ನೇಗೌಡ ಅವರು 2025ಡಿ ನವೆಂಬರ್ 12ರಂದು ನಿಧನ ಹೊಂದಿದ್ದರು. ಈ ಸಿನಿಮಾದಲ್ಲಿ ಸೆಂಚುರಿ ಗೌಡ ಪಾತ್ರ ಮಾಡಿದ್ದ ಸಿಂಗ್ರಿ ಗೌಡ ಕೂಡ ಈಗ ನಿಧನರಾಗಿದ್ದಾರೆ. ಅವರಿಗೆ ನೂರು ವರ್ಷಕ್ಕೂ ಹೆಚ್ಚು ವಯಸ್ಸಾಗಿತ್ತು. ಅವರು ಹಲವು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಜನವರಿ 4ರ ರಾತ್ರಿ ಅವರು ಕೊನೆಯುಸಿರು ಎಳೆದರು.

ಸೆಂಚುರಿ ಗೌಡರು ಪಾಂಡವಪುರ ತಾಲ್ಲೂಕಿನ ಸಿಂಗ್ರೀಗೌಡನ ಕೊಪ್ಪಲಿನವರು. 'ತಿಥಿ' ಸಿನಿಮಾದಲ್ಲಿ ಅವರು ಮಾಡಿದ ಸೆಂಚುರಿ ಗೌಡ ಪಾತ್ರ ಗಮನ ಸೆಳೆದಿತ್ತು. ಈ ಸಿನಿಮಾ ಕೊಂಚ ಜನಪ್ರಿಯತೆ ನೀಡಿತ್ತು.

ಇದರಿಂದ ಬೇರೆ ಸಿನಿಮಾ ಆಫರ್‌ಗಳು ಬಂದವು. 'ತಿಥಿ' ಸಿನಿಮಾ (2015) ರಿಲೀಸ್ ಆಗಿ ಹಿಟ್ ಆದಾಗ, ಆ ಊರಿಗೆ ಬರುತ್ತಿದ್ದ ಕೆಲವರು ಸಿಂಗ್ರಿಗೌಡ ಅವರನ್ನು ಭೇಟಿ ಆಗಿ, ಫೋಟೋ ತೆಗೆಸಿಕೊಂಡು ಹೋಗುತ್ತಿದ್ದರು. 'ತಿಥಿ' ಸಿನಿಮಾ ನಿರ್ದೇಶಕರು ಸಿಂಗ್ರಿಗೌಡ ಅವರನ್ನು ಆಯ್ಕೆ ಮಾಡಿದ್ದೇ ಒಂದು ಅಚ್ಚರಿಯ ಘಟನೆ. ಸಿಂಗ್ರಿಗೌಡ ಅಣ್ಣ ಸತ್ತು ಹೋಗಿದ್ದರಂತೆ. ಅವರ ತಿಥಿಗೆ 'ತಿಥಿ' ಸಿನಿಮಾ ನಿರ್ದೇಶಕರು ಬಂದಿದ್ದರು. ಈ ವೇಳೆ ಸಿನಿಮಾ ಸೆಂಚುರಿ ಗೌಡ ಇಷ್ಟ ಆಗಿ ಸಿನಿಮಾ ಆಫರ್ ಕೊಟ್ಟರು. ಸಿನಿಮಾದಲ್ಲಿ ಸೆಂಚುರಿ ಗೌಡ ಪಾತ್ರ ಮಾಡಿದ್ದರು. ಈ ಚಿತ್ರಕ್ಕಾಗಿ ಅವರಿಗೆ 20 ಸಾವಿರ ಸಂಭಾವನೆ ಸಿಕ್ಕಿತ್ತು ಎನ್ನಲಾಗಿದೆ. ಅನೇಕ ಚಿತ್ರಗಳಲ್ಲಿ ಸಿಂಗ್ರಿಗೌಡ ನಟಿಸಿದ್ದಾರೆ. ಕೆಲವು ಸಿನಿಮಾ ತಂಡದವರು ಹಣ ಕೊಡದೆ ಅವರಿಗೆ ಮೋಸ ಮಾಡಿದ್ದಾರಂತೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಗಡ್ಡಪ್ಪ ಅವರು ಕಳೆದ ವರ್ಷ ನವೆಂಬರ್ 12ರಂದು ನಿಧನ ಹೊಂದಿದ್ದರು.

# ಅಲ್ಲು ಅರ್ಜುನ್ ಹೊಸ ಥಿಯೇಟರ್‌ನಲ್ಲಿ ಕನ್ನಡ ನಿರ್ದೇಶಕರ ಫೋಟೋ

ಕೋಕಾಪೇಟ್‌ನಲ್ಲಿ ಹೊಸ ಥಿಯೇಟರ್

ಅಲ್ಲು ಅರ್ಜುನ್ ಅವರ 'ಅಲ್ಲು ಸಿನಿಮಾಸ್' ಮಲ್ಟಿಪ್ಲೆಕ್ಸ್ ಕೋಕಾಪೇಟ್‌ನಲ್ಲಿ ಹೊಸ ಶಾಖೆಯನ್ನು ತೆರೆಯಲಿದೆ. ಸಂಕ್ರಾಂತಿಗೆ ಶುಭಾರಂಭ ಮಾಡಲಿರುವ ಈ ಮಲ್ಟಿಪ್ಲೆಕ್ಸ್‌ನಲ್ಲಿ ಕನ್ನಡದ ನಿರ್ದೇಶಕರ ಫೋಟೋಗಳನ್ನು ಅಳವಡಿಸಲಾಗಿದೆ. 75 ಅಡಿ ದೊಡ್ಡ ಪರದೆಯನ್ನು ಹೊಂದಿರುವ ಇದು ಉತ್ತಮ ಸಿನಿಮಾ ಅನುಭವ ನೀಡಲಿದೆ.

ಅಲ್ಲು ಅರ್ಜುನ್ ಅವರು ತಮ್ಮದೇ ಆದ ಮಲ್ಟಿಪ್ಲೆಕ್ಸ್ ಚೈನ್ ಹೊಂದಿದ್ದಾರೆ. 'ಅಲ್ಲು ಸಿನಿಮಾಸ್' ಅನ್ನೋದು ಇದರ ಹೆಸರು. ಹೈದರಾಬಾದ್‌ನಲ್ಲಿ ಇದು ತನ್ನ ಶಾಖೆ ಹೊಂದಿದೆ. ಅಲ್ಲ ಅರ್ಜುನ್ ಈ ಮಲ್ಟಿಪ್ಲೆಕ್ಸ್ ಚೈನ್ ಅನ್ನು ವಿಸ್ತರಿಸುವ ಪ್ರಯತ್ನದಲ್ಲಿ ಇದ್ದಾರೆ. ಈಗ ಅವರು ಹೈದರಾಬಾದ್ ಹೊರವಲಯದಲ್ಲಿರುವ ಕೋಕಾಪೇಟ್‌ನಲ್ಲಿ ಹೊಸ ಥಿಯೇಟರ್ ಕಟ್ಟಿದ್ದಾರೆ. ಸಂಕ್ರಾಂತಿಯಂದು ಇದು ಆರಂಭ ಆಗಲಿದೆ.

ಇದರಲ್ಲಿ ಇಬ್ಬರು ಕನ್ನಡದ ನಿರ್ದೇಶಕರ ಫೋಟೋ ಇದೆ. ಇತ್ತೀಚೆಗೆ ನಿರ್ಮಾಣ ಆಗುತ್ತಿರುವ ಮಲ್ಟಿಪ್ಲೆಕ್ಸ್‌ಗಳನ್ನು ಅಂದಗಾಣಿಸಲು ನಾನಾ ತಂತ್ರ ಬಳಸಲಾಗುತ್ತಿದೆ.

ಐಕಾನಿಕ್ ಸಿನಿಮಾ ಹೆಸರುಗಳನ್ನು ಬರೆಯೋದು, ಸಿನಿಮಾ ಶೂಟಿಂಗ್ ಸಂದರ್ಭದಲ್ಲಿ ತೆಗೆದ ಅಪರೂಪದ ಫೋಟೋಗಳನ್ನು ಫ್ರೇಮ್ ಹಾಕಿಸೋದು ಅಥವಾ ಖ್ಯಾತ ನಿರ್ದೇಶಕರು/ನಟರ ಫೋಟೋಗಳನ್ನು ಹಾಕೋದನ್ನು ಮಾಡಲಾಗುತ್ತದೆ. ಈಗ ಅಲ್ಲು ಅರ್ಜುನ್ ಕೂಡ ಇದನ್ನೇ ಮಾಡಿದ್ದಾರೆ.

ಕೋಕಾಪೇಟ್‌ನಲ್ಲಿ ನಿರ್ಮಾಣ ಆಗಿರುವ 'ಅಲ್ಲು ಸಿನಿಮಾಸ್' ಒಳಭಾಗದ ಗೋಡೆಯ ಮೇಲೆ ಹಲವು ನಿರ್ದೇಶಕರ ಫೋಟೋಗಳಿವೆ. ಇದರಲ್ಲಿ ಕನ್ನಡದ ರಿಷಬ್ ಶೆಟ್ಟಿ ಹಾಗೂ ಪ್ರಶಾಂತ್ ನೀಲ್ ಫೋಟೋ ಕೂಡ ಇದೆ. ತೆಲುಗು ನಿರ್ದೇಶಕರಾದ ರಾಜಮೌಳಿ, ಸುಕುಮಾರ್, ತ್ರಿವಿಕ್ರಂ ಶ್ರೀನಿವಾಸ್ ಫೋಟೋಗಳಿವೆ. ತಮಿಳಿನ ಮಣಿರತ್ನಂ, ವೆಟ್ರಿಮಾರನ್, ಅಟ್ಲೀ ಭಾವಚಿತ್ರ ಹಾಕಲಾಗಿದೆ. ಹಿಂದಿಯ ರಾಜ್‌ಕುಮಾರ್ ಹಿರಾನಿ, ಸಂದೀಪ್ ರೆಡ್ಡಿ ವಂಗ ಸೇರಿದಂತೆ ಇನ್ನೂ ಕೆಲವು ನಿರ್ದೇಶಕರ ಫೋಟೋಗಳು ಇವೆ. ಈ ವಿಡಿಯೋ ವೈರಲ್ ಆಗುತ್ತಿದೆ. ಕನ್ನಡಿಗರಿಂದ ಇದಕ್ಕೆ ಮೆಚ್ಚುಗೆ ಸಿಕ್ಕಿದೆ.

ರಿಷಬ್ ಶೆಟ್ಟಿ ಹಾಗೂ ಪ್ರಶಾಂತ್ ನೀಲ್ ಹೆಸರು ತೆಲುಗು ಮಂದಿಗೂ ತಿಳಿದಿದೆ. ಪ್ರಶಾಂತ್ ನೀಲ್ ಅವರು 'ಕೆಜಿಎಫ್' ಸರಣಿ ಸಿನಿಮಾ ನಿರ್ದೇಶಿಸಿ ಫೇಮಸ್ ಆದವರು. ತೆಲುಗಿನಲ್ಲೂ ಸಿನಿಮಾ ಮಾಡಿದ್ದಾರೆ ಮತ್ತು ಮಾಡುತ್ತಿದ್ದಾರೆ. ರಿಷಬ್ ಅವರು ತೆಲುಗು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಅವರ ನಿರ್ದೇಶನದ 'ಕಾಂತಾರ: ಚಾಪ್ಟರ್ 1' ತೆಲುಗು ರಾಜ್ಯಗಳಲ್ಲಿ ಒಳ್ಳೆಯ ಕಲೆಕ್ಷನ್ ಮಾಡಿದೆ. ಈ ಕಾರಣದಿಂದ ಇವರ ಫೋಟೋಗಳನ್ನು ಹಾಕಿರಬಹುದು ಎನ್ನಲಾಗುತ್ತಿದೆ. ಅಲ್ಲು ಸಿನಿಮಾಸ್ ಸಂಕ್ರಾಂತಿಗೆ ಆರಂಭ ಆಗುವ ಸಾಧ್ಯತೆ ಇದೆ. 75 ಅಡಿಯ ಸ್ಕ್ರೀನ್‌ನ ಇದು ಹೊಂದಿದೆ ಎನ್ನಲಾಗಿದೆ. ಒಳ್ಳೆಯ ಅನುಭವ ಪಡೆಯಲು ಮಲ್ಟಿಪ್ಲೆಕ್ಸ್ ಸಹಕಾರಿ ಆಗಲಿದೆ.



# ಡಾಲಿ ಹೊಸ ಚಿತ್ರಕ್ಕೆ ಪೂರ್ಣ ಹೀರೋ

ಕಥಾಹಂದರದ ಕುರಿತು ಕುತೂಹಲ

ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುವ ಗಾದೆ ಕೇಳಿದ್ದೀರಾ ಅಲ್ವಾ. ಈ ಗಾದೆ ಬಗ್ಗೆ ಯಾಕೀಗ ಅಂತೀರಾ ಹೆಗ್ಗಣ ಮುದ್ದು ಎನ್ನುವ ಹೆಸರಿನಲ್ಲೇ ಈಗ ಸ್ಯಾಂಡಲ್‌ವುಡ್‌ನಲ್ಲಿ ಸಿನಿಮಾ ಬರುತ್ತಿದೆ. ನಟ ರಾಕ್ಷಸ ಡಾಲಿ ಧನಂಜಯ ಅವರ ಡಾಲಿ ಪಿಕ್ಚರ್ಸ್ ನಲ್ಲಿ ಮತ್ತೊಂದು ವಿಭಿನ್ನ ಸಿನಿಮಾ ಮೂಡಿಬರುತ್ತಿದ್ದು ಹೆಗ್ಗಣ ಮುದ್ದು ಎಂದು ಟೈಟಲ್ ಇಡಲಾಗಿದೆ. ಸಖತ್ ವಿಭಿನ್ನವಾಗಿರುವ ಟೈಟಲ್ ಇಟ್ಕೊಂಡು ಹೊಸ ಸಿನಿಮಾ ಮೂಲಕ ಡಾಲಿ ಪಿಕ್ಚರ್ಸ್ ಹೊಸ ವರ್ಷಕ್ಕೆ ಸಿನಿ ಅಭಿಮಾನಿಗಳಿಗೆ ಬರ್ಜರಿ ಸುದ್ದಿ ನೀಡಿದ್ದಾರೆ. ಅಂದಹಾಗೆ ಹೆಗ್ಗಣ್ಣ ಮುದ್ದು ಪೂರ್ಣ ಮೈಸೂರು ನಟನೆಯ ಸಿನಿಮಾ. ಅವಿನಾಶ್ ಬಳೆಕ್ಕಳ ನಿರ್ದೇಶನದ ಮೊದಲ ಸಿನಿಮಾವಾಗಿದೆ. ಪೂರ್ಣಗೆ ಜೋಡಿಯಾಗಿ ನಟ ಹಾಗೂ ಕಲಾ ನಿರ್ದೇಶಕ ಅರುಣ್ ಸಾಗರ್ ಪುತ್ರಿ ಅದಿತಿ ಸಾಗರ್ ಕಾಣಿಸಿಕೊಂಡಿದ್ದಾರೆ.

ಈಗಾಗಲೇ ಶಿವಣ್ಣ ಜೊತೆ ವೇದ ಸಿನಿಮಾದಲ್ಲಿ ಮಿಂಚಿರುವ ಅದಿತಿ ಇದೀಗ ಮೊದಲ ಬಾರಿಗೆ ಹೆಗ್ಗಣ ಮುದ್ದು ಮೂಲಕ ಪೂರ್ಣ ಪ್ರಮಾಣದ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಹೆಗ್ಗಣ ಮುದ್ದು ಪ್ರಸಿದ್ಧ ಗಾದೆ ಮಾತಿನಿಂದ ಸ್ಫೂರ್ತಿ ಪಡೆದು ಇಟ್ಟಿರುವ ಟೈಟಲ್. ಟೈಟಲ್ ನಿಂದನೇ ಸಿನಿಮಾದ ಕಥಾಹಂದರದ ಕುರಿತು ಕುತೂಹಲ ಹೆಚ್ಚಾಗಿದೆ. ಇದೊಂದು ಡ್ರಾಮ ಥ್ರಿಲ್ಲರ್ ಸಿನಿಮಾವಾಗಿದೆ. ಈ ಬಗ್ಗೆ ಮಾತನಾಡಿರುವ ನಿರ್ದೇಶಕ ಅವನಾಶ್, 'ಸಂಬಂಧಗಳ ಬಗ್ಗೆ ಇರುವ ಸಿನಿಮಾವಾಗಿದೆ. ಹೆತ್ತವರಿಗೆ ಹೆಗ್ಗಣ ಮುದ್ದು ಅಂತ ಹೇಗೆ ಹೇಳ್ತಿವೋ ಹಾಗೆ ಈ ಸಿನಿಮಾದಲ್ಲಿ ನನಗೆ ನಾನೆ ಮುದ್ದು ಎನ್ನುವುದನ್ನು ಹೇಳಲಾಗಿದೆ' ಎಂದು ಹೇಳಿದರು.

ಸೈಲೆಂಟ್ ಆಗಿಯೇ ಶೂಟಿಂಗ್ ಮುಗಿಸಿರುವ ಹೆಗ್ಗಣ ಮುದ್ದು ಸದ್ಯ ರಿಲೀಸ್ಗೆ ತಯಾರಿ ಮಾಡಿಕೊಳ್ಳುತ್ತಿದೆ. ಟೈಟಲ್ ಮತ್ತು ಮೋಷನ್ ಪೋಸ್ಟರ್ ರಿಲೀಸ್ ಮಾಡುವ ಮೂಲಕ ಕುತೂಹಲ ಹೆಚ್ಚಿಸಿರುವ ಹೆಗ್ಗಣ್ಣ ಮುದ್ದು ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ.



# ದೇವನೊಬ್ಬ ಜಾದೂಗಾರ ಟೀಸರ್ ರಿಲೀಸ್

ನಂಬಿಕೆ ಕಳೆದುಕೊಂಡಾಗ ನಮಗೆ ದೇವರ ನೆನಪಾಗುತ್ತದೆ ದೇವರು ನನ್ನ ಜೀವನದಲ್ಲಿ ಎಷ್ಟೆಲ್ಲ ಆಟ ಆಡಿದನಲ್ಲ ಎನಿಸಬಹುದು. ಆಗೆಲ್ಲ ನಾವು ದೇವನೊಬ್ಬ ಜಾದೂಗಾರ ಎಂದುಕೊಳ್ಳುತ್ತೇವೆ. ಈಗ ಖಟ್ವಾಂಗ ಸ್ಟುಡಿಯೋಸ್ ಬ್ಯಾನರ್ ನಲ್ಲಿ ಇದೇ ಹೆಸರನ್ನಿಟ್ಟು ಸಿನಿಮಾ ಒಂದು ಬರುತ್ತಿದೆ. ಸೌದಿ ಅರೇಬಿಯಾದಲ್ಲಿ ಉದ್ಯಮಿಯಾಗಿರುವ ಬಾಲಕೃಷ್ಣ ಶೆಟ್ಟಿ ಈ ಚಿತ್ರದ ನಿರ್ಮಾಣ ಮಾಡಿದ್ದಾರೆ. ದೊಡ್ಡ ತಾರಾಬಳಗವಿರೋ ಈ ಸಿನಿಮಾದ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ಬೆಂಗಳೂರಿನ ಉತ್ಸವ ಲೆಗಸಿಯಲ್ಲಿ ಅದ್ದೂರಿಯಾಗಿ ನಡೆಯಿತು. ಕನ್ನಡದ ಹೆಸರಾಂತ ನಟಿ ಶ್ವೇತಾ ಶ್ರೀವಾಸ್ತವ್ 'ದೇವನೊಬ್ಬ ಜಾದೂಗಾರ' ಟೀಸರ್ ಬಿಡುಗಡೆ ಮಾಡಿದರು. ನಿರ್ದೇಶಕ ಸಿಂಪಲ್ ಸುನಿ ಮತ್ತು ಬಿಗ್ ಬಾಸ್ ಖ್ಯಾತಿಯ ಹುಚ್ಚ ವೆಂಕಟ್ ಕಾರ್ಯಕ್ರಮಕ್ಕೆ ಆಗಮಿಸಿ ಚಿತ್ರಕ್ಕೆ ಶುಭ ಹಾರೈಸಿದರು.

'ನಿರ್ದೇಶಕ ವರುಣ್ ವಸಿಷ್ಠ ಅವರಿಗಾಗಿ ನಾನು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. ಸಿಂಪಲ್ ಆಗಿ ಒಂದ್ ಲವ್ ಸ್ಟೋರಿ ಸಿನಿಮಾ ದಿನದಿಂದ ನನಗೆ ವರುಣ್ ಪರಿಚಯ ಇದೆ. ಅಂದಿನಿಂದ ಅವರಿಗೆ ದೊಡ್ಡ ಸಿನಿಮಾ ನಿರ್ದೇಶನ ಮಾಡಬೇಕು ಎಂದು ಕನಸಿತ್ತು. ಇಂದು ಅದು ನಿಜವಾಗಿದೆ. ಇಂದು ಈ ಟೀಸರ್ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸುವಾಗ ನನಗೆ ಹೆಮ್ಮೆ ಎನಿಸುತ್ತದೆ. ಚಿತ್ರ ಉತ್ತಮವಾಗಿ ಹೆಸರು ತರಲಿ, ಭವಿಷ್ಯದಲ್ಲಿ ಮತ್ತಷ್ಟು ಒಳ್ಳೆಯ ಚಿತ್ರಗಳು ಈ ಬ್ಯಾನರ್ ನಲ್ಲಿ ಬರಲಿ ಎಂದು ಅವರು ಚಿತ್ರತಂಡಕ್ಕೆ ಶುಭ ಹಾರೈಸಿದರು. ಹೊಸ ವರ್ಷಕ್ಕೆ ಶುಭಾಶಯ ಕೋರುವುದರೊಡನೆ ಹೊಸ ಪ್ರತಿಭೆಗಳಿಗೆ ಹೊಸ ಪ್ರಯತ್ನಕ್ಕೆ ನಿರ್ದೇಶಕ ಸಿಂಪಲ್ ಸುನಿ ಮತ್ತು ಹುಚ್ಚ ವೆಂಕಟ್ ಶುಭಾಶಯ ಕೋರಿದರು ನಿರ್ಮಾಪಕ ಬಾಲಕೃಷ್ಣ ಶೆಟ್ಟಿ ಮಾತನಾಡಿ 'ನಾನು ಹಲವಾರು ವರ್ಷಗಳಿಂದ ವಿದೇಶದಲ್ಲಿ ಇದ್ದರೂ ನಾನು ಅಲ್ಲಿ ಕನ್ನಡ ಸಂಘ ಮಾಡಿದೆ. ಅನಿವಾಸಿ ಭಾರತೀಯರಿಗೆ ಮೊದಲ ಎನ್.ಆರ್.ಐ. ಸಂಘ ಕಟ್ಟಿದ್ದು ನಾನು. ಹಾಗೆ ನನಗೆ ಕನ್ನಡ ಎಂದರೆ ಬಹಳ ಅಭಿಮಾನ ಅಂತಹಾ ಸಮಯದಲ್ಲಿ ವರುಣ್ ನನ್ನ ಬಳಿ ಬಂದು ಕಥೆ ಹೇಳಿದರು.

# 16 ವರ್ಷಗಳ ಬಳಿಕ ಮುಂಬೈ ಇಂಡಿಯನ್ಸ್ ಫ್ರಾಂಚೈಸಿಗೆ ಫೈನಲ್ ಸೋಲು!

ಇಂಟರ್‌ನ್ಯಾಷನಲ್ ಲೀಗ್ ಟಿ20 ಟೂರ್ನಿಯ ಫೈನಲ್ ಪಂದ್ಯದಲ್ಲಿ ಎಂಐ ಎಮಿರೇಟ್ಸ್ ವಿರುದ್ಧ ಡೆಸರ್ಟ್ ವೈಪರ್ಸ್ ತಂಡ ಭರ್ಜರಿ ಜಯ ಸಾಧಿಸಿದೆ. ಅದು ಕೂಡ ಕೀರನ್ ಪೊಲಾರ್ಡ್ ಮುಂದಾಳತ್ವದ ಎಂಐ ಪಡೆಗೆ ಸೋಲುಣಿಸುವ ಮೂಲಕ ಎಂಬುದು ವಿಶೇಷ. ಇದರೊಂದಿಗೆ ಮುಂಬೈ ಇಂಡಿಯನ್ಸ್ ಫ್ರಾಂಚೈಸಿಯ ಗೆಲುವಿನ ನಾಗಾಲೋಟ ಕೂಡ ಕೊನೆಗೊಂಡಿದೆ. ಟಿ20 ಕ್ರಿಕೆಟ್ ಲೀಗ್ ಇತಿಹಾಸದ ಅತ್ಯಂತ ಯಶಸ್ವಿ ಫ್ರಾಂಚೈಸಿ ಎಂದರೆ ಅದು ಮುಂಬೈ ಇಂಡಿಯನ್ಸ್. ಏಕೆಂದರೆ ಈ ಫ್ರಾಂಚೈಸಿ ಕಣಕ್ಕಿಳಿದ ಪ್ರತಿಯೊಂದು ಲೀಗ್‌ನಲ್ಲೂ ಪ್ರಶಸ್ತಿ ಮುಡಿಗೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಈ ಮೂಲಕ ವಿಶ್ವದ ಪ್ರಮುಖ ಲೀಗ್‌ಗಳಲ್ಲಿ ಟ್ರೋಫಿ ಗೆದ್ದ ವಿಶ್ವದ ಏಕೈಕ ಫ್ರಾಂಚೈಸಿ ಎಂಬ ಹೆಗ್ಗಳಿಕೆಯನ್ನು ಸಹ ಮುಂಬೈ ಇಂಡಿಯನ್ಸ್ ತನ್ನದಾಗಿಸಿಕೊಂಡಿದೆ. ಅಂದರೆ ಕಳೆದ 16 ವರ್ಷಗಳಲ್ಲಿ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ 12 ಫೈನಲ್‌ಗಳನ್ನು ಆಡಿದೆ. ಈ ವೇಳೆ ಸೋತಿರುವುದು ಒಮ್ಮೆ ಮಾತ್ರ. ಅದು ಕೂಡ ಇಂಟರ್‌ನ್ಯಾಷನಲ್ ಲೀಗ್



ಡೆಸರ್ಟ್ ವೈಪರ್ಸ್ ತಂಡ ಯಶಸ್ವಿ

ಟಿ20 ಟೂರ್ನಿಯಲ್ಲಿ. ಅಂದರೆ ಕಳೆದ ಹದಿನಾರು ವರ್ಷಗಳಲ್ಲಿ ಫೈನಲ್ ಸೋಲು ಕಾಣದ ಇಂಡಿಯನ್ಸ್ ಫ್ರಾಂಚೈಸಿಗೆ ಸೋಲುಣಿಸುವಲ್ಲಿ ಡೆಸರ್ಟ್ ವೈಪರ್ಸ್ ತಂಡ ಯಶಸ್ವಿಯಾಗಿದೆ. ದುಬೈ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಇಂಟರ್‌ನ್ಯಾಷನಲ್ ಲೀಗ್ ಟಿ20 ಟೂರ್ನಿಯ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಡೆಸರ್ಟ್ ವೈಪರ್ಸ್ ತಂಡವು 20 ಓವರ್‌ಗಳಲ್ಲಿ 182 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಎಂಐ ಎಮಿರೇಟ್ಸ್ ತಂಡವು 18.3 ಓವರ್‌ಗಳಲ್ಲಿ 136 ರನ್‌ಗಳಿಸಿ ಆಲೌಟ್ ಆಗಿದೆ. ಈ ಮೂಲಕ ಡೆಸರ್ಟ್ ವೈಪರ್ಸ್ ತಂಡವು 46 ರನ್‌ಗಳ ಜಯ ಸಾಧಿಸಿ ಚೊಚ್ಚಲ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಈ ಚಾಂಪಿಯನ್ ಪಟ್ಟದೊಂದಿಗೆ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ತಂಡಕ್ಕೆ ಫೈನಲ್‌ನಲ್ಲಿ ಸೋಲುಣಿಸಿದ ಮೊದಲ ತಂಡವೆಂಬ ಹೆಗ್ಗಳಿಕೆಗೂ ಡೆಸರ್ಟ್ ವೈಪರ್ಸ್ ತಂಡ ಪಾತ್ರವಾಗಿದೆ. ಇದಕ್ಕೂ ಮುನ್ನ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಆಡಿದ ಫೈನಲ್ ಪಂದ್ಯಗಳ ಫಲಿತಾಂಶ ಈ ಕೆಳಗಿನಂತಿದೆ...

2008 ರಿಂದ ಐಪಿಎಲ್‌ನಲ್ಲಿ ಕಣಕ್ಕಿಳಿಯುತ್ತಿರುವ ಮುಂಬೈ ಇಂಡಿಯನ್ಸ್ ಚೊಚ್ಚಲ ಟ್ರೋಫಿ ಗೆದ್ದಿರುವುದು ಚಾಂಪಿಯನ್ಸ್ ಲೀಗ್ ಟಿ20 ಟೂರ್ನಿಯಲ್ಲಿ. 2011 ರಲ್ಲಿ ನಡೆದ ಈ ಟೂರ್ನಿಯಲ್ಲಿ ಮುಂಬೈ ಪಡೆ ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ಇದಾದ ಬಳಿಕ 2013 ರಲ್ಲೂ ಚಾಂಪಿಯನ್ಸ್ ಲೀಗ್ ಟ್ರೋಫಿ ಗೆಲ್ಲುವಲ್ಲಿ ಯಶಸ್ವಿಯಾಯಿತು. ಇನ್ನು ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ಮೊದಲ ಟ್ರೋಫಿ ಗೆದ್ದಿದ್ದು 2013 ರಲ್ಲಿ. ಆ ಬಳಿಕ 2015, 2017, 2019 ಮತ್ತು 2020 ರಲ್ಲಿ ಟ್ರೋಫಿ ಎತ್ತಿ ಹಿಡಿಯುವಲ್ಲಿ ಮುಂಬೈ ಇಂಡಿಯನ್ಸ್ ಯಶಸ್ವಿಯಾಗಿದೆ. ಈ ಮೂಲಕ ಐಪಿಎಲ್‌ನ ಅತ್ಯಂತ ಯಶಸ್ವಿ ತಂಡಗಳಲ್ಲಿ ಒಂದೆನಿಸಿಕೊಂಡಿದೆ. ವುಮೆನ್ಸ್ ಪ್ರೀಮಿಯರ್ ಲೀಗ್‌ನಲ್ಲೂ ಮುಂಬೈ ಇಂಡಿಯನ್ಸ್ ತಂಡ ಟ್ರೋಫಿ ಎತ್ತಿ ಹಿಡಿಯುವಲ್ಲಿ ಯಶಸ್ವಿಯಾಗಿದೆ. 2023 ರಲ್ಲಿ ನಡೆದ ಈ ಟೂರ್ನಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮಹಿಳಾ ತಂಡವನ್ನು ಸೋಲಿಸಿ ಮುಂಬೈ ಇಂಡಿಯನ್ಸ್ ವನಿತಾ ಪಡೆ ಚೊಚ್ಚಲ ಕಿರೀಟ ಮುಡಿಗೇರಿಸಿಕೊಂಡಿದೆ. ಇನ್ನು ಅಮೆರಿಕದಲ್ಲಿ ನಡೆಯುವ ಮೇಜರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲೂ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಒಡೆತನದ ಎಂಐ ನ್ಯೂಯಾರ್ಕ್ ತಂಡ ಕಣಕ್ಕಿಳಿಯುತ್ತಿದೆ.

# ವಿಶ್ವ ದಾಖಲೆಯತ್ತ ಮುನ್ನುಗ್ಗಿದ ಜೋ

ಆಶಸ್ ಸರಣಿಯ 5ನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ತಂಡವು ಜೋ ರೂಟ್ ಅವರ ಶತಕದ ನೆರವಿನೊಂದಿಗೆ ಪ್ರಥಮ ಇನಿಂಗ್ಸ್‌ನಲ್ಲಿ 384 ರನ್ ಕಲೆಹಾಕಿದೆ. ಇದಕ್ಕುತ್ತರವಾಗಿ ಮೊದಲ ಇನಿಂಗ್ಸ್ ಆಡುತ್ತಿರುವ ಆಸ್ಟ್ರೇಲಿಯಾ ತಂಡ 22 ಓವರ್‌ಗಳ ಮುಕ್ತಾಯದ ವೇಳೆಗೆ 1 ವಿಕೆಟ್ ಕಳೆದುಕೊಂಡು 112 ರನ್ ಕಲೆಹಾಕಿದೆ.

ಆಶಸ್ ಸರಣಿಯ 5ನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್ ನಲ್ಲಿ ಜೋ ರೂಟ್ ಭರ್ಜರಿ ಶತಕ ಸಿಡಿಸಿದ್ದಾರೆ. ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ವಿರುದ್ಧದ ಈ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಬ್ಯಾಟಿಂಗ್ ಆಯ್ದುಕೊಂಡಿದ್ದರು. ಅದರಂತೆ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡವು ಉತ್ತಮ ಆರಂಭ ಪಡೆದಿರಲಿಲ್ಲ. ಕೇವಲ 57 ರನ್ ಗಳಿಸುವಷ್ಟರಲ್ಲಿ ಅಗ್ರ ಕ್ರಮಾಂಕದ ಮೂವರು ಬ್ಯಾಟರ್ ಗಳು ಪೆವಿಲಿಯನ್ ಗೆ ಮರಳಿದ್ದರು. ಈ ಹಂತದಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಜೋ ರೂಟ್, ಹ್ಯಾರಿ ಬ್ರೂಕ್ ಜೊತೆಗೂಡಿ ಇನಿಂಗ್ಸ್ ಕಟ್ಟಿದರು. ಪರಿಣಾಮ 5ನೇ ವಿಕೆಟ್‌ಗೆ 169 ರನ್ ಗಳ ಜೊತೆಯಾಟ ಮೂಡಿಬಂತು.

ಇದರ ನಡುವೆ 97 ಎಸೆತಗಳಲ್ಲಿ 1 ಸಿಕ್ಸ್ ಹಾಗೂ 6 ಫೋರ್ ಗಳೊಂದಿಗೆ 84 ರನ್ ಬಾರಿಸಿದ ಹ್ಯಾರಿ ಬ್ರೂಕ್ ಔಟಾದರು. ಇದಾಗ್ಯೂ ಮತ್ತೊಂದೆಡೆ ಜವಾಬ್ದಾರಿಯುತ ಇನಿಂಗ್ಸ್ ಕಟ್ಟಿದ ಜೋ ರೂಟ್ ಆಕರ್ಷಕ ಶತಕ ಪೂರೈಸಿದರು. ಈ ಶತಕದೊಂದಿಗೆ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ಅತ್ಯಧಿಕ ಸೆಂಚುರಿ ಸಿಡಿಸಿದ ವಿಶ್ವದ ಮೂರನೇ ಬ್ಯಾಟರ್ ಎನಿಸಿಕೊಂಡರು. ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವುದು ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್. ಸಚಿನ್ ತೆಂಡೂಲ್ಕರ್ ಟೆಸ್ಟ್ ಕ್ರಿಕೆಟ್‌ನಲ್ಲಿ ಒಟ್ಟು 51 ಶತಕ ಬಾರಿಸಿದ್ದಾರೆ. ಸೌತ್ ಆಫ್ರಿಕಾದ ಜಾಕ್ಸ್ ಕಾಲಿಸ್ ಈ ಪಟ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿದ್ದು, ಒಟ್ಟು 45 ಸೆಂಚುರಿ ಸಿಡಿಸಿದ್ದಾರೆ.

ಜೋ ರೂಟ್ 41 ಟೆಸ್ಟ್ ಶತಕಗಳೊಂದಿಗೆ ಇದೀಗ ಈ ಪಟ್ಟಿಯಲ್ಲಿ ಮೂರನೇ ಸ್ಥಾನ ಅಲಂಕರಿಸಿದ್ದಾರೆ.



ಜೋ ರೂಟ್ ಆಕರ್ಷಕ ಶತಕ

# ಟೀಮ್ ಇಂಡಿಯಾಗೆ 15 ದಿನಗಳ ಕ್ಯಾಂಪ್..!



ಭಾರತ ತಂಡವು ಈ ವರ್ಷ ಆಡಲಿರುವುದು ಕೇವಲ 4 ಟೆಸ್ಟ್ ಪಂದ್ಯಗಳನ್ನು ಮಾತ್ರ.

ಆಗಸ್ಟ್‌ನಲ್ಲಿ ಟೀಮ್ ಇಂಡಿಯಾ ಶ್ರೀಲಂಕಾ ವಿರುದ್ಧ 2 ಪಂದ್ಯಗಳ ಟೆಸ್ಟ್ ಸರಣಿ ಆಡಲಿದೆ. ಇದಾದ ಬಳಿಕ ಭಾರತ ತಂಡವು ನ್ಯೂಝಿಲೆಂಡ್ ವಿರುದ್ಧ 2 ಮ್ಯಾಚ್‌ಗಳ ಟೆಸ್ಟ್ ಸರಣಿಯಲ್ಲಿ ಕಣಕ್ಕಿಳಿಯಲಿದೆ. ಈ ಸರಣಿಗಳಿಗೂ ಮುನ್ನ ವಿಶೇಷ ಶಿಬಿರ ಆಯೋಜಿಸಲು ಬಿಸಿಸಿಐ ಗ್ರೀನ್ ಸಿಗ್ನಲ್ ನೀಡಿದೆ. ಪ್ರತಿ ಟೆಸ್ಟ್ ಸರಣಿಗೂ ಮುನ್ನ ಭಾರತ ತಂಡದ ಆಟಗಾರರು 15 ದಿನಗಳ ಅಭ್ಯಾಸ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಇಂತಹದೊಂದು ವಿಶೇಷ ಯೋಜನೆಗೆ ಮನವಿ ಮಾಡಿರುವುದು ಟೀಮ್ ಇಂಡಿಯಾದ ನಾಯಕ ಶುಭ್ ಮನ್ ಗಿಲ್. ಪ್ರತಿ ಟೆಸ್ಟ್ ಸರಣಿಗೂ ಮುನ್ನ ಕ್ಯಾಂಪ್ ಆಯೋಜಿಸುವಂತೆ ಗಿಲ್ ಬಿಸಿಸಿಐಗೆ ಮನವಿ ಮಾಡಿದ್ದಾರೆ. ಭಾರತ ಟೆಸ್ಟ್ ತಂಡದ ನಾಯಕನ ಈ ಮನವಿಗೆ ಬಿಸಿಸಿಐ ಕಡೆಯಿಂದಲೂ ಗ್ರೀನ್ ಸಿಗ್ನಲ್ ಸಿಕ್ಕಿದೆ ಎಂದು ವರದಿಯಾಗಿದೆ. ಅದರಂತೆ ಮುಂಬರುವ ಟೆಸ್ಟ್ ಸರಣಿಗಳಿಗೂ ಮುನ್ನ ಟೀಮ್ ಇಂಡಿಯಾ 15 ದಿನಗಳ ಅಭ್ಯಾಸ ಶಿಬಿರಗಳನ್ನು ಆಯೋಜಿಸಲಿದೆ.

ಈ ಯೋಜನೆಗಳ ಮೂಲಕ ಬಲಿಷ್ಠ ಟೆಸ್ಟ್ ತಂಡವನ್ನು ರೂಪಿಸುವ ಇರಾದೆಯಲ್ಲಿದ್ದಾರೆ ಶುಭ್‌ಮನ್ ಗಿಲ್. ಟೀಮ್ ಇಂಡಿಯಾ ಕೋಚ್ ಗೌತಮ್ ಗಂಭೀರ್ ಗರಡಿಯಲ್ಲಿ ಭಾರತ ತಂಡವು ಏಕದಿನ ಮತ್ತು ಟಿ20 ಸರಣಿಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡುತ್ತಾ ಬಂದಿದೆ. ಇದಾಗ್ಯೂ ಟೆಸ್ಟ್ ಸರಣಿಗಳಲ್ಲಿ ಟೀಮ್ ಇಂಡಿಯಾ ಪ್ರದರ್ಶನ ಅಷ್ಟಕ್ಕಷ್ಟೇ. ಅದರಲ್ಲೂ ಇತ್ತೀಚೆಗೆ ನಡೆದ ಸೌತ್ ಆಫ್ರಿಕಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಭಾರತ ತಂಡವು 2-0 ಅಂತರದಿಂದ ಸೋಲನುಭವಿಸಿತ್ತು. ಇದಕ್ಕೂ ಮುನ್ನ ನ್ಯೂಝಿಲೆಂಡ್ ವಿರುದ್ಧ 3-0 ಅಂತರದಿಂದ ಹೀನಾಯವಾಗಿ ಭಾರತ ತಂಡ ಸೋಲೊಪ್ಪಿಕೊಂಡಿತ್ತು. ಅದು ಕೂಡ 93 ವರ್ಷಗಳ ಬಳಿಕ ಎಂಬುದು ಕಟು ವಾಸ್ತವ. ಅಂದರೆ 93 ವರ್ಷಗಳ ಟೆಸ್ಟ್ ಇತಿಹಾಸದಲ್ಲಿ ಭಾರತ ತಂಡವು ತವರಿನಲ್ಲಿ ಮೂರು ಪಂದ್ಯಗಳ ಸರಣಿಯನ್ನು 3-0 ಅಂತರದಿಂದ ಸೋತಿರಲಿಲ್ಲ.

# ಹೊಸ ಇತಿಹಾಸ ನಿರ್ಮಿಸಿದ ಕ್ರಿಸ್ ಲಿನ್



200 ಕ್ಕೂ ಅಧಿಕ ಸಿಕ್ಸರ್

ಬಿಗ್ ಬ್ಯಾಷ್ ಲೀಗ್‌ನಲ್ಲಿ ಆಸ್ಟ್ರೇಲಿಯಾ ತಂಡದ ಬ್ಯಾಟರ್ ಕ್ರಿಸ್ ಲಿನ್ ಹೊಸ ಮೈಲುಗಲ್ಲು ದಾಟಿದ್ದಾರೆ. ಅದು ಕೂಡ 226 ಸಿಕ್ಸ್ ಹಾಗೂ 336 ಫೋರ್‌ಗಳನ್ನು ಬಾರಿಸುವ ಮೂಲಕ. ಈ ಸಿಡಿಲಬ್ಬರದ ಬ್ಯಾಟಿಂಗ್‌ನೊಂದಿಗೆ ಕ್ರಿಸ್ ಲಿನ್ ಬಿಬಿಎಲ್ ಟೂರ್ನಿಯಲ್ಲಿ 4 ಸಾವಿರ ರನ್ ಪೂರೈಸಿದ ಮೊದಲ ಬ್ಯಾಟರ್ ದಾಖಲೆ ನಿರ್ಮಿಸಿದ್ದಾರೆ. ಬಿಗ್ ಬ್ಯಾಷ್ ಲೀಗ್‌ನಲ್ಲಿ ಸ್ಫೋಟಕ ದಾಂಡಿಗ ಕ್ರಿಸ್ ಲಿನ್ ಹೊಸ ಇತಿಹಾಸ ನಿರ್ಮಿಸಿದ್ದಾರೆ.

ಈ ಬಾರಿಯ ಟೂರ್ನಿಯಲ್ಲಿ ಅಡಿಲೇಡ್ ಸ್ಟ್ರೈಕರ್ಸ್ ಪರ ಕಣಕ್ಕೆ ಇಳಿಯುತ್ತಿರುವ ಲಿನ್ ಈವರೆಗೆ ಒಟ್ಟು 111 ರನ್ ಕಲೆಹಾಕಿದ್ದಾರೆ. ಈ ರನ್‌ಗಳೊಂದಿಗೆ ಬಿಗ್ ಬ್ಯಾಷ್ ಲೀಗ್ ಇತಿಹಾಸದಲ್ಲಿ 4 ಸಾವಿರ ರನ್‌ಗಳನ್ನು ಪೂರೈಸಿದ ಮೊದಲ ಬ್ಯಾಟರ್ ಎನಿಸಿಕೊಂಡಿದ್ದಾರೆ.

ಬಿಬಿಎಲ್‌ನಲ್ಲಿ ಈವರೆಗೆ 132 ಪಂದ್ಯಗಳನ್ನಾಡಿರುವ ಕ್ರಿಸ್ ಲಿನ್ 1 ಶತಕ ಹಾಗೂ 32 ಅರ್ಧಶತಕಗಳೊಂದಿಗೆ 4066 ರನ್ ಕಲೆಹಾಕಿದ್ದಾರೆ. ವಿಶೇಷ ಎಂದರೆ ಕ್ರಿಸ್ ಲಿನ್ ಅವರನ್ನು ಹೊರತುಪಡಿಸಿ ಬಿಗ್ ಬ್ಯಾಷ್ ಲೀಗ್‌ನಲ್ಲಿ ಯಾವುದೇ ಬ್ಯಾಟರ್ 4 ಸಾವಿರ ರನ್‌ಗಳ ಗಡಿ ತಲುಪಿಲ್ಲ. ಈ ಪಟ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿರುವುದು ಆಸ್ಟ್ರೇಲಿಯಾ ತಂಡದ ಮಾಜಿ ನಾಯಕ ಆರೋನ್ ಫಿಂಚ್.

ಮೆಲ್ಬೋರ್ನ್ ರೆನೆಗೇಡ್ಸ್ ಪರ ಬರೋಬ್ಬರಿ 107 ಪಂದ್ಯಗಳನ್ನಾಡಿರುವ ಆರೋನ್ ಫಿಂಚ್ 105 ಇನಿಂಗ್ಸ್‌ಗಳ ಮೂಲಕ 2 ಭರ್ಜರಿ ಶತಕ ಹಾಗೂ 26 ಅರ್ಧಶತಕಗಳನ್ನು ಸಿಡಿಸಿದ್ದಾರೆ. ಈ ಮೂಲಕ ಒಟ್ಟು 3311 ರನ್‌ಗಳಿಸಿ ಬಿಗ್ ಬ್ಯಾಷ್ ಲೀಗ್‌ನಲ್ಲಿ ಅತ್ಯಧಿಕ ರನ್ ಕಲೆಹಾಕಿದ 2ನೇ ಬ್ಯಾಟರ್ ಎನಿಸಿಕೊಂಡಿದ್ದಾರೆ. ಇದೀಗ 130 ಇನಿಂಗ್ಸ್‌ಗಳ ಮೂಲಕ ಕ್ರಿಸ್ ಲಿನ್ ಒಟ್ಟು 4066 ರನ್‌ಗಳಿಸಿದ್ದಾರೆ. ಈ ಮೂಲಕ ಬಿಬಿಎಲ್‌ನಲ್ಲಿ 4 ಸಾವಿರ ರನ್‌ಗಳಿಸಿದ ಮೊದಲ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ಬಿಗ್ ಬ್ಯಾಷ್ ಲೀಗ್‌ನಲ್ಲಿ 200 ಕ್ಕೂ ಅಧಿಕ ಸಿಕ್ಸರ್ ಬಾರಿಸಿದ ಪ್ರಥಮ ಬ್ಯಾಟರ್ ಎಂಬ ಹೆಗ್ಗಳಿಕೆಗೂ ಕ್ರಿಸ್ ಲಿನ್ ಪಾತ್ರರಾಗಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966